ಏಳನೇ ವರ್ಷಕ್ಕೆ

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೮ ಸಂಪುಟ: ೭ ಸಂಚಿಕೆ: ೧

ಸಂಪಾದಕ : ಡಿ.ಎಸ್.ನಾಗಭೂಷಣ

ವಾರ್ಷಿಕ ಚಂದಾ ರೂ. ೨೦೦/- (ವ್ಯಕ್ತಿಗಳಿಗೆ) ರೂ ೪೦೦/- (ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಿಮ್ಮ ಪತ್ರಿಕೆ ಈ ಸಂಚಿಕೆಯೊಂದಿಗೆ ತನ್ನ ಏಳನೇ ವರ್ಷಕ್ಕೆ ಕಾಲಿಡುತ್ತಿದೆ. ಇದು ಪತ್ರಿಕೆ ಇತ್ತೀಚೆಗೆ ಬಿಡುವು ತೆಗೆದುಕೊಂಡ ಆರು ತಿಂಗಳನ್ನು ಬಿಟ್ಟು, ಅಂದರೆ ಇದು ನಮ್ಮ ೭೫ನೇ ಮಾಸಿಕ ಸಂಚಿಕೆ. ನಿಮ್ಮ ಪ್ರೀತಿ-ವಿಶ್ವಾಸ-ಸಹಕಾರಗಳಿಂದಷ್ಟೇ ಇದು ಸಾಧ್ಯವಾಗಿದೆ. ಕಳೆದ ೭೨ ಸಂಚಿಕೆಗಳು ಓದುಗರ ಬಾಳಿಗೆ ಅರ್ಥಪೂರ್ಣ ಮತ್ತು ಉಪಯುಕ್ತ ಎನ್ನಿಸಿದ್ದರಿಂದಲೇ ನಿಮ್ಮ ಈ ಪ್ರೀತಿ-ವಿಶ್ವಾಸ-ಸಹಕಾರಗಳು ಲಭ್ಯವಾಗಿವೆ ಎಂದು ನಾನು ಭಾವಿಸಿದ್ದೇನೆ. ಪತ್ರಿಕೆಯ ಬಳಗದ ಪರವಾಗಿ ನಿಮಗೆಲ್ಲರಿಗೆ ಧನ್ಯವಾದಗಳು.

ರಾಜ್ಯ ವಿಧಾನ ಸಭಾ ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ದಿನ ನಿತ್ಯ ರಾಜಕೀಯ ವಾಗ್ವಾದಗಳು ಚುರುಕಾಗುತ್ತಿವೆ, ಬಿರುಸುಗೊಳ್ಳುತ್ತಿವೆ. ರಾಜ್ಯದ ಮೂರೂ ಪಕ್ಷಗಳ ನಾಯಕರಿಂದ ಪರಸ್ಪರ ಕೆಸರೆರಚಾಟ ತೀವ್ರಗತಿಯನ್ನು ಮುಟ್ಟಿದೆ. ಇದಕ್ಕೆಂದೇ, ಭಾಜಪದ ರಾಷ್ಟ್ರೀಯ ನಾಯಕತ್ವ ಅನಂತಕುಮಾರ್ ಹೆಗಡೆ ಎಂಬ ಮುತ್ತೊಂದನ್ನು ಆರಿಸಿ ಕೇಂದ್ರ ಮಂತ್ರಿಯನ್ನಾಗಿ ಮಾಡಿ ರಾಜ್ಯಾದ್ಯಂತ ವಿಷಗಾಳಿ ಬಿತ್ತುವ ಕಾಯಕಕ್ಕಾಗಿ ಕಳಿಸಿದೆ. ಅವರು ಅದನ್ನು ಬಹುನಿಷ್ಠೆಯಿಂದ ಮಾಡುತ್ತಿದ್ದಾರೆ. ಆದರೆ ಜನರ ವಿವೇಕವನ್ನು ನಂಬದ ಕಾಂಗ್ರೆಸ್, ಕಳ್ಳನ ಮನಸ್ಸು ಹುಳ್ಳಗೆ ಎಂಬಂತೆ ಅವರಿಗೆ ಉತ್ತರಕೊಡಲು ಹೋಗಿ ಹಾಸ್ಯಾಸ್ಪದರಾಗುತ್ತಿದ್ದಾರೆ; ಹೆಗಡೆಯವರಿಗೆ ಇದರಿಂದ ಇನ್ನಷ್ಟು ಪ್ರಚೋದನೆ ಸಿಕ್ಕಂತಾಗುತ್ತಿದೆ. ಕಾಂಗ್ರೆಸ್ ನಾಯಕರು ತಮ್ಮ ಈವರೆಗಿನ ತಪ್ಪನ್ನು ತಿದ್ದಿಕೊಳ್ಳಲೆಂಬಂತೆ ಈಗ ತಮ್ಮನ್ನು ತಾವು ಹೊಸದಾಗಿ ಹಿಂದೂಗಳೆಂದು ಕರೆದುಕೊಳ್ಳಲಾರಂಭಿಸಿರುವುದು ತಾವು ಸೆಕ್ಯುಲರಿಸಂನ್ನು ಈವರೆಗೆ ಅರ್ಥೈಸುತ್ತಾ ಬಂದ ಪರಿ ತಪ್ಪೆಂದು ಅರ್ಥ ಒಪ್ಪಿಕೊಂಡಂತಾಗಿದೆ. ಆದರೆ ಈಗ ಅವರು ಬಿಜೆಪಿಯ ಕಠಿಣ ಹಿಂದುತ್ವವಾದವನ್ನು ಎದುರಿಸಲು ಮೃದು ಹಿಂದುತ್ವಕ್ಕೆ ಮೊರೆ ಹೋಗಲು ಪ್ರಯತ್ನಿಸುತ್ತಿರುವುದು ಮತ್ತೆ ಸೆಕ್ಯುಲರಿಸಂ ತತ್ವವನ್ನು ವಿರೂಪಗೊಳಿಸುವ ಪ್ರಯತ್ನವೇ ಅಗಿದೆ.

ಹಿಂದುತ್ವ ರಾಜಕಾರಣ ಏಕೆ ಪ್ರಬಲವಾಯಿತು ಎಂಬ ಪ್ರಶ್ನೆಯ ಮೂಲಕ್ಕೆ ಹೋಗದ ಕಾಂಗ್ರೆಸ್ಸಿಗರಿಗೆ, ಅದನ್ನು ಸ್ವಚ್ಛ ಮತ್ತು ದಕ್ಷ ಆಡಳಿತದಿಂದ ಮಾತ್ರ ಎದುರಿಸಲು ಸಾಧ್ಯ ಎಂಬುದು ಗೊತ್ತಾಗಲಾರದು. ಈವರೆಗೆ ರಾಜ್ಯದ ಆದಾಯದ ಗಣನೀಯ ಭಾಗವನ್ನು ಬಡವರನ್ನು ಭಿಕ್ಷುಕರನ್ನಾಗಿ ಕಾಣುವ ಮತ್ತು ಮಾಡುವ 'ಭಾಗ್ಯ'ಗಳ ಸುರಿಮಳೆಯನ್ನೇ ಜನಪರ ಆಡಳಿತವೆಂದೂ, ಸಮಾಜವನ್ನು ಜಾತಿಗಳ ಸಮೂಹವೆಂದು ನೋಡಿ ಅವುಗಳನ್ನು ಓಲೈಸುವ ಕಾರ್ಯಕ್ರಮಗಳನ್ನೇ ಸಾಮಾಜಿಕ ನ್ಯಾಯದ ಆಡಳಿತವೆಂದೂ ಭಾವಿಸಿರುವಂತೆ ತೋರುವ ಸಿದ್ಧರಾಮಯ್ಯನವರ ಸರ್ಕಾರ ಸದಾಶಿವ ಆಯೋಗ ವರದಿ, ಪರಿಶಿಷ್ಟರ ಬಡ್ತಿ ಮೀಸಲಾತಿ ಮತ್ತು ಅಕ್ರಮ ಗಣಿಗಾರಿಕೆಯ ಪ್ರಸಂಗಗಳನ್ನು ಅಧಿಕಾರಾವಧಿಯ ಕೊನೆಯ ನಿಮಿಷದಲ್ಲಿ ನಿರ್ವಹಿಸುತ್ತಿರುವ ಗೊಂದಲದ ರೀತಿ ನೋಡಿದರೆ ಜನರ ತೀರ್ಮಾನ ಏನಾಗುವುದೋ ಎಂದು ಭಯವಾಗುತ್ತದೆ. ಏಕೆಂದರೆ, ಹರಿದು ಚಿಂದಿಯಾಗಿ ಆತ್ಮ ವಿಶ್ವಾಸವನ್ನೇ ಕಳೆದುಕೊಂಡಿದ್ದ ರಾಜ್ಯ ಬಿಜೆಪಿ ಈಗ ಒಟ್ಟಾಗಿ ಎದ್ದು ನಿಂತು ಸವಾಲು ಒಡ್ಡುತ್ತಿರುವ ಪರಿ ಆಶ್ಚರ್ಯವನುಂಟು ಮಾಡುತ್ತಿದೆ. ಈ ಪರಿವರ್ತನೆಯ ಹಿಂದೆ ಇರುವುದು ಅಮಿತ್ ಶಾ ಎಂಬ ಪ್ರಳಯಾಂತಕ ರಾಜಕಾರಣಿ ಎಂಬುದು ನೆನಪಿರಲಿ. ಜೊತೆಗೆ, ಹೆಸರಿನಲ್ಲಿ 'ಜಾತ್ಯತೀತ'ವೆಂಬುದಿದ್ದರೂ ವ್ಯವಹಾರದಲ್ಲಿ ಅವಕಾಶವಾದವನ್ನೇ ತನ್ನ ಸಿದ್ಧಾಂತವನ್ನಾಗಿ ಮಾಡಿಕೊಂಡಿರುವುದನ್ನು ಹಲವು ಸಂದರ್ಭಗಳಲ್ಲಿ ಸಾಬೀತು ಮಾಡಿರುವ ಜೆಡಿಎಸ್ ಎಂಬ ಕೌಟುಂಬಿಕ ಪಕ್ಷ ಅತಂತ್ರ ರಾಜಕೀಯ ಪರಿಸ್ಥಿತಿಯಲ್ಲಿ ಎಂತಹ ರಾಜಕಾರಣ ಮಾಡಲೂ ಹೇಸದೆಂಬ ಆತಂಕವೂ ಈ ಭಯವನ್ನು ಹೆಚ್ಚಿಸಿದೆ. ಮೂಢ ಗೋಮೂತ್ರ ಪಡೆ ಎಲ್ಲಿ ವಿಜಯ ಯಾತ್ರೆ ನಡೆಸಿ ಕರ್ನಾಟಕದ ವಿವೇಕವನ್ನು ಶತಮಾನಗಳ ಹಿಂದಕ್ಕೆ ಎಳೆದೊಯ್ಯುವುದೋ ಎಂಬ ಆತಂಕ ಬರೀ ಜನತೆಯನ್ನಲ್ಲ, ಮೂರೂ ಪಕ್ಷಗಳಲ್ಲಿ ಇನ್ನೂ ಉಳಿದಿದ್ದಾರೆಂದು ನಾವು ಆಶಿಸಿರುವ ವಿವೇಕಿ ನಾಯಕರನ್ನೂ ಕಾಡಬೇಕು. ವಿಶೇಷವಾಗಿ ಕಾಂಗ್ರೆಸ್ ಪಕ್ಷ ಇನ್ನೂ ಕಾಲಮಿಂಚಿಲ್ಲ ಎಂಬ ವಿಶ್ವಾಸದಲ್ಲಿ ಆಡಳಿತದ ತನ್ನ ದಿಕ್ಕು, ಗತಿ ಮತ್ತು ವೈಖರಿಗಳನ್ನು ಬದಲಾಯಿಸಿಕೊಳ್ಳಬೇಕು. ಸಿದ್ಧರಾಮಯ್ಯನವರ ವೈಯಕ್ತಿಕ ರಾಜಕಾರಣದ ಶೈಲಿ ಮೊದಲು ಬದಲಾಗಬೇಕು ಅವರು ಸರ್ಕಾರದೆರಡು ಜೀವ ಕೇಂದ್ರಗಳಾದ ಲೋಕಾಯುಕ್ತ ಮತ್ತು ಕೆಪಿಎಸ್‌ಸಿಯನ್ನು ನಿಶ್ಚೇಷ್ಟಿತಗೊಳಿಸಿದ ಬಗೆಯನ್ನು ಜನ ಮರೆತಿಲ್ಲ. ಕೊನೆಯ ಪ್ರಯತ್ನಗಳು ಸದುದ್ದೇಶಿತವಾಗಿದ್ದರೆ ಜನ ಹಳೆಯ ತಪ್ಪುಗಳನ್ನು ಮರೆತಾರು.

ಕರ್ನಾಟಕದ ದುರಂತವೆಂದರೆ, ರಾಜ್ಯದ ಮೂರೂ ಪ್ರಮುಖ ಪಕ್ಷಗಳ ಸೋಗಲಾಡಿ ರಾಜಕಾರಣ ಸಾಕಷ್ಟು ವರ್ಷಗಳಿಂದ ಚಾಲ್ತಿಯಲ್ಲಿದ್ದರೂ, ಪರ್ಯಾಯ ರಾಜಕಾರಣದ ಚಿಂತನೆ ಒಂದು ವಿಶ್ವಾಸಾರ್ಹ ರಾಜಕೀಯ ಪಕ್ಷವಾಗಿ ಸಾಕಾರವಾಗಲು ಸಾಧ್ಯವಾಗದಿರುವುದು. ಚುನಾವಣಾ ಸಂದರ್ಭದಲ್ಲಿ ಸಮಯದ ಲಾಭ ಪಡೆಯಲು ಎಂದಿನಂತೆ ಒಂದಷ್ಟು ಪುಡಿಪಕ್ಷಗಳು ಹುಟ್ಟಿಕೊಳ್ಳುತ್ತಿವೆ. ಆದರೆ ಪ್ರಚಲಿತ ರಾಜಕಾರಣಕ್ಕೆ ಗಂಭೀರ ಸವಾಲೊಡ್ಡಬಲ್ಲ ಪ್ರಯತ್ನವೇ ಕಾಣದಾಗಿದೆ. ಚಿಂತಕರಾಗಿ ದೇವನೂರ ಮಹಾದೇವ ರಾಜ್ಯಾದ್ಯಂತ ವಿಶ್ವಾಸಾರ್ಹತೆ ಉಳಿಸಿಕೊಂಡಿದ್ದರೂ. ಅವರ 'ಸರ್ವೋದಯ ಕರ್ನಾಟಕ'ದಂತೆಯೇ ಅವರ ಹೊಸ 'ಸ್ವರಾಜ್ ಇಂಡಿಯಾ' ಪಕ್ಷವು ನೆಲಬಿಟ್ಟು ಮೇಲೇಳದಾಗಿದೆ. ಅವರ ಕಣ್ಣು ಸದಾ ದೂರ ನೆಟ್ಟಿರುವಂತಹದು. ಆದರೆ ಅವರೇ ಈ ಸಂಚಿಕೆಯಲ್ಲಿನ ಸಂದರ್ಶನದಲ್ಲಿ ಹೇಳುವ ಹಾಗೆ ರಾಷ್ಟ್ರದ ರಾಜಕೀಯ ಪರಿಸ್ಥಿತಿ ಬಹು ಆತಂಕಕಾರಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವ್ಯವಧಾನ ಅಪರಾಧವೇ ಆಗುತ್ತದೆ. ಅವರು ನಂಬಿರುವಂತೆ ತೋರುವ ರಾಜಕೀಯ ಅಧ್ಯಾತ್ಮಿಕತೆ ಹಾಸ್ಯಾಸ್ಪದವಾಗಿಬಿಡುತ್ತದೆ. ಅವರ ಚರ್ಯೆ ಬದಲಾಗಿ ವಿಶ್ವಾಸಾರ್ಹವೆನಿಸಿದರೆ ಜನ ತಾವಾಗಿಯೇ ಅವರತ್ತ ಬರುತ್ತಾರೆ.

ಇತ್ತೀಚೆಗೆ ನಮ್ಮ ಸರ್ವೋನ್ನತ ನ್ಯಾಯಾಲಯದ ನಾಲ್ವರು ಹಿರಿಯ ನ್ಯಾಯಾಧೀಶರು ತಮ್ಮ ಅಚ್ಚರಿ ಹುಟ್ಟಿಸುವ ಐತಿಹಾಸಿಕ ಪತ್ರಿಕಾ ಗೋಷ್ಠಿಯಲ್ಲಿ ಆಡಿರುವ ಮಾತುಗಳು, ನೀಡಿರುವ ಅಪಾಯದ ಸೂಚನೆಗಳು ಯಾರಿಗಾದರೂ ಗಾಬರಿ ಹುಟ್ಟಿಸುವಂತಿವೆ. ಪ್ರಜಾಸತ್ತೆ ಅಪಾಯದಲ್ಲಿದೆ, ಅದಕ್ಕೆ ಆತ್ಯಂತಿಕ ಆಧಾರವಾದ ನ್ಯಾಯಾಂಗವೇ ರಾಜಕೀಯ ಮಾಲಿನ್ಯದ ಆತಂಕಕ್ಕೆ ಸಿಕ್ಕಿದೆ ಎಂದು ಅದರ ಪರಮೋನ್ನತ ರಕ್ಷಕರೇ ಹೇಳುವ ಸ್ಥಿತಿ ಬಂದಿದೆ ಎಂದರೆ, ದೇಶ ಎಂತಹ ಪ್ರಪಾತದತ್ತ ಸಾಗುತ್ತಿದೆ ಎಂಬುದು ನಮಗೆ ಅರಿವಾಗಬೇಕು. ಇವರ ಈ ಮಾತುಗಳನ್ನು ಸ್ವತಃ ನ್ಯಾಯಾಂಗವೂ ಸೇರಿದಂತೆ ಇಡೀ ದೇಶ ಸದ್ದಿಲ್ಲದೆ ಆಲಿಸಿದೆ ಎಂದರೆ ಪರಿಸ್ಥಿತಿ ಎಷ್ಟು ನಾಜೂಕಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ದೇಶಭಕ್ತರಿಗೆ ದೇಶಭಕ್ತಿಯನ್ನು ಪುನರ್ವ್ಯಾಖ್ಯಾನಿಸಲು ಇದು ಸಕಾಲವಾಗಿದೆ.

-ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂ.೨೦೧೭-ಜನ. ೨೦೧೮ರ ಸಂಚಿಕೆಯಲ್ಲಿ ಗಾಂಧಿ ಚಿಂತನೆಯನ್ನು ಹಲವು ಮಗ್ಗಲುಗಳಿಂದ ಚರ್ಚಿಸುವ ಸೂಕ್ಷ್ಮ ಲೇಖನಗಳಿವೆ. ಸಮಾಜವಾದ ಕುರಿತ ಗಾಂಧಿ ಆಲೋಚನೆಗಳನ್ನು ಕುರಿತ ನಿಮ್ಮ ಬರಹ ಹಾಗೂ ಗಾಂಧಿ-ಅಂಬೇಡ್ಕರ್ ಮುಖಾಮುಖಿ ಕುರಿತ ಗೋಪಾಲ ಗುರು ಮತ್ತು ನಿತ್ಯಾನಂದ ಶೆಟ್ಟಿಯವರ ಬರಹಗಳು ನಮ್ಮ ಅರಿವನ್ನು ವಿಸ್ತರಿಸುತ್ತವೆ, ಆದರೆ ಪಶ್ಚಿಮದ ಚಿಂತಕರ ಮೂಲಕ ಈ ಮುಖಾಮುಖಿಯನ್ನು ನಡುವೆ ನಿತ್ಯಾನಂದ ಶೆಟ್ಟಿಯವರ ವಿಧಾನ ಸ್ವಲ್ಪ ಪ್ರಶ್ನಾರ್ಹವೇ. ಇನ್ನು ರಮಣರೊಡನೆ ಪ್ರಶ್ನೋತ್ತರ ವಿಶಿಷ್ಟವಾಗಿದೆ.

-ಸುಧಾಕರ ದೇವಾಡಿಗ, ಕೋಟೇಶ್ವರ

ಅಂತೂ 'ಹೊಸ ಮನುಷ್ಯ' ಹೊಸ ಹುಟ್ಟು ತಾಳಿದೆ. ಅದಕ್ಕಾಗಿ ನಿಮಗೆ ಮತ್ತು ನಿಮ್ಮ ಗೆಳೆಯರ ಬಳಗಕ್ಕೆ ಅಭಿನಂದನೆಗಳು. ಅಕ್ಟೊ.-ನವೆಂ ೨೦೧೭ ಸಂಚಿಕೆಯಲ್ಲಿ ಪ್ರಕಟವಾದ ಕೆ.ಎಸ್. ಅಚ್ಯುತನ್ ಅವರ ನಿಧನದ ಸುದ್ದಿ ಓದಿ ಅತೀವ ದುಃಖವಾಯಿತು. ಅವರು ನಮ್ಮ ಕುಟುಂಬದ ಎಲ್ಲರ ವಾತ್ಸಲ್ಯಕ್ಕೆ ಪಾತ್ರರಾಗಿದ್ದವರು. ಅವರ ಕೆಲವು ಪುಸ್ತಕಗಳು ನಮ್ಮ ಕಪಾಟಿನಲ್ಲಿದ್ದು, ಅವರ ನೆನಪನ್ನು ಹಸಿರಾಗಿರಿಸುತ್ತದೆ.

-ಅಮ್ಮೆಂಬಳ ಅನಂದ, ಮಣಿಪಾಲ

ಕನ್ನಡ ಪತ್ರಿಕಾ ಪ್ರಪಂಚದಲ್ಲಿ 'ಹೊಸ ಮನುಷ್ಯ' ಸ್ವಲ್ಪ ಕಾಲ ವಿಶ್ರಮಿಸಿದಾಗ ಶೂನ್ಯ ಆವರಿಸಿದಂತಾಗಿತ್ತು. ಈಗ ನೆಮ್ಮದಿ, ಸಂತೋಷ ಉಂಟಾಗಿದೆ.

-ಕಮಲಾ ಹಂಪನಾ, ಬೆಂಗಳೂರು

ಪತ್ರಿಕೆ ನಿಲ್ಲಿಸಬೇಡಿ ಎಂದು ಹೇಳಿದ್ದವರಲ್ಲಿ ನಾನೂ ಒಬ್ಬ. ಈಗ ಹೇಗೂ ಪತ್ರಿಕೆ ಸುರು ಮಾಡಿದ್ದೀರಿ. ಸಂತೋಷ. ನಿಮ್ಮ ಸಾಮಾಜಿಕ ಕಾಳಜಿಯನ್ನು ಬಲ್ಲೆ.

ಮತ್ತೆ ಮತ್ತೆ ಲೋಹಿಯಾ-ಗಾಂಧಿ ಅವರನ್ನು ಮರು ಓದು, ಮರು ಚಿಂತನೆಗೆ ಒಡ್ಡುವುದು ಈ ಕಾಲದ ಅಗತ್ಯವೇ. ಹಾಗೆ ಚಿಂತಿಸುತ್ತಾ ನಮ್ಮ ಸಾಮಾಜಿಕ, ವೈಯಕ್ತಿಕ ಬದುಕು ಎತ್ತ, ಹೇಗೆ ಎಂದು ಪರಿಶೀಲಿಸಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ನಿಮ್ಮ ಸಂಚಿಕೆಗಳನ್ನು ಅರ್ಥಪೂರ್ಣವಾಗಿ ರೂಪಿಸಿದ್ದೀರಿ ಎಂದು ನನಗನ್ನಿಸುತ್ತಿದೆ.

-ಮಲ್ಲಿಕಾರ್ಜುನ ಹಿರೇಮಠ, ಧಾರವಾಡ

ಎರಡೂ ಸಂಚಿಕೆಗಳನ್ನು ಓದಿರುವೆ, ಅವು ನನ್ನ ತಿಳುವಳಿಕೆ, ವಿಚಾರಗಳನ್ನು ಹೆಚ್ಚಿಸಿವೆ.

-ಸತೀಶ್ ಕುಲಕರ್ಣಿ, ಹಾವೇರಿ

'ಸಮಾಜಮುಖಿ' ಮಾಸಿಕದ ಪ್ರಾಯೋಗಿಕ ಸಂಚಿಕೆಯಲ್ಲಿನ ಕನ್ನಡ ಮನಸ್ಸು ಕುರಿತ ಪೃಥ್ವಿ ದತ್ತ ಚಂದ್ರ ಶೋಭಿ ಅವರ ಲೇಖನಕ್ಕೆ ನೀವು ಬರೆದ ದೀರ್ಘ ಪ್ರತಿಕ್ರಿಯೆ ಓದಿದೆ. ಇಂಗ್ಲಿಷ್ ಜ್ಞಾನವಿರದ ಕನ್ನಡಿಗನ ಮನಸ್ಸು ಸ್ಥಗಿತಗೊಂಡಿದೆ ಎಂದು ಭಾವಿಸುವುದು ಪಾಶ್ಚಾತ್ಯ ವಿದ್ಯೆಯಿಂದ ಮರುಳಾದ ಮನಸ್ಸೊಂದರ ದೌರ್ಬಲ್ಯವಷ್ಟೆ ನಮ್ಮ ಊರಿನ ಹಿರಿ ವಯಸ್ಸಿನ ಬೆಸ್ತ ಆಡುವ ಎಷ್ಟೋ ಮಾತುಗಳು ಪಾಶ್ಚಾತ್ಯ ಚಿಂತಕರು ತೆರೆಯಲಾಗದ ನನ್ನ ಅರಿವಿನ ಬಾಗಿಲುಗಳನ್ನು ತೆರೆದಿವೆ. ನಿಜ, ಕನ್ನಡಿಗ ಹೊಸ ಜ್ಞಾನದ ಅರಿವುಳ್ಳವನಾಗಿರಬೇಕು. ಆದರೆ ಆ ಅರಿವು ತನ್ನ ವ್ಯಕ್ತಿತ್ವದ ಸ್ವಾಯತ್ತತೆಯನ್ನೇ ಕಳೆಯುವಂತೆ ಅವನ ಮತ್ತೇರಿಸಬಾರದು.

-ಎಂ.ಎನ್. ರಾಜಶೇಖರ, ಮಂಗಳೂರು

'ಹೊಸ ಮನುಷ್ಯ'ದ ಕಳೆದ ಸಂಚಿಕೆ ಓದಿದೆ. ಅನೇಕ ಸಂಗತಿಗಳು ವಿಚಾರಯೋಗ್ಯವಾಗಿವೆ.ರಮಣ ಮಹರ್ಷಿಗಳೊಡನೆ ಪ್ರಶ್ನೋತ್ತರ ರೂಪದ ತತ್ವಜಿಜ್ಞಾಸೆ ಕುತೂಹಲಕಾರಿಯಾಗಿದ್ದರೂ ನನ್ನಲ್ಲಿರುವ ಪ್ರಶ್ನೆಗಳನ್ನು ತಣಿಸುವುದಿಲ್ಲ. ಧ್ಯಾನದ ಬಗೆಗಿನ ಅವರ ವಿಚಾರ ನನ್ನದೂ ಆಗಿದೆ. ಇನ್ನು ನಿಮ್ಮ ಕೆಲ ಟಿಪ್ಪಣಿಗಳ ಬಗ್ಗೆ:

ನಿಮ್ಮ ನೇರ ನುಡಿಯ ತೀಕ್ಷ್ಣತೆಯನ್ನು ಪ್ರೀತಿಯ ತಿಳಿವಳಿಕೆಯ ಮಾತುಗಳು ಎಂದು ಸಂಬಂಧಿಸಿದವರು ಭಾವಿಸಬೇಕು. ಅದರ ಬಗ್ಗೆ ನನಗೆ ಅನುಮಾನವಿದೆ. ಕನ್ನಡ ಸಂಸ್ಕೃತಿ ಸಂಬಂಧದಲ್ಲಿ ನವ್ಯರ ನಂತರದ, ಆದರೆ ಅವರ ರೀತಿಯಲ್ಲಿ ಆಲೋಚಿಸುವ ಹೊಸ ತಳಿಯೊಂದು ಈಗ ರೂಪುಗೊಳ್ಳುತ್ತಿದೆ. ಇದುವರೆಗಿನ ಕನ್ನಡ ಮನಸ್ಸುಗಳ ಚಿಂತನಾ ಕ್ರಮವನ್ನೇ ಸೂಕ್ತ ತರಬೇತಿ ರಹಿತ ಮತ್ತು ಕ್ರಮಬದ್ಧರಹಿತವೆಂದೂ, ಆ ಕಾರಣದಿಂದ ಅದು ಜಾಗತಿಕ ಮಟ್ಟದ್ದಲ್ಲವೆಂದೂ ಎರಡನೆಯ ದರ್ಜೆಗಿಳಿಸುವ ಪರಿಪಾಠ ನಡೆಯುತ್ತಿದೆ. ತಾವು ಬರೆಯುತ್ತಿರುವುದು ಇಂಗ್ಲಿಷ್ ಬಲ್ಲ ಕನ್ನಡ ಓದುಗರಿಗೆಂದು ತಿಳಿದಂತಿರುವ ಇವರು ಬಹುಜನರ ಬಗ್ಗೆ ತಿರಸ್ಕಾರ ದೃಷ್ಟಿ ಹೊಂದಿದಂತೆ ಕಂಡುಬರುತ್ತದೆ.

ಅವರು ಜನರ ಮನಸ್ಸು ಮುಟ್ಟುವ ಭಾಷೆಯಲ್ಲಿ ಬರೆಯಲಾರದವರು. ಸಂವಹನಕ್ರಿಯೆಯ ಸೋಲು ಅವರ ಬರಹಗಳ ಮುಖ್ಯ ಲಕ್ಷಣ. ತೇಜಸ್ವಿ, ಲಂಕೇಶ್, ಅನಂತಮೂರ್ತಿ, ಮಾಸ್ತಿ, ಡಿವಿಜಿ, ಕುವೆಂಪು ಅವರಿಂದ ವಿಷಯ ಸಂವಹನ ಕಲೆಯನ್ನು ನಾವೆಲ್ಲರೂ ಕಲಿಯುವುದಿದೆ.

-ಪ್ರೊ. ಶಿವರಾಮು ಕಾಡನಕುಪ್ಪೆ, ಮೈಸೂರು

'ಸಾಹಿತ್ಯ, ಸಂಸ್ಕೃತಿ, ಬೌದ್ಧಿಕತೆ, ಪ್ರಗತಿಪರತೆ ಇತ್ಯಾದಿ' ಶೀರ್ಷಿಕೆಯ ನಿಮ್ಮ ಸಂಪಾದಕೀಯದ (ಡಿಸೆಂ ೨೦೧೭-ಜನ.೨೦೧೮ ಸಂಚಿಕೆ) 'ಇಂದಿರಾ ಕೃಷ್ಣಪ್ಪ ನವರ ಕ್ಯಾಮರಾ ಕಣ್ಣು' ಎಂಬ ಟಿಪ್ಪಣಿಯನ್ನೋದಿ ಈ ಪತ್ರ.

'ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ'ಯ ಮೊದಲ ಕಂತಿನಿಂದ ಕೊನೆಯ ಕಂತಿನವರೆಗೂ ಓದಿರುವ ಸಾಮಾನ್ಯ ಓದುಗನಾದ ನನಗೆ ಅನ್ನಿಸಿದ್ದೇನೆಂದರೆ, ತಮ್ಮ ಆಪ್ತ ಒಡನಾಟದಿಂದ ಕೃಷ್ಣಪ್ಪನವರನ್ನು ಬಲ್ಲವರಾಗಿದ್ದ ಡಿಎಸ್ಸೆನ್, ಅವರ ಬದುಕು ಮತ್ತು ಹೋರಾಟ ಅವರ ಮುಂದಿನ ತಲೆಮಾರಿನವರಿಗೂ ತಿಳಿಯಬೇಕೆಂಬ ಪ್ರೀತಿ-ಕಳಕಳಿಗಳಿಂದ ಅದನ್ನು ಸವಿಸ್ತಾರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಆದರೆ ಕೃಷ್ಣಪ್ಪನವರ ಬಗೆಗಿನ ಡಿಎಸ್ಸೆನ್ ಅವರ ಪ್ರೀತಿ-ಗೌರವಗಳನ್ನು ಹತ್ತಿರದಿಂದ ಬಲ್ಲವರಾಗಿದ್ದ ಇಂದಿರಾ ಕೃಷ್ಣಪ್ಪನವರು ಈ ಲೇಖನಮಾಲೆಯ ಪುಸ್ತಕ ರೂಪವನ್ನು ತರುವ ತರಾತುರಿಯಲ್ಲಿ ತಮ್ಮ ಪತಿಯ ಆ ಬದುಕು ಮತ್ತು ಹೋರಾಟದ ಕಥೆಯನ್ನು ಜನರಿಗೆ ತಲುಪಿಸಲು ಕಾರಣರಾದ ಪತ್ರಿಕೆಯ ಸಂಪಾದಕರನ್ನು ಪ್ರಜ್ಞಾಪೂರ್ವಕವಾಗಿ ಕಡೆಗಣಿಸಿದ ರೀತಿ ಯಾರಿಗಾದರೂ ನೋವನ್ನುಂಟು ಮಾಡುವಂತಹ ವಿಷಯವೇ ಆಗಿದೆ.

ಸಾಮಾಜಿಕ ಜವಾಬ್ದಾರಿಯನ್ನು ಸಂಭ್ರಮದಿಂದ ನಿರ್ವಹಿಸುತ್ತಾ ಬಂದಿರುವ ಡಿಎಸ್ಸೆನ್ ಅವರು ಈ ಘಟನೆಯಿಂದ ಬುದ್ಧಿ ಕಲಿತು ('ಇದು ನನಗೆ ಹೊಸತೇನಲ್ಲ. ಆದರೂ ನಾನು ಬುದ್ಧಿ ಕಲಿತಿಲ್ಲ. ಹಾಗಾಗಿ ಇದು ನನ್ನ ತಪ್ಪಲ್ಲದೆ ಮತ್ತೇನು?' ಎಂಬ ಅವರದೇ ಮಾತಿನ ಹಿನ್ನೆಲೆಯಲ್ಲಿ) 'ಹೊಸ ಮನುಷ್ಯ'ರೇನಾದರೂ ಆದರೆ ಅದರ ನಷ್ಟವನ್ನು ಓದುಗರಾದ ನಾವು ಭರಿಸಲು ಸಿದ್ಧರಿಲ್ಲ ಎಂಬ ಪ್ರೀತಿಯ ಎಚ್ಚರಿಕೆಯನ್ನು ನೀಡುವುದೇ ಈ ಪತ್ರದ ಉದ್ದೇಶವಾಗಿದೆ.

-ಎನ್. ಆರ್. ಬಾಲಸುಬ್ರಮಣ್ಯ, ಬೆಂಗಳೂರು

ಸ್ವಘೋಷಿತ ಪ್ರಗತಿಪರರೊಡನೆಯ ನಿಮ್ಮ ಅನುಭವಗಳಿಂದ ನೀವು ಪಾಠ ಕಲಿತಿಲ್ಲವೆಂಬುದರ ವಿಷದೀಕರಣದಂತೆ ಮಾತ್ರ 'ನನ್ನ ಕ್ಯಾಮರಾ ಕಣ್ಣಿನಲ್ಲಿ...' ಟಿಪ್ಪಣಿ ಓದಲರ್ಹವಾಗಿದೆ. ಅಲ್ಲಿನ ಕೆಲವು ಕಹಿ ಮಾತುಗಳು ನಿಮಗೆ ನಿಮ್ಮ ಆಪ್ತರಿಂದ ಉಂಟಾದ ನೋವಿನಿಂದ ಹೊರಬಂದವು ಎಂಬುದು ನಿಜವಾದರೂ, ಆ ನೋವು ಅವರನ್ನು ನೀವು ಆಪ್ತರೆಂದು ಬಗೆದ ನಿಮ್ಮ ತಪ್ಪಿನ ಫಲವೇ ಆಗಿದೆ. ಇಂದಿನ ಸ್ಪರ್ಧಾತ್ಮಕ ದುರಾಸೆಯ ಬದುಕಿನ ದಿನಗಳಲ್ಲಿ ಜನರ ಸೌಜನ್ಯದ ಬಗ್ಗೆ ತುಂಬ ನಿರೀಕ್ಷೆ ಇಟ್ಟುಕೊಳ್ಳಬಾರದು. ಅದು ಹುಂಬತನವಾದೀತು.

-ಎಂ. ಶ್ರೀನಿವಾಸಮೂರ್ತಿ, ಮೈಸೂರು

ಕಳೆದೆರಡು ಸಂಚಿಕೆಗಳು ತುಂಬಾ ಆರೋಗ್ಯಕರ ಬದ್ಧ ವೈಚಾರಿಕ ನಿಲುವುಗಳಿಂದ ಸುಪುಷ್ಟ ಗಾಂಧಿ ಚಿಂತನೆಧಾರೆ ಮತ್ತು ಪೂರಕ ಲೇಖನಗಳಿಂದ ಪಕ್ವಗೊಂಡು ೪೦ ಪುಟಗಳಲ್ಲಿ ಹೊರ ಬಂದಿದೆ. ಧನ್ಯವಾದಗಳು.

ಇಂದಿರಾ ಕೃಷ್ಣಪ್ಪ ನವರು ೪೭ ಕಂತುಗಳಲ್ಲಿ ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ, ಹೊಸ ಮನುಷ್ಯದಲ್ಲಿ ಪ್ರಕಟಿಸಿದ್ದು, ಅದೀಗ 'ನನ್ನ ಕಣ್ಣಿನ ಕ್ಯಾಮೆರಾದಲ್ಲಿ ಪ್ರೊ. ಬಿ. ಕೃಷ್ಣಪ್ಪ' ಪುಸ್ತಕವಾಗಿ ಹೊರ ಬಂದ ಬಗೆಗಿನ ನಿಮ್ಮ ಬೇಸರ-ಜಿಗುಪ್ಸೆಗಳನ್ನು ಓದಿ ನನಗಾದ ಶಾಕ್ ಅನುಭವ ಹೀಗಿದೆ :

ನಾವು ಬಲ್ಲಂತೆ ಇಂದಿರಾ ಸ್ವಘೋಷಿತ ಪ್ರಗತಿಪರ, ಕ್ರಾಂತಿಕಾರಿಗಳ ಘಾತುಕತನ ಹೊಂದಿದವರಲ್ಲ. ನೀವು ಸಂಪಾದಕರಾದ ಕಾರಣ ಪತ್ರಿಕೆಯ ಅಳತೆಗೆ ಅಲ್ಲಿ-ಇಲ್ಲಿ ತಿದ್ದುವ, ಕೈಬಿಡುವ ಸ್ವಾತಂತ್ರ್ಯ ನಿಮಗಿದ್ದೇ ಇರುತ್ತದೆ. ಅದನ್ನು ಮಾಡಿಕೊಂಡಿದ್ದೀರಿ. ಆದರೆ ಕೃತಿ ಬರೆಯಲು ಪ್ರೇರಣೆ, ದಿಕ್ಕುದೆಸೆ, ನಿರ್ದೇಶನ, ಜೋಡಣೆಯ ಸೂಚನೆ, ಜೊಳ್ಳು-ಅನಗತ್ಯ ಸಂಕಲನ, ಪುಟವಿನ್ಯಾಸ, ಸೂಕ್ತ ಫೋಟೋಗಳ ಲಭ್ಯತೆ-ಇಷ್ಟೂ ಸಂಗತಿಗಳನ್ನು ನಿರ್ವಹಿಸಿದವನು 'ನಾನು' ಎಂಬ ಆತ್ಮ ಪ್ರತ್ಯಯವನ್ನು ಅರು ಬಾರಿ ಹೇಳಿಕೊಂಡಿದ್ದೀರಿ. ಪುಸ್ತಕದ ಹೂರಣದ ನಿರ್ದೇಶಕ, ಪರಿಷ್ಕಾರ ಕೂಡ ಮಾಡಿದವನು ನಾನೆಂದು ಮತ್ತೆರಡು ಬಾರಿ ಹೇಳಿ ಪುಸ್ತಕದ ಪ್ರಕಟಣೆಯನ್ನು ಬಹು ಎಚ್ಚರಿಕೆಯಿಂದ ಮರೆ ಮಾಚಿದ್ದಾರೆಂದೂ, ಸಂಬಂಧವಿರದ ವ್ಯಕ್ತಿಯಿಂದ ಮುನ್ನುಡಿ ಬರೆಸಿದ್ದಾರೆಂದೂ ಈ ಅವಕಾಶದಿಂದ

(೭ನೇ ಪುಟಕ್ಕೆ

ನಾವು ನೆಡುವ ಬೀಜದ ಸಸಿಯ ಫಲ ನಾವೇ ತಿನ್ನಬೇಕೆಂದು ನೆಟ್ಟಿರುವುದಿಲ್ಲ : ದೇವನೂರ ಮಹಾದೇವ

(‘ಸ್ವರಾಜ್ ಇಂಡಿಯಾ’ ಪಕ್ಷದ ರಾಜ್ಯ ಸಂಚಾಲತ ದೇವನೂರ ಮಹಾದೇವ ಅವರನ್ನು ಪತ್ರಿಕೆಯ ಸಂಪಾದಕ ಡಿ.ಎಸ್. ನಾಗಭೂಷಣ ಅವರು ಇಲ್ಲಿ ಮುಟ್ಟಿ ಮಾತನಾಡಿಸಿದ್ದಾರೆ. ಇದನ್ನೋದಿಯೇ ಓದುಗರು ಈ ಪಕ್ಷದ ಬಗ್ಗೆ ಒಂದು ಇಣುಕು ನೋಟವನ್ನು ಪಡೆಯಬಹುದೆಂದು ಕಾಣುತ್ತದೆ-ಸಂ.)



ಪಕ್ಷದ ಕೆಲಸ ಹೇಗೆ ನಡೆದಿದೆ?

ಸ್ಲೋ ಅಂಡ್ ಸ್ಟಡಿ ವಿನ್ಸ್ ದಿ ರೇಸ್ ಎಂಬಂತೆ ನಡೆದಿದೆ. ಕವಿಯತ್ರಿ ಸವಿತಾ ನಾಗಭೂಷಣ್ ಅವರು ಸ್ವರಾಜ್ ಇಂಡಿಯಾ ಪಕ್ಷಕ್ಕೆ ಸೇರಿದಾಗಲೇ ಸೂಕ್ಷ್ಮಮತಿಗಳಾದ ನಿಮಗೆ ಇದು ಅರ್ಥವಾಗಬೇಕಾಗಿತ್ತು!

ಇನ್ನೈದು ತಿಂಗಳುಗಳಲ್ಲಿ ಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಗಂಭೀರ ಸ್ಪರ್ಧೆ ಒಡ್ಡುವ ಇರಾದೆ ನಿಮಗಿದೆಯೇ? ಅಥವಾ ಇನ್ನೂ ದೂರದ ಗುರಿ ಇಟ್ಟುಕೊಂಡಿದ್ದೀರೋ?

ತಾತ್ಕಾಲಿಕವಾಗಿ ಸ್ವರಾಜ್ ಇಂಡಿಯಾ ಪಕ್ಷದ ಅಸ್ತಿತ್ವ ಉಳಿಸಿಕೊಳ್ಳುವುದು ಹಾಗೂ ಚುನಾವಣಾ ಸಂದರ್ಭವನ್ನು ಬಳಸಿಕೊಂಡು ಪಕ್ಷವನ್ನು ಪ್ರಚಾರಕ್ಕೆ ತರುವುದು ಮತ್ತು ಮುಂದಿನ ಚುನಾವಣೆಗಳಲ್ಲಿ ವ್ಯಾಪಕತೆಯನ್ನು ಪಡೆಯುವತ್ತ ಆಲೋಚಿಸಲಾಗುತ್ತಿದೆ.

ಮೇಲಿನ ಪ್ರಶ್ನೆಯನ್ನು ಏಕೆ ಕೇಳುತ್ತಿರುವೆನೆಂದರೆ, ಇಂದಿನ ರಾಜಕೀಯ ಚರ್ಚೆಗಳ ಮಧ್ಯೆ ‘ಸ್ವರಾಜ್ ಇಂಡಿಯಾ’ ಎಂಬ ಪಕ್ಷದ ಪ್ರಸ್ತಾಪವೇ ಇಲ್ಲವಾಗಿದೆ!

ಈಗ ನೀವು ಪ್ರಸ್ತಾಪ ಮಾಡುತ್ತಿದ್ದೀರಲ್ಲ? ನನ್ನಂತಹ ನಿಮ್ಮಂತಹ ಸಣ್ಣ ಸಣ್ಣವರೇ ಸೇರಿಕೊಂಡು ದೊಡ್ಡದಾಗುವ ಪ್ರಯತ್ನ ಇದಾಗಿರುವುದರಿಂದ ಈ ರೀತಿ ನಿಮಗೆ ಅನ್ನಿಸುತ್ತಿರಬಹುದು.

ನೀವು ‘ಸರ್ವೋದಯ ಕರ್ನಾಟಕ’ವನ್ನು ‘ಸ್ವರಾಜ್ ಇಂಡಿಯಾ’ದಲ್ಲಿ ವಿಲೀನಗೊಳಿಸಲು ಇದ್ದ ಕಾರಣಗಳಾದರೂ ಏನು?

ನಾವು ಹೇಳುತ್ತಿದ್ದುದನ್ನೇ ಸ್ವರಾಜ್ ಇಂಡಿಯಾವು ಕೂಡ ಸಮರ್ಥವಾಗಿ ಹೇಳತೊಡಗಿದಾಗ ; ಜತೆಗೆ ಸರ್ವೋದಯ ಕರ್ನಾಟಕವು ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿಯ ವ್ಯಾಪ್ತಿಯನ್ನು ಮೀರಬೇಕಾದ ಅಗತ್ಯ ಕಂಡದ್ದರಿಂದ ಮತ್ತು ಸ್ವಾಯತ್ತತೆ, ಭಾಗವಹಿಸುವಿಕೆ ಪ್ರಜಾಪ್ರಭುತ್ವ (ಪಾರ್ಟಿಸಿಪೇಟರಿ ಡೆಮಾಕ್ರೆಸಿ) ಸ್ವರಾಜ್ ಇಂಡಿಯಾದ ತಳಪಾಯವಾದ್ದರಿಂದ ವಿಲೀನಗೊಳಿಸಲಾಯಿತು. ಹೆಸರನ್ನು ಉಳಿಸಿಕೊಳ್ಳಬೇಕು, ನಾವೇ ಮಾಡಬೇಕು ಎಂಬ ವಾಂಛೆ, ಪ್ರತಿಷ್ಠೆ ಇಲ್ಲದಿರುವುದು ಕೂಡ ವಿಲೀನಗೊಳಿಸುವುದಕ್ಕೆ ಕಾರಣ ಇರಬಹುದು.

ಸರ್ವೋದಯ ಕರ್ನಾಟಕ’ ಪಕ್ಷದ ಮೂಲಕ ಮಾಡಲಾಗದಂತಹ ರಾಜಕಾರಣವನ್ನು ‘ಸ್ವರಾಜ್ ಇಂಡಿಯಾ’ ಮೂಲಕ ಮಾಡಬಹುದು ಎಂದು ನಿಮಗನ್ನಿಸಲು ಕಾರಣಗಳೇನು? ರಾಜ್ಯ ರಾಜಕಾರಣ ಬಿಟ್ಟು ರಾಷ್ಟ್ರ ರಾಜಕಾರಣಕ್ಕೆ ಜಿಗಿಯುವ ಉದ್ದೇಶವಾದರೂ ಏನು?

ಮೇಲಿನ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ದಯವಿಟ್ಟು ಗಮನಿಸಿ.

‘ಸರ್ವೋದಯ ಕರ್ನಾಟಕ’ದಂತೆಯೇ ನಿಮ್ಮ ಹೊಸ ಪಕ್ಷ ದಲಿತ ಚಳುವಳಿ ಮತ್ತು ರೈತ ಚಳುವಳಿಗಳ ಪಳಯುಳಿಕೆಗಳನ್ನೇ ನಂಬಿ ನಡೆದಂತಿದೆ?

ನಿಮ್ಮ ಮನೆಯಲ್ಲೇ ‘ಸ್ವರಾಜ್ ಇಂಡಿಯಾ’ ಇರುವಾಗ ನೀವು ಈ ಪ್ರಶ್ನೆಯನ್ನು ಕೇಳಬಾರದಿತ್ತು!

ನಿಮ್ಮ ಪಕ್ಷ ಕನಿಷ್ಟ ಕರ್ನಾಟಕದ ರಾಜಕಾರಣದ ಮೇಲೆ ಯಾವಾಗ, ಎಂತಹ ಪರಿಣಾಮ ಬೀರಬಹುದೆಂದು ನೀವು ನಿರೀಕ್ಷಿಸುತ್ತೀರಿ?

ಮುಂದಿನ ಚುನಾವಣೆಗಳು ಮುಗಿದ ಮೇಲೆ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ನಗರ ಸಭೆಗಳ ಸ್ಥಳೀಯ ಚುನಾವಣೆಗಳಲ್ಲಿ ಸ್ವರಾಜ್ ಇಂಡಿಯಾ ಪಕ್ಷವು ಎಷ್ಟು ವ್ಯಾಪಕವಾಗಿ ಸ್ಪರ್ಧಿಸುತ್ತದೆ ಹಾಗೂ ಎಷ್ಟು ರಚನಾತ್ಮಕವಾಗಿರುತ್ತದೆ ಎಂಬುದರ ಮೇಲೆ ಪರಿಣಾಮ ಬೀರುವುದು ನಿರ್ಧರಿತವಾಗುತ್ತದೆ. ನಮ್ಮ ಕಣ್ಣು ಸ್ಥಳೀಯ ಸಂಸ್ಥೆಯ ಚುನಾವಣೆಗಳ ಮೇಲಿದೆ

ನೀವು ನಿಮ್ಮ ಹೊಸ ಪಕ್ಷಕ್ಕಾಗಿ ಮಂಡಿಸುತ್ತಿರುವ ಭವಿಷ್ಯದ ಈ ನಕ್ಷೆ ನೋಡಿ ಈ ಪ್ರಶ್ನೆಯನ್ನು ಕೇಳಬೇಕೆನಿಸಿದೆ : ನಿಮಗೆ ಇನ್ನೂ ಎಷ್ಟು ವರ್ಷ ಕೈಕಾಲು-ಬುದ್ಧಿ ಮನಸ್ಸುಗಳು ಗಟ್ಟಿ ಅಥವಾ ಸಮವಿರುತ್ತವೆಂದು ನೀವು ಭಾವಿಸಿದ್ದೀರಿ? ನಿಮ್ಮ ಆಯಸ್ಸು ಎಷ್ಟಿರಬಹುದೆಂದು ಅಂದಾಜು ಮಾಡಿದ್ದೀರಿ? (ಈಗಿನ ನಿಮ್ಮ ಆರೋಗ್ಯದ ಸ್ಥಿತಿಯ ಆಧಾರದ ಮೇಲೆ)

ನಿಮ್ಮ ಇಷ್ಟೆಲ್ಲ ಪ್ರಶ್ನೆಗಳಿಗೆ ಉತ್ತರ ಹೇಳಿದ ಮೇಲೂ ‘ಏನು ಮಾಡಿದರೇನು ಭವ ಹಿಂಗದು!’ ಎಂಬಂತೆ ಮತ್ತೆ ಪ್ರಶ್ನೆ ಕೇಳಿದ್ದೀರಿ. ಇರಲಿ, ಪ್ರಿಯ ನಾಗಭೂಷಣ್ ನಾನು ಈ ಗಳಿಗೆಯಲ್ಲಿ ಉಸಿರಾಡುತ್ತಿರುವೆ. ಮುಂದಿನ ಗಳಿಗೆ ಹೇಗೊ ಗೊತ್ತಿಲ್ಲ. ಒಂದು ನೆನಪಿರಲಿ, ನಾಗಭೂಷಣ್, ನಾವು ನೆಡುವ ಬೀಜದ ಸಸಿಯ ಫಲ ನಾವೇ ತಿನ್ನಬೇಕೆಂದು ನೆಟ್ಟಿರುವುದಿಲ್ಲ. ಬಹುಶಃ ನೀವೂ ಕೂಡ.

‘ಸ್ವರಾಜ್ ಇಂಡಿಯಾ’ ಸ್ಥಾಪನೆಯಾಗುತ್ತಿದ್ದಂತೆಯೇ ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಿಮ್ಮ ಶಾಸಕ ಪುಟ್ಟಣ್ಣಯ್ಯನವರನ್ನು ಉದ್ದೇಶಿಸಿ ‘ನೀವು ಎಂದಿದ್ದರೂ ನಮ್ಮ ಕಡೆಯೇ ಬರಲಿದ್ದೀರಿ!’ ಎಂದು ಆಡಿದ ಮಾತನ್ನು ನೀವು ಹೇಗೆ ಅರ್ಥೈಸುತ್ತೀರಿ?

ಮುಖ್ಯಮಂತ್ರಿಗಳ ಮಾತಿಗೆ ಪುಟ್ಟಣ್ಣಯ್ಯನವರು ಕೊಟ್ಟ ಉತ್ತರವನ್ನು ಯಾಕೆ ನಿಮ್ಮ ಹೊಟ್ಟೆಯೊಳಗೆ ಇಟ್ಟುಕೊಂಡಿದ್ದೀರಿ? ಪುಟ್ಟಣ್ಣಯ್ಯನವರು ಮುಖ್ಯಮಂತ್ರಿಗಳಿಗೆ ಕೊಟ್ಟ ಉತ್ತರದಲ್ಲೇ ನಿಮ್ಮ ಪ್ರಶ್ನೆಗೂ ಅದರೊಳಗೇ ಉತ್ತರ ಇಲ್ಲವೇ?

ಮುಖ್ಯಮಂತ್ರಿಗಳಿಗೆ ಪುಟ್ಟಣ್ಣಯ್ಯ ಏನು ಉತ್ತರಿಸಿದರೋ ನೆನಪಿಲ್ಲ. ನೆನಪಿಲ್ಲ ಅಂದರೆ ನೆನಪಿಟ್ಟುಕೊಳ್ಳುವಂತಹ ಮಾತನ್ನೇನೂ ಬಹುಶಃ ಅವರು ಆಡಿರಲಾರರು. ಆದರೆ ನಿಮಗೆ ನೆನಪಿರುವುದರಿಂದ ದಯವಿಟ್ಟು ಅದೇನೆಂದು ತಿಳಿಸಿ.

ನಿಮಗೆ ನೆನಪಿಲ್ಲದ್ದನ್ನು ಗೊತ್ತುಗುರಿಯಿಲ್ಲದೆ ಕಲ್ಲೆಸೆಯುವಂತೆ ಕೇಳಿದ್ದೀರಲ್ಲ ನಾಗಭೂಷಣ್! ಇದು ನಿಮಗೆ ಭೂಷಣವೇ?

ನಿಮ್ಮದು ರಾಜಕಾರಣ ಮಾಡುವಂತಹ ವ್ಯಕ್ತಿತ್ವವಲ್ಲ ಎಂದು ಬಹಳ ಜನ ಅಭಿಪ್ರಾಯಪಡುತ್ತಾರೆ. ನಿಮ್ಮ ಪ್ರತಿಕ್ರಿಯೆ ಏನು?

ನನ್ನದೂ ಅದೇ ಅಭಿಪ್ರಾಯ. ಆದರೆ ನನ್ನ ಎದುರಿಗಿರುವ ವಾಸ್ತವಗಳು ಕಷ್ಟಪಟ್ಟಾದರೂ ನಾನು ರಾಜಕಾರಣವನ್ನು ಮಾಡುವಂತೆ ಮಾಡುತ್ತಿವೆ. ನಿಮ್ಮನ್ನು ನೀವು ಸಂಯಮಿಸಿಕೊಂಡು ನೀವೂ ರಾಜಕಾರಣಕ್ಕೆ ಬರುವಂತಾಗಲಿ ಎಂದು ಪ್ರಾರ್ಥಿಸುವೆ.

ಈಗ ವಿವಾದಾತ್ಮಕ ಎನಿಸಿರುವ ಭೀಮಾ-ಕೋರೆಗಾಂವ್ ಪ್ರಕರಣವನ್ನು ನಾವು ಹೇಗೆ ನೋಡಬೇಕೆಂದು ನಿಮಗನ್ನಿಸುತ್ತದೆ?

ಸಂಕೀರ್ಣ ಇದೆ. ಈಗಷ್ಟೆ ತಿಳಿದುಕೊಳ್ಳುತ್ತಿರುವೆ. ಇದರ ನಾಡಿ ಹಿಡಿಯಬೇಕಾಗಿದೆ.

(ಸವಿತಾ ನಾಗಭೂಷಣ ಅವರು ತಾವು ಯಾವುದೇ ಪಕ್ಷದ ಸದಸ್ಯತ್ವವನ್ನೂ ಇದುರೆಗೆ ಪಡೆದಿಲ್ಲವೆಂದೂ, ಕೆಲವು ಗೆಳೆಯರ ಕೋರಿಕೆಯ ಮೇರೆಗೆ ಸ್ವರಾಜ್ ಇಂಡಿಯಾ ಪಕ್ಷದ ಶಿವಮೊಗ್ಗ ಜಿಲ್ಲಾ ಸಲಹಾ ಸಮಿತಿಯ ಸದಸ್ಯಯರಾಗಿದ್ದು, ಮುಂದಿನ ದಿನಗಳಲ್ಲಿ ಆ ಪಕ್ಷದ ನಡಾವಳಿಯನ್ನು ಗಮನಿಸಿ ಅದರ ಸದಸ್ಯತ್ವವನ್ನು ಪಡೆಯುವ ಬಗ್ಗೆ ಯೋಚಿಸಲಾಗುವುದೆಂದು ತಿಳಿಸಿದ್ದಾರೆ -ಸಂ)

ಪ್ರಚಲಿತ-೧



'ಆಧಾರ್'ಗಾಗಿ ಬಯೊಮೆಟ್ರಿಕ್ಸ್ : ಕೆಲವು ಪ್ರಶ್ನೆಗಳು, ಕೆಲವು ಆತಂಕಗಳು

–ಗೋಪಾಲಕೃಷ್ಣ

Unique Identification Authority of India
Planning Commission, Government of India

AADHAAR

ಭಾರತದ ಪ್ರಜೆಗಳೆಲ್ಲರಿಗೆ ಒಂದು ಅನನ್ಯ ಸಂಖ್ಯೆಯ ಗುರುತಿನ ಚೀಟಿ ನೀಡುವ ಆಧಾರ್ ಕಾರ್ಡ್ ಕಾರ್ಯಕ್ರಮ ಪ್ರಜೆಗಳ ಹೆಬ್ಬಟ್ಟಿನ ಮುದ್ರೆ ಮತ್ತು ಕಣ್ಣಿನ ಪಾಪೆಯ ಬಿಂಬವನ್ನೂ ದಾಖಲಿಸಿಕೊಳ್ಳುವ ಕಾರ್ಯವಿಧಾನದಿಂದಾಗಿ ಈಗ ವಿವಾದಾಸ್ಪದವಾಗಿದೆ. ಪ್ರಜೆಗಳ ಈ ಜೀವ ಮಾನಕಗಳ ಸಂಗ್ರಹ ಪ್ರಜೆಯನ್ನು ವಿಶಿಷ್ಟವಾಗಿ ಗುರುತಿಸುವುದಕ್ಕೆ ಬಳಕೆಯಾಗುವ ಹಾಗೆಯೇ ಪ್ರತಿ ಪ್ರಜೆಯನ್ನೂ ಸರ್ಕಾರ ತನಗೆ ಬೇಕಾದಾಗ ಓರ್ವ ಅಪರಾಧಿಯನ್ನಾಗಿ ನೋಡಿ ತಪಾಸಿಸಲು, ಕಿರುಕುಳ ಕೊಡಲು ಬಳಸಬಹುದಾದ ಮಾಹಿತಿಕೋಶವೂ ಆಗಲಿದ್ದು, ಇದು ದುರುದ್ದೇಶಗಳಿಗಾಗಿ ದುರ್ಬಳಕೆಯಾಗುವ ಎಲ್ಲ ಸಾಧ್ಯತೆಗಳೂ ಇವೆ. ಇವನ್ನು ಸರ್ಕಾರದ ವಿವಿಧ ಜನಕಲ್ಯಾಣ ಯೋಜನೆಗಳಿಗೆ ಅರ್ಹ ಪ್ರಜೆಗಳನ್ನು ಗುರುತಿಸುವ, ಮಾನ್ಯ ಮಾಡುವ ಸಾಧನವನ್ನಾಗಿ ಬಳಸಬಹುದಾದರೂ, ಈ ಮಾನಕಗಳಲ್ಲಿ ಪ್ರಜೆಯ ವಯಸ್ಸಿಗನುಗುಣವಾಗಿ ವ್ಯತ್ಯಾಸಗಳನ್ನು ನೆಪ ಮಾಡಿಕೊಂಡು ಅವನನ್ನು ಆ ಅರ್ಹತೆಗಳ ಹೊರಗಿಡಲೂ ಬಳಸಬಹುದಾಗಿದೆ. ಅಲ್ಲದೆ ಈಗ ಪ್ರಜೆ ಯಾವುದೇ ಸರ್ಕಾರಿ/ಅರೆ ಸರ್ಕಾರಿ(ಕೆಲವೊಮ್ಮೆ ಖಾಸಗಿಯೂ ಆದ) ಸೇವೆಯನ್ನು ಪಡೆಯಲೂ ಈ ಆಧಾರ್ ದಾಖಲೆಯನ್ನು ಕಡ್ಡಾಯ ಮಾಡುವ ಮೂಲಕ ಅವನ ಖಾಸಗಿ ವಿವರಗಳನ್ನು ಸಾರ್ವಜನಿಕಗೊಳಿಸುವುದನ್ನು ಅನಿವಾರ್ಯ ಮಾಡಲಾಗುತ್ತಿದೆ ಮತ್ತು ಈ ಮಾಹಿತಿ ಕೆಲವು ಮೂಲಗಳಿಂದ ಮಾರಾಟಕ್ಕೂ ಲಭ್ಯವಿದೆ/ಸೋರಿಕೆಯಾಗುತ್ತಿದೆ ಎಂಬ ಮಾತೂ ಕೇಳಿಬರುತ್ತಿದೆ.

ಹೀಗಾಗಿ ಈ ಇಡೀ ಯೋಜನೆ ಸರ್ವೋನ್ನತ ನ್ಯಾಯಾಲಯ ಯಾವುದನ್ನು ಇತ್ತೀಚೆಗೆ ಮೂಲಭೂತ ಹಕ್ಕು ಎಂದು ಘೋಷಿಸಿದೆಯೋ ಆ ಖಾಸಗಿತನವನ್ನು ಉಲ್ಲಂಘಿಸುತ್ತಿದೆ. ಒಟ್ಟಾರೆ ಆಧಾರ್ ಯೋಜನೆಯ ಮೂಲಕ ಪ್ರಜೆಯನ್ನು ಸರ್ಕಾರಿ ಕಾನೂನು–ನಿಯಮಗಳ ಜಾಲದಲ್ಲಿ ಬಂಧಿಸಿಡುವ ಪ್ರಯತ್ನವೂ ಇದಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅತ್ಯಂತ ಸಂಕೀರ್ಣವಾದ ಮತ್ತು ಅತ್ಯುನ್ನತ ಪರಿಣಿತಿಯ ತಂತ್ರಜ್ಞಾನ ನಿರ್ವಹಣಾ ದಕ್ಷತೆಯನ್ನು ಇದು ಬೇಡುವುದರಿಂದ ಇದರಲ್ಲಿ ವಿದೇಶಿ, ನಿರ್ದಿಷ್ಟವಾಗಿ ಅಮೆರಿಕಾದ ಸಂಸ್ಥೆಗಳ ಸಕ್ರಿಯ ಪಾತ್ರವೂ ಇದ್ದು, ರಾಷ್ಟ್ರದ ಪ್ರಜಾಸಮೂಹ ಕುರಿತ ಸೂಕ್ಷ್ಮ ಮಾಹಿತಿಯ ಭದ್ರತೆಯನ್ನೂ ಒಳಗೊಂಡಿದೆ. ಹಾಗಾಗಿಯೇ ಈ ಇಡೀ ಯೋಜನೆ ಈಗ ನಮ್ಮ ಸರ್ವೋನ್ನತ ನ್ಯಾಯಾಲತದ ವಿಚಾರಣೆಗೆ ಒಳಪಟ್ಟಿದೆ. ತಮ್ಮನ್ನು ಇಡಿಯಾಗಿ ಸರ್ಕಾರದ ಜಾಲಕ್ಕೆ ಒಪ್ಪಿಸಿ ಸರ್ಕಾರದ ಮಕ್ಕಳಾಗಲು ಒಲ್ಲದ ಪ್ರಜಾವರ್ಗ ಈ ಸಂಬಂಧದ ನ್ಯಾಯಾಲಯದ ತೀರ್ಪಿಗಾಗಿ ಕುತೂಹಲದಿಂದ ಕಾಯುತ್ತಿದೆ. ಈ ಸಂದರ್ಭದಲ್ಲಿ ಈ ಆಧಾರ್ ಕಾರ್ಡ್ ಕಾಯಿದೆಯನ್ನು ಈವರೆಗಿನ ದುಷ್ಪರಿಣಾಮಗಳ ಮೂಲಕ ಒಳಹೊಕ್ಕು ನೋಡಿ ವಿಶ್ಲೇಷಿರುವ ಲೇಖನವೊಂದನ್ನು ಇಲ್ಲಿ ನೀಡುತ್ತಿದ್ದೇವೆ-ಸಂ.

ಬಯೋಮೆಟ್ರಿಕ್ (ಜೀವ ಮಾನಕ) ಮಾಹಿತಿ ಭಂಡಾರ (database) ಯೋಜನೆಯು ಸದ್ಯದ ಮತ್ತು ಭವಿಷ್ಯದ ನಾಗರಿಕ ಸ್ವಾತಂತ್ರ್ಯ ಮತ್ತು ನಾಗರಿಕ ಹಕ್ಕುಗಳ ವಿಚಾರದಲ್ಲಿ ಆತಂಕಗಳ ಹುಟ್ಟಿಗೆ ಕಾರಣವಾಗಿದೆ. ಕಡೇಪಕ್ಷ ೧೯ನೆಯ ಶತಮಾನದ ಈಚೆಗಾದರೂ ಬಯೋಮೆಟ್ರಿಕ್ (ಜೈವಿಕ ಮಾನಕ(ಪ್ರಯೋಗ ಬಳಕೆಯಲ್ಲಿದೆ. ಬಯೋಮೆಟ್ರಿಕ್ ದಾಖಲಾತಿಯ ಇತಿಹಾಸವು ಹಿಂಸೆ ಮತ್ತು ದಮನದ ಇತಿಹಾಸವೇ ಆಗಿದೆ. ಕದಿಯಲ್ಪಟ್ಟ ಪಾಸ್‌ವರ್ಡನ್ನು ಬದಲಾಯಿಸಿಕೊಳ್ಳಬಹುದು ಆದರೆ ಕದಿಯಲ್ಪಟ್ಟ ಬೆರಳಚ್ಚನ್ನು ಬದಲಾಯಿಸುವುದು ಸಾಧ್ಯವೇ ಇಲ್ಲ.

ಬಯೋಮೆಟ್ರಿಕ್ ಗುರುತು ಹಿಂಸೆಗೆ ಆಹ್ವಾನ ನೀಡಿದಂತೆ. ಸಾಂಪ್ರದಾಯಿಕ ಕೀಲಿಗೆ ಪ್ರತಿಯಾಗಿ ಬೆರಳಚ್ಚು ಆಧಾರಿತ ಕೀಲಿ ವ್ಯವಸ್ಥೆ ಇದ್ದ ಕಾರೊಂದನ್ನು ಕದಿಯುವ ಪ್ರಯತ್ನದಲ್ಲಿ ಜರ್ಮನಿಯ ಒಬ್ಬ ಕಾರು ಮಾಲೀಕನ ಬೆರಳನ್ನೇ ಕಳ್ಳರು ಕತ್ತರಿಸಿಕೊಂಡೊಯ್ದ ನಿದರ್ಶನವಿದೆ. ೨೦೧೦ರ ಅಕ್ಟೋಬರ್‌ನ 'ಎಕನಾಮಿಸ್ಟ್' ಪತ್ರಿಕೆಯಲ್ಲಿ ಈ ಬಗ್ಗೆ ವರದಿಯೊಂದು ಪ್ರಕಟವಾಗಿದೆ. ಆ ಪತ್ರಿಕೆಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ "ಭಿನ್ನತೆಯ ಎಂಜಿನ್; ಸಂಶಯಾಸ್ಪದ ಭದ್ರತೆ" ಎಂಬ ತಲೆಬರಹದ ಅಡಿಯಲ್ಲಿ ಈ ಬಗ್ಗೆ ವರದಿ ಮಾಡಲಾಗಿದೆ. "ದುಷ್ಕರ್ಮಿಗಳನ್ನು ದೂರವಿಡುವುದು ಸರಳವಾದ ತಪಾಸಣೆಯ ವಿಚಾರವಲ್ಲ ಎಂದು ಈ ವರದಿಯು ನಿರೂಪಿಸುತ್ತದೆ. ೧೨ ಅಂಕಿಗಳ ಬಯೋಮೆಟ್ರಿಕ್ ವಿಶಿಷ್ಟ ಗುರುತು (ಗಖಅ) / ಆಧಾರ್ ಸಂಖ್ಯೆಯ ಕೇಂದ್ರೀಯ ಗುರುತು ಮಾಹಿತಿ ಭಂಡಾರ (CIDR) ನ ಪ್ರತಿಪಾದಕರ ನಂಬಿಕೆಗೆ ಇದು ವಿರುದ್ಧವಾಗಿದೆ.

ಕಾಯ್ದೆ ೨೦೧೬ರ ಆಧಾರ್‌ನ ಸೆಕ್ಷನ್ ೨(ಜಿ) (ಆರ್ಥಿಕ ಮತ್ತು ಇತರೆ ಸಬ್ಸಿಡಿಗಳ ಪ್ರಯೋಜನ ಮತ್ತು ಸೇವೆಗಳ ನಿರ್ದಿಷ್ಟ ವಿತರಣೆ) ಬಯೋಮೆಟ್ರಿಕ್ ಮಾಹಿತಿ ಎಂದರೆ, ವ್ಯಕ್ತಿಯೊಬ್ಬನ ಬೆರಳಚ್ಚು, ಕಣ್ಣಿನ ಪಾಪೆಯ ಸ್ಕ್ಯಾನ್ ಅಥವಾ ನಿಯಮಗಳು ನಿರ್ಧರಿಸುವ ಇತರೆ ಜೈವಿಕ ವೈಶಿಷ್ಟ್ಯಗಳು ಎಂದು ವಿವರಿಸುತ್ತದೆ. ಧ್ವನಿಯ ಮಾದರಿ ಆಓಂ ರೂಪುರೇಷೆಗಳೂ ಸಹ ಇದರ ಪರಿಧಿಯೊಳಗೆ ಬರುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ೨೦೧೫ರ DNA ಪ್ರೊಫೈಲಿಂಗ್ ಮಸೂದೆಯ ಗುರಿ ಮಾನವ ದೇಹದ ದ್ರವ್ಯಗಳ DNA (Deoxyribose Nucleic Acid) ವಿಶ್ಲೇಷಣೆಯನ್ನು ನಿಯಂತ್ರಿಸುವುದು ಮತ್ತು DNA ಮಾಹಿತಿ ಬ್ಯಾಂಕ್ ಸ್ಥಾಪಿಸುವುದೇ ಆಗಿದೆ. ಆದರೆ ಆಧಾರ ಮಸೂದೆಯಲ್ಲಿನ ಬಯೋಮೆಟ್ರಿಕ್ ವ್ಯಾಖ್ಯೆಯು ಈ ಉದ್ದೇಶಿತ ಮಾನವ ಪ್ರೋಫೈಲಿಂಗ್ ಮಸೂದೆಯನ್ನೇ ಅರ್ಥಹೀನಗೊಳಿಸುತ್ತದೆ.

ರಾಷ್ಟ್ರೀಯ ಇ ಆಡಳಿತ ಕಾಯಕ್ರಮದ ಅಡಿಯಲ್ಲಿ ಗುರುತು ಮತ್ತು ಪ್ರವೇಶ (identity & Access) ನ ನಿರ್ವಹಣೆಗೆ ಸಂಬಂಧಿಸಿದ ನೀತಿ ಸಂಹಿತೆಯ ತಯಾರಿಕೆಗಾಗಿ ರಚಿಸಲ್ಪಟ್ಟ ಕಾರ್ಯಪಡೆಯ ಪಾತ್ರವನ್ನು ಇಲ್ಲಿ ಜ್ಞಾಪಿಸಿಕೊಳ್ಳುವುದು ಸಂಗತವಾಗಿದೆ. ದೇಶದ ನಿವಾಸಿಗಳ ಮಾಹಿತಿ ಮತ್ತು ಇಂತಹ ಪ್ರತಿಯೊಬ್ಬ ನಿವಾಸಿಯ (ನಾಗರಿಕರು ಮತ್ತು ಭಾರತೀಯ ಮೂಲ ವ್ಯಕ್ತಿಗಳು) ಕೇಂದ್ರೀಯ ಮಾಹಿತಿ ಭಂಡಾರವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದ್ದ ವಿಶೇಷ ಗುರುತು ಚೀಟಿಯ ಯೋಜನೆಯ ಬಗ್ಗೆ ಈ ಕಾರ್ಯಪಡೆಯು ವರದಿಯೊಂದನ್ನು ೨೦೦೭ರ ಏಪ್ರಿಲ್‌ನಲ್ಲೇ ಸಲ್ಲಿಸಿತು. ೨೦೦೯ರ ಜುಲೈನಲ್ಲಿ ನಂದನ್ ನಿಲೇಕಣಿಯವರು ವಿಶೇಷ ಗುರುತು ಚೀಟಿ ಪ್ರಾಧಿಕಾರದ ಅಧ್ಯಕ್ಷರಾಗಿ ಬರುವ ಮೊದಲೇ ಈ ಯೋಜನೆ ಕಾರ್ಯಗತಗೊಳ್ಳತೊಡಗಿತ್ತು ಎಂಬುದನ್ನು ಈ ವರದಿಯು ಸ್ಪಷ್ಟಗೊಳಿಸುತ್ತದೆ. ಈ ವರದಿಯು ಬಯೋಮೆಟ್ರಿಕ್ಸ್ ಎಂದರೆ ಏನು ಎಂಬುದರ ವ್ಯಾಖ್ಯೆಯನ್ನು ನೀಡುತ್ತದೆ. ಕಾರ್ಯಪಡೆಯ ಈ ವರದಿಯು ಬಯೋಮೆಟ್ರಿಕ್ಸ್ ಎಂದರೆ ಏನು ಎಂಬುದರ ವ್ಯಾಖ್ಯವನ್ನು ನೀಡುತ್ತದೆ. ಕಾರ್ಯಪಡೆಯ ಈ ವರದಿಯು ಬಹುಶಃ ಬಯೋಮೆಟ್ರಿಕ್ ಪ್ರಮಾಣೀಕರಣದ ಬಗೆಗಿನ ಮೊದಲಿನ ಉಲ್ಲೇಖಗಳಲ್ಲೊಂದು ಎನ್ನಬಹುದು.

ಇಡೀ ಆಧಾರ್ ಯೋಜನೆಯನ್ನು ಬಯೋಮೆಟ್ರಿಕ್ ಗುರುತು ಮತ್ತು ಪ್ರಮಾಣೀಕರಣದ ಬುನಾದಿಯ ಮೇಲೆ ರಚಿಸಲಾಗಿದೆ. ಈ ಯೋಜನೆಯ ಪ್ರತಿಪಾದಕರು ವಾಷಿಂಗ್ಟನ್ ಡಿ.ಸಿಯ ರಾಷ್ಟ್ರೀಯ ಸಂಶೋಧನಾ ಮಂಡಳಿಯಿಂದ ೨೦೧೦ರ ಸೆಪ್ಟೆಂಬರ್ ೨೪ರಂದು ಪ್ರಕಟಗೊಂಡ 'ಬಯೋಮೆಟ್ರಿಕ್ ಗುರುತಿಸುವಿಕೆ ಸವಾಲುಗಳು ಮತ್ತು ಅವಕಾಶಗಳು' ಎಂಬ ಐದು ವರ್ಷಗಳ ಅಧ್ಯಯನದ ವರದಿಯ ಅರಿವೇ ಇಲ್ಲದವರಂತೆ ನಟಿಸುತ್ತಾರೆ. ಇಂದು ತಿರಸ್ಕರಿಸಲ್ಪಟ್ಟಿರುವ ಯೂಜಿನಿಕ್ಸ್ ಎಂಬ ಶಾಸ್ತ್ರದ ಹಾಗೆ ಬಯೋಮೆಟ್ರಿಕ್ಸ್ ಎಂಬುದು ಆಂತರಿಕ ದೋಷವುಳ್ಳದ್ದು ಎಂಬುದಾಗಿ ಈ ಅಧ್ಯಯನವು ತಿಳಿಸುತ್ತದೆ.

ಅಮೆರಿಕದ ಕಣ್ಗಾವಲಿನಲ್ಲಿ ಭಾರತೀಯರು : ೨೦೧೬ರ ಸೆಪ್ಟೆಂಬರ್ ೬ ರಿಂದ UIDAIನ ಅಂಶಕಾಲಿಕ ಅಧ್ಯಕ್ಷರಾಗಿರುವ ಮತ್ತು ಹಿಂದಿನಮಾಹಿತಿ ತಂತ್ರಜ್ಞಾನ ಖಾತೆಯ ಕಾರ್ಯದರ್ಶಿಗಳಾಗಿದ್ದ ಜೆ. ಸತ್ಯನಾರಾಯಣ ಅವರು ಮೇಲೆ ಹೇಳಿದ ಕಾರ್ಯಪಡೆಯ ಸದಸ್ಯರಾಗಿದ್ದವರು. ಈ ಕಾರ್ಯಪಡೆಯಲ್ಲಿ ಒಟ್ಟು ೩೪ ಜನ ಸದಸ್ಯರಿದ್ದು ಅವರಲ್ಲಿ ಐಬಿಎಂ, ಮೈಕ್ರೋಸಾಫ್ಟ್, ಆರೇಕಲ್, ಕಂಪ್ಯೂಟರ್ ಅಸೋಸಿಯೇಟ್ಸ್, ನಾವೆಲ್, ಹನಿವೆಲ್, ಹೆಚ್‌ಪಿ, ರೆಡ್‌ಹ್ಯಾಟ್, ಇಲಾಂತಸ್ ಟೆಕ್ನಾಲಜೀಸ್, ಎಂಫ್ಯಾಸಿಸ್ ಮತ್ತು ಪ್ರೈಸ್‌ವಾಟರ್‌ಹೌಸ್, ಕೂಪರ್ಸ್ (ಕಿತಿಛಿ) ಮಂತಾದ ೧೧ ಜನ ತಾಂತ್ರಿಕ ಪರಿಹಾರ ಪೂರೈಕೆದಾರರು (Technology Solution Providers) ಇದ್ದರು.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ (ಇದಕ್ಕೆ ಈಗ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಎಂದು ಪುನರ್‌ನಾಮಕರಣ ಮಾಡಲಾಗಿದೆ) ಇಲಾಖೆಯ ಕಾರ್ಯವನ್ನು ಪರಿಶೀಲಿಸಿದ ಮಾಹಿತಿ ತಂತ್ರಜ್ಞಾನದ ಸಂಸದೀಯ ಸ್ಥಾಯಿ ಸಮಿತಿಯು ನೀಡಿದ ವರದಿಯ ೪೬-೪೭ನೆಯ ಪುಟದಲ್ಲಿ ಈ ಬಗ್ಗೆ ಪ್ರಸ್ತಾಪವಿರುವುದನ್ನು ಅವರು ಗುರುತಿಸುತ್ತಾರೆ. ಅಮೆರಿಕದ ರಾಷ್ಟ್ರೀಯ ಭದ್ರತಾಸಂಸ್ಥೆ(NSA) ಯ ಕಣ್ಗಾವಲಿನ ಬಗ್ಗೆ ಸತ್ಯನಾರಾಯಣ ಅವರನ್ನು ಸಂಸದೀಯ ಸಮಿತಿಯು ಪ್ರಶ್ನಿಸಿತ್ತು.. ಇದಕ್ಕೆ ಉತ್ತರಿಸುತ್ತ ಸತ್ಯನಾರಾಯಣ ಅವರು 'ತಾವು ಕಣ್ಗಾವಲಿಗಾಗಿ ಸಂಗ್ರಹಿಸಿರುವುದು ಕೇವಲ ಅಪರ ಮಾಹಿತಿ (Metadata)ಗೆ ಸಂಬಂಧಿಸಿದ್ದು' ಎಂಬ ಆಶ್ವಾಸನೆಯನ್ನು ನಮಗೆ ನೀಡಲಾಗಿದೆ ಎಂದು ಹೇಳಿರುವುದಲ್ಲದೆ, 'ತಾವು ಸಂಗ್ರಹಿಸಿರುವುದು ಕೇವಲ ಅಪರ ಮಾಹಿತಿಯನ್ನು ಮಾತ್ರ. ಅಂದರೆ ಒಂದು ಸಂದೇಶದ ಮೂಲ ಮತ್ತು ಅದು ತಲುಪಿದ ಸ್ಥಳ ಮತ್ತು ಅದು ಯಾವ ಮಾರ್ಗದಲ್ಲಿ ಹೋಗಿದೆ ಎಂಬುದರ ಮೇಲೆ ಮಾತ್ರ ಕಣ್ಗಾವಲು ಇರುತ್ತದೆಯೇ ಹೊರತು ಮಾಹಿತಿಯ ಒಳವಿವರದ (Content) ಮೇಲಲ್ಲ' ಎಂಬುದನ್ನು ಅಮೆರಿಕದ ಅಧ್ಯಕ್ಷರಂತಹವರ ಉನ್ನತ ಮಟ್ಟದಲ್ಲೇ ಸ್ಪಷ್ಟಪಡಿಸಲಾಗಿದೆ ಎಂಬ ವಿವರಣೆಯನ್ನು ನೀಡುತ್ತಾರೆ. ಅಲ್ಲದೆ, 'ಮಾಹಿತಿಗಳ ಒಳ ವಿವರಗಳ ವಿಚಾರದಲ್ಲಿ ಯಾವುದೇ ಆಕ್ರಮಣವನ್ನು ನಾವು ಸಹಿಸಲು ಸಾಧ್ಯವಿಲ್ಲ. ಭಾರತದ ನಿಲುವು ಮತ್ತು ದೃಷ್ಟಿಕೋನದಿಂದ ಇದು ಸಹಿಸಲಾಗದ್ದು ಎಂಬುದನ್ನು ನಾವು ಸ್ಪಷ್ಟಪಡಿಸಿದ್ದೇವೆ. ನಮ್ಮ ಸರ್ಕಾರವು ಸಹ ಇದನ್ನು ಬಹಳ ಸ್ಪಷ್ಟವಾಗಿ ಮತ್ತು ದೃಢವಾಗಿ ಉಲ್ಲೇಖಿಸಿದೆ' ಎಂಬ ಸ್ಪಷ್ಟನೆಯನ್ನು ವರು ನೀಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಸತ್ಯನಾರಾಯಣ ಅವರ'ಅಪರ ಮಾಹಿತಿ ವಿಚಾರದಲ್ಲಿ ಅಮೆರಿಕವು ಕಣ್ಗಾವಲಿರಿಸಿದರೆ ತಮ್ಮದೇನೂ ಅಭ್ಯಂತರವಿಲ್ಲ ಅದು ಸ್ವೀಕಾರಾರ್ಹ ಮತ್ತು ಸಹನಾರ್ಹ ..ಆದರೆ ಒಳಾಂಶದ ಮೇಲೆ ಆಕ್ರಮಣವನ್ನು ಸಹಿಸಲಾಗದು, ಅದನ್ನು ಸಹಿಸುವುದಿಲ್ಲ.' ಎಂಬುದನ್ನು ಆ ಸರ್ಕಾರಕ್ಕೆ ಭಾರತ ಸರ್ಕಾರವು ವಿಧ್ಯುಕ್ತವಾಗಿ ತಿಳಿಸಲಾಗಿದೆ. UIDಯ ವಿಚಾರವು ಜನ್ಮಪಡೆದದ್ದು ಈ ಇಲಾಖೆಯಲ್ಲೇ ಎಂಬುದನ್ನು ನಾವು ಇಲ್ಲಿಜ್ಞಾಪಿಸಿಕೊಳ್ಳಬೇಕು. ಸತ್ಯನಾರಾಯಣ ಅವರಿಗಾಗಲಿ ಅವರ ಇಲಾಖೆಗಾಗಲಿ ಭಾರತೀಯರ ಬಗೆಗಿನ ಅಪರ ಮಾಹಿತಿಯನ್ನು ವಿದೇಶಿಯರೊಂದಿಗೆ ಹಂಚಿಕೊಳ್ಳುವ ವಿಷಯದಲ್ಲಿ ಯಾವ ಸಮಸ್ಯೆಯೂ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಭಾರತೀಯರ ವೈಯಕ್ತಿಕ ಸೂಕ್ಷ್ಮ ಮಾಹಿತಿಗಳನ್ನು *ಆಕ್ಸೆಂಚರ್*, *ಸ್ಯಾಫ್ರನ್‌ಗ್ರೂಪ್* ಮತ್ತು *ಎರ್ನ್ಸ್ಟ್ ಅಂಡ್ ಯಂಗ್* ಮುಂತಾದ ಬಹುರಾಷ್ಟ್ರೀಯ ಖಾಸಗಿ ಉದ್ದಿಮೆಗಳಿಗೆ ನೀಡಲಾಗಿದೆ ಎಂಬುದು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಪಡೆದ ಮಾಹಿತಿಗಳಿಂದ ಸ್ಪಷ್ಟವಾಗಿ ತಿಳಿದು ಬಂದಿದೆ. *೨೩ ಅಂಡ್ ಮಿ* ಎಂಬ ಹೆಸರಿನ ಕ್ಯಾಲಿಫೋರ್ನಿಯಾ ಮೂಲದ ಬಯೋಟೆಕ್ನಾಲಜಿ ಕಂಪನಿ ಮತ್ತು *ಏನ್ಸಿಸ್ಟ್ರಿ.ಕಾಮ್* ಎಂಬ ಹೆಸರಿನ ಅಮೆರಿಕದ ಆನ್‌ಲೈನ್ ಜೀನಿಯಾಲಜಿ ಕಂಪನಿಗಳು DNA ಮಾಹಿತಿಗಳನ್ನು ಸಂಗ್ರಹಿಸಿ ಕೂಡಿಟ್ಟುಕೊಂಡು, ಈ ಮಾಹಿತಿಯನ್ನು ಬೇರೆಯವರಿಗೆ ವರ್ಗಾಯಿಸಬಹುದು ಎಂಬುದು ಬೆಳಕಿಗೆ ಬಂದಿದೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಭಾರತದ ಚುನಾವಣಾ ಆಯೋಗವು ತನ್ನ ಜಾಲತಾಣವೊಂದರಲ್ಲಿ EVM (Electronic Voting Machine) ಗಳಿಗೆ ಸಂಖ್ಯೆಗಳನ್ನು ನೀಡುವ ವಿಚಾರದಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಪ್ರತಿಯೊಂದು ನಿಯಂತ್ರಣ ಘಟಕಕ್ಕೂ ಒಂದು ವಿಶಿಷ್ಠ ಗುರುತು ಸಂಖ್ಯೆ ಇದೆ ಎಂದು ಬಹಿರಂಗಪಡಿಸಿದೆ.. ಜಗತ್ತಿನ ಅತಿದೊಡ್ಡ ನಾಗರಿಕ ಗುರುತು ಯೋಜನೆಯ ಪ್ರತಿಪಾದಕರು ನಮ್ಮ ಚುನಾವಣಾ ಮಾಹಿತಿ ಭಂಡಾರವನ್ನು ಚುನಾವಣಾ ಗುರುತು ಚೀಟಿಯ (EPIC) ಸಂಖ್ಯೆಯನ್ನು ಆಧಾರ್ ಸಂಖ್ಯೆಯ ಜೊತೆ ಬೆಸೆಯುವ ಗುರಿಯನ್ನು ಹೊಂದಿದ್ದಾರೆ. ಇದು ನಮ್ಮ ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನೇ ಬುಡಮೇಲು ಮಾಡಬಲ್ಲ ಸಾಧ್ಯತೆಯನ್ನು ಹೊಂದಿದೆ ಎಂಬುದನ್ನು ನಾವು ಮನಗಾಣಬೇಕು.

ಈ ಉಪಬಂಧಗಳನ್ನು ೨೩(೨)(ಜಿ) ಅನುಚ್ಛೇದದ ಜೊತೆಯಲ್ಲಿ ಓದಿಕೊಂಡರೆ, ನಮ್ಮ ವಿದ್ಯುನ್ಮಾನ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನದ ಮಂತ್ರಾಲಯದ ಭಾರತದ ವಿಶಿಷ್ಠ ಗುರುತು ಪ್ರಾಧಿಕಾರವು ತನಗೆ ಸೂಕ್ತ ಕಂಡ ಸಂದರ್ಭದಲ್ಲಿ ಒಂದು ಉಪಶಾನದ ಸನದ ಮೂಲಕ ಒಂದು ಆಧಾರ್ ಸಂಖ್ಯೆಯನ್ನುಮತ್ತು ಅದಕ್ಕೆ ಸಂಬಂದಂತಿರುವ ಮಾಹಿತಿಯನ್ನು ರದ್ದುಮಾಡುವ ಅಥವಾ ನಿಷ್ಕ್ರಿಯಗೊಳಿಸುವ ಅಧಿಕಾರವನ್ನು ಸಹ ಹೊಂದಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ.ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜಬ್ಬಲಪುರ ಸಹಾಯಕ ಜಿಲ್ಲಾಧಿಕಾರಿಯ ಆಜ್ಞೆಗೆ ಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಅನಂತರ ಅಸಿಂಧುಗೊಳಿಸಲ್ಪಟ್ಟ ತೀರ್ಪಿಗಿಂತಲೂ ಆಧಾರ್ ಕಾಯ್ದೆ ಹೀನಾಯವಾದುದು. ಏಕೆಂದರೆ ಅದು ತಾನು ಇಷ್ಟಪಡದ ಯಾರೊಬ್ಬರ ನಾಗರೀಕ ಹಕ್ಕನ್ನು ನಾಶಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ ಮತ್ತು ಮೇಲೆ ಉಲ್ಲೇಖಿಸಿದ ಜಬ್ಬಲಪುರ ಮೊಕದ್ದಮೆಯಲ್ಲಿ ದಿನಾಂಕ ೨೭ ಜೂನ್ ೧೯೭೫ರ ರಾಷ್ಟ್ರಪತಿಗಳ (ತುರ್ತು ಪರಿಸ್ಥಿತಿ ಘೋಷಣೆಯ) ಆದೇಶವನ್ನು ಅನುಚ್ಛೇದ ೩೫೯(೧)ರ ಅನ್ವಯ ಮಾಡಿದಂತೆ ಒಬ್ಬ ಪ್ರಜೆಯ ದೂರು ದಾಖಲಿಸುವ ಅಧಿಕಾರವನ್ನೇ ಕಿತ್ತುಕೊಳ್ಳುತ್ತದೆ ಮತ್ತು ಸಂವಿಧಾನದ ಅನುಚ್ಛೇದ ೧೪, ೨೧ ಮತ್ತು ೨೨ರ ಅಡಿಯಲ್ಲಿ ದೊರೆಯುವ ಹಕ್ಕನ್ನು ಚಲಾಯಿಸುವುದಕ್ಕಾಗಿ ನ್ಯಾಯಾಲಯವನ್ನು ಕೋರುವ ಯಾವೊಬ್ಬ ವ್ಯಕ್ತಿಯ (ವಿದೇಶಿಯರೂ ಒಳಗೊಂಡಂತೆ) ಹಕ್ಕನ್ನು ಮತ್ತು ಮೇಲೆ ಸೂಚಿಸಿದ ಹಕ್ಕನ್ನು ಚಲಾಯಿಸುವ ವಿಚಾರದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಬಾಕಿಯಿರುವ ಮೊಕದ್ದಮೆಯನ್ನು ಈ ಆದೇಶವು ರದ್ದುಪಡಿಸುತ್ತದೆ.

ಆಧಾರ್ ಕಾಯ್ದೆ ೨೦೧೬ರ ಅನುಚ್ಛೇದ ೪೭(೧) ರ ಪ್ರಕಾರ ಪ್ರಧಿಕಾರವು ನೀಡುವ ದೂರು ಅಥವಾ ಪ್ರಾಧಿಕಾರದ ನಿಯೋಜಿತ ಅಧಿಕಾರಿಯ ದೂರಿನ ಹೊರತಾಗಿ ಈ ಕಾಯ್ದೆಯ ಅಡಿಯಲ್ಲಿ ಶಿಕ್ಷಿಸಬಹುದಾದ ಯಾವುದೇ ಅಪರಾಧವನ್ನು ನ್ಯಾಯಾಲಯವು ಪರಿಗಣಿಸುವಂತಿಲ್ಲ. ಸಂವಿಧಾನವು ಅನುಚ್ಛೇದ ೧೪, ೨೧ ಮತ್ತು ೨೨ರ ಅಡಿಯಲ್ಲಿ 'ನಿವಾಸಿಗಳಿಗೆ' ಮತ್ತು ನಾಗರೀಕರಿಗೆ ನೀಡುವ ಹಕ್ಕನ್ನು ಇದು ಕಿತ್ತುಕೊಳ್ಳುತ್ತದೆ.

ಭಾರತೀಯರ ಜೈವಿಕ ಮಾಹಿತಿಗಳು ಹೊರ ದೇಶಗಳಿಂದ ಆಕ್ರಮಿಸಲ್ಪಡುತ್ತಿರುವ ವಾಸ್ತವದ ಹಿನ್ನಲೆಯಲ್ಲಿ, ಅಂತರ್‌ರಾಷ್ಟ್ರೀಯ ಸಂಬಂಧಗಳ ಜಾಲದ ಭಾಗವಾಗಿ ಹೋಗಿರುವಮನುಷ್ಯನ ಮೇಲೆ ಇದು ಪರಿಣಾಮ ಬೀರುವ ಸಾಧ್ಯತೆಗಳುಂಟು ಏಕೆಂದರೆ ಇವು ಚಲನವಲನಗಳನ್ನು ಮಿತಿಗೊಳಿಸಬಲ್ಲ ಬಯೋಮೆಟ್ರಿಕ್ ಗಡಿಗಳನ್ನು ನಿರ್ಮಿಸುವುದರಲ್ಲಿ ಅಂತ್ಯವಾಗಬಹುದು.

ಆಂತರಿಕ ತುರ್ತುಪರಿಸ್ಥಿತಿಯ ಕಾಲಕ್ಕೆ ಸಂಜಯ ಗಾಂಧಿಯವರ ಕುಖ್ಯಾತ ಕುಟುಂಬ ಯೋಜನೆಯ ಪ್ರಯತ್ನದ ಅಡಿಯಲ್ಲಿ ಒತ್ತಾಯಪೂರ್ವಕವಾಗಿ ಸಹಸ್ರಾರು ಗಂಡಸರ ಸಂತಾನ ಶಕ್ತಿ ಹರಣ ಕೈಗೊಂಡಾಗ ಮಾನವರ ದೇಹಗಳು ದಾಳಿಗೆ ಒಳಗಾದವು. ಪ್ರಧಾನಮಂತ್ರಿಯವರ ಪ್ರೋತ್ಸಾಹದ ಅಡಿಯಲ್ಲಿ ವಿವೇಚನಾರಹಿತ ಬಯೋಮೆಟ್ರಿಕ್ ಪ್ರೋಫೈಲಿಂಗ್ ಮೂಲಕ ಮತ್ತೊಮ್ಮೆ ಮಾನವ ದೇಹಗಳು ದಾಳಿಗೊಳಗಾಗುತ್ತಿವೆ. ಸಂವಿಧಾನಕ್ಕೆ ಬದ್ಧವಾಗದೆ ಸರ್ಕಾರದ ಅನಿಯಮಿತ ಆಡಳಿತಕ್ಕೆ ಅವಕಾಶ ಮಾಡಿಕೊಡುವ ಉದ್ದೇಶವುಳ್ಳ ಇಂತಹ ಯೋಜನೆಯು ಪರಮೋಚ್ಚ ಸಾರ್ವಜನಿಕ ಹಿತಾಸಕ್ತಿಯ ದೃಷ್ಠಿಯಿಂದ ರದ್ದಾಗಲೇಬೇಕು.

(ಕೃಪೆ : ***ಜನತಾ,*** ಡಿಸೆಂ, ೩೧, ೨೦೧೭
ಕನ್ನಡ ಅನುವಾದ : **ಎಂ. ರಾಜು**)

ಬಾಬ್ರಿ ಮಸೀದಿ ಉರುಳಿಸಿದ್ದನ್ನು ನಾನು ನೋಡಿದೆ! ಆದರೆ...

-ಶರತ್ ಪ್ರಧಾನ್



ಬಾಬ್ರಿ ಮಸೀದಿಯನ್ನು ಉರುಳಿಸಿ ೨೫ ವರ್ಷಗಳಾದರೂ, ಈ ವಿಧ್ವಂಸಕ ಕೃತ್ಯಕ್ಕೆ ಸಂಬಂಧಿಸಿದ ಮೊಕದ್ದಮೆಗಳು ನಮ್ಮ ನ್ಯಾಯಾಲಯಗಳಲ್ಲಿ ಆಮೆ ಗತಿಯಲ್ಲಿ ಮುಂದುವರೆದಿವೆ. ದೇಶದಲ್ಲಿ ಕಳೆದೆರಡು ದಶಕಗಳಲ್ಲಿ ಮತಭೇಧವಿಲ್ಲದೆ ಮತಾಂಧರಿಂದ ನಡೆದಿರುವ ಕೋಮು ಹಿಂಸಾಚಾರ ಮತ್ತು ಅದರ ಹಿಂದಿನ ರಾಜಕಾರಣದ ಮಹಾದ್ವಾರ ತೆಗೆದ ಈ ಘಟನೆಯಲ್ಲಿ ಇನ್ನೂ ಯಾರನ್ನೂ ತಪ್ಪಿತಸ್ಥರೆಂದು ಘೋಷಿಸಲಾಗಿಲ್ಲವೆಂಬುದು ಈ ರಾಜಕಾರಣದ ಕೇಡನ್ನಲ್ಲದೆ ನಮ್ಮ ನ್ಯಾಯದಾನ ಪದ್ಧತಿಯ ದೋಷಗಳನ್ನೂ ಹೇಳುತ್ತದೆ.

ಸರ್ವೋಚ್ಚ ನ್ಯಾಯಾಲಯ ಬಾಬ್ರಿ ಮಸೀದಿಯ ಜಾಗದ ಒಡೆತನ ಕುರಿತ ವಿವಾದದ ಬಗೆಗಿನ ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಕುರಿತ ಮೇಲ್ಮನವಿಯ ಬಗ್ಗೆ ನಡೆಸಿರುವ ವಿಚಾರಣೆಯ ಜೊತೆಗೆ ಮಸೀದಿ ಉರುಳಿಸಿದ ಅಪರಾಧದ ಹಿಂದಿನ ಪಿತೂರಿ ಕುರಿತ ವಿಚಾರಣೆಯನ್ನು ಈಗ ಕೈಗೆತ್ತಿಕೊಳ್ಳಲಿದೆ. ಈ ಎರಡೂ ವಿಚಾರಣೆಗಳು ಕಾಲಮಿತಿಯಲ್ಲಿ ಮುಗಿದು ಇಡೀ ಪ್ರಕರಣ ಒಂದು ಅಂತಿಮ ಇತ್ಯರ್ಥಕ್ಕೆ ಬರಬಹುದಾದ ಆಸೆ ಹುಟ್ಟಿರುವ ಈ ಹೊತ್ತಿನಲ್ಲಿ ಮೇಲೆ ತಿಳಿಸಿದ ಮೊಕದ್ದಮೆಗಳ ವಿಚಾರಣೆಗೆ ಸಂಬಂಧಿಸಿದ ಇಲ್ಲಿನ ಲೇಖನ ಐದಾರು ವರ್ಷಗಳ ಹಿಂದಿನದ್ದೇ ಆಗಿದ್ದರೂ ಈಗಲೂ ತನ್ನ ಜೀವಂತಿಕೆಯಿಂದ ಪ್ರಸ್ತುತವಾಗಿದ್ದು ನಮ್ಮನ್ನು ಆಳದ ಚಿಂತನೆಗೆ ದೂಡಬಲ್ಲುದಾಗಿದೆ-ಸಂ.

"೧೯೯೨ ಡಿಸೆಂಬರ್ ಆರರಂದು ನೀವು ಬಾಬ್ರಿ ಮಸೀದಿಯಿಂದ ಎಷ್ಟು ದೂರದಲ್ಲಿ ನಿಂತಿದ್ದಿರಿ, ಮಸೀದಿ ನಿಮಗೆ ಕಾಣುತ್ತಿತ್ತೆ?"

ಹದಿನಾರನೆಯ ಶತಮಾನದ ಮಸೀದಿ ಬೀಳಿಸಿದ ಪ್ರಕರಣದ ವಿಚಾರಣೆ ಕಾಲಕ್ಕೆ ರಾಯಬರೇಲಿ ವಿಚಾರಣಾ ನ್ಯಾಯಾಲಯದಲ್ಲಿ ಭಾರತದ ಹಿಂದಿನ ಉಪಪ್ರಧಾನಿ ಲಾಲಕೃಷ್ಣ ಅಡ್ವಾಣಿಯವರ ವಕೀಲರಾದ ಮಹಿಪಾಲ ಅಹ್ಲುವಾಲಿಯಾ ಪಾಟೀ ಸವಾಲು ಮಾಡುವ ಕಾಲಕ್ಕೆ ಮಸೀದಿ ಕೆಡವಿದ ಎರಡು ದಶಕಗಳ ನಂತರ ಕೇಳಿದ ಪ್ರಶ್ನೆಗಳಿವು. ಆ ಪ್ರಕರಣದಲ್ಲಿ ಅಡ್ವಾಣಿ ಮತ್ತಿತರರ ವಿರುದ್ಧ ಮಸೀದಿ ನಾಶಕ್ಕಾಗಿ ಪಿತೂರಿ ನಡೆಸಿದ ಆಪಾದನೆ ಕುರಿತು ವಿಚಾರಣೆ ನಡೆಯುವಾಗ.

ನನ್ನ ಉತ್ತರ ಸರಳವಿತ್ತು: "ನೀವು ೧೯ ವರ್ಷಗಳ ನಂತರ ಹೀಗೆ ಪ್ರಶ್ನೆ ಕೇಳುತ್ತೀರೆಂದು ತಿಳಿದಿದ್ದರೆ ನಿಖರ ದೂರ ಮತ್ತು ದಿಕ್ಕು ತಿಳಿಯಲು ನಾನು ಆ ದಿನ ಅಳತೆಯ ಟೇಪು ಮತ್ತು ಕಂಪಾಸನ್ನು ತೆಗೆದುಕೊಂಡು ಹೋಗಿರುತ್ತಿದ್ದೆ"

ನನ್ನ ಲಘು ಶೈಲಿಯ ಉತ್ತರವನ್ನು ಉಪೇಕ್ಷಿಸಿ ಆ ವಕೀಲರು ನನ್ನತ್ತ ಹಲವು ಹೊಸ ಪ್ರಶ್ನೆಗಳನ್ನು ಎಸೆದರು: ಮಸೀದಿ ಬೀಳಿಸುವಾಗ ನೀವು ನಿಂತು ನೋಡಿದ ಕಟ್ಟಟದ ಹೆಸರೇನು? ಅದು ಒಂದು ಅಥವಾ ಎರಡು ಅಂತಸ್ತಿನ ಕಟ್ಟಡವೇ? ಆ ಕಟ್ಟಡದಲ್ಲಿ *ವಿಶ್ವ ಹಿಂದೂ ಪರಿಷತ್* ಕಾರ್ಯಾಲಯ ಇತ್ತೇ? ಆ ದಿನ ಬಾಬ್ರಿ ಮಸೀದಿ ತಲುಪಲು ನೀವು ಯಾವ ದಾರಿ ಬಳಸಿದಿರಿ? ದಾರಿಯಲ್ಲಿದ್ದ ಕಟ್ಟಡಗಳ ಹೆಸರೇನು? ಎಷ್ಟು ಸುರಕ್ಷತಾ ಗೇಟುಗಳನ್ನು ದಾಟಿದಿರಿ? ಕರಸೇವಕರು ಗುರುತಿನ ಪಟ್ಟಿ ಧರಿಸಿದ್ದರೇ? ಇತ್ಯಾದಿ ಇತ್ಯಾ

ಹಲವು ದಿನಗಳವರೆಗೆ ನಡೆದ ಪಾಟಿ ಸವಾಲಿನಲ್ಲಿ (ಲಿಖಿತ ರೂಪದಲ್ಲಿ ಇದು ೮೮ ಪುಟಗಳಷ್ಟು ದೀರ್ಘವಾಗಿದೆ) ಮಸೀದಿಯನ್ನು ಹೇಗೆ ಕೆಡವಲಾಯಿತು ಎಂಬುದನ್ನು ದೃಢಪಡಿಸಿಕೊಳ್ಳುವ ಬದಲು ನನ್ನ ನೆನಪಿನ ಶಕ್ತಿಯನ್ನು ಪರೀಕ್ಷಿಸಿದಂತಿತ್ತು. ವಕೀಲರು ಕೇವಲ ನನ್ನ ನೆನಪಿನ ಶಕ್ತಿಯನ್ನು ಪರೀಕ್ಷಿಸುತ್ತಿದ್ದಾರೆಂದು ನಾನು ನ್ಯಾಯಾಲಯದ ಗಮನಕ್ಕೆ ತರಲು ಯತ್ನಿಸಿದಾಗ ಅವರು "....ಇದು ಈಗ ನ್ಯಾಯಾಂಗ ನಿಂದನೆಯಾದೀತು...." ಎಂದು ಚೀರಿದರು.

ಎರಡೂ ಬದಿಯ ನ್ಯಾಯವಾದಿಗಳು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಮಾಹಿತಿಗಳನ್ನೊಳಗೊಂಡ ಕಡತ, ದಾಖಲೆಗಳಿಂದ ಸಜ್ಜಾಗಿರುವಾಗ, ನನ್ನಂತಹ ಸಾಕ್ಷಿದಾರ ಮಾತ್ರ ಎರಡು ದಶಕಗಳ ಹಿಂದೆ ನೋಡಿದ ಘಟನೆ ಕುರಿತು ಎಲ್ಲ ಸೂಕ್ಷ್ಮ ವಿವರಗಳ ಅಗಾಧ ನೆನಪಿನ ಶಕ್ತಿ ಹೊಂದಿರಬೇಕೆಂದು ನಿರೀಕ್ಷಿಸುವುದು ಸಾಧುವೇ? ಎಂಬ ಸಮಾನ ನ್ಯಾಯ ನೀತಿ ಕುರಿತು ಯುಕ್ತ ಪ್ರಶ್ನೆಯನ್ನು ನಾನು ಎತ್ತಿದ್ದೆ. ಸತ್ಯವನ್ನು ಪ್ರತಿಪಾದಿಸುವುದೇ ನ್ಯಾಯಾಂಗ ನಿಂದನೆ ಆಗುವುದಾದರೆ ನಾನು ಬೆದರಿಕೆಗೆ ಜಗ್ಗಲಾರೆ ಎಂದೂ ಹೇಳಿದೆ.

ಪ್ರತಿಸಾಕ್ಷಿದಾರನನ್ನು ಸುಳ್ಳುಗಾರನೆಂದೇ ನೋಡುವುದು ಹಾಗೂ ಪಾಟೀಸವಾಲಿನ ಉದ್ದೇಶ ಅವನು ಸುಳ್ಳುಗಾರನೆಂದು ಸಾಬೀತುಪಡಿಸುವುದಷ್ಟೇ ಏಕೆ ಆಗಿರುತ್ತದೆಂದು ನನಗೆ ತಿಳಿಯುತ್ತಿಲ್ಲ. ನ್ಯಾಯಾಲಯದ ನಡಾವಳಿಗಳನ್ನು ಗಮನಿಸಿದಾಗ ನ್ಯಾಯವಾದಿಗಳಿಗೆ ಹೆಚ್ಚಾಗಿ ಸುಳ್ಳು ಮತ್ತು ಹೇಳಿಕೊಟ್ಟ ಗಿಳಿಪಾಠದ ಸಾಕ್ಷಿದಾರರೊಂದಿಗೆ ಮಾತ್ರ ವ್ಯವವಹರಿಸಬಲ್ಲವರಾಗಿದ್ದು, ಅವರಿಗೆ ಪ್ರತ್ಯಕ್ಷ ಸಾಕ್ಷಿಯೊಂದಿಗೆ ಏಗುವದು ಕಷ್ಟ ಆಗಿದೆ ಎಂದು ರೂಢಿಯಾಗಿದೆ ತೆರೆದ ಕೋರ್ಟಿನಲ್ಲಿ ನನಗೆ ಹೇಳದೆ ಇರಲು ಆಗಲಿಲ್ಲ

ಮೊದಲಿನಿಂದಲೂ ನ್ಯಾಯಾಲಯದ ನಡವಳಿಕೆಗಳು ಹೀಗೆಯೇ ನಡೆಯುತ್ತ ಬಂದಿದ್ದು, ಅವರೊಂದಿಗೆ ತಾವು ಸಹಕರಿಸಬೇಕೆಂದು ನ್ಯಾಯವಾದಿಗಳಷ್ಟೇ ಅಲ್ಲದೇ ನ್ಯಾಯಾಧೀಶರೂ ನನಗೆ ಸಲಹೆ ಮಾಡಿದರು. ಅಪರಾಧ ಎಂಥದ್ದೇ ಇರಲಿ ಅದು ನೆರೆಹೊರೆಯಲ್ಲಿನ ಕಳ್ಳತನ ಇರಬಹುದು, ರಸ್ತೆ ಮೇಲೆ ನಡೆದ ಕೊಲೆ ಆಗಿರಬಹುದು, ಅಥವಾ ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ದೇಶದ ಮತೀಯ ಸ್ವರೂಪವನ್ನೇ ಬದಲಾಯಿಸಿದ ಮಸೀದಿ ಧ್ವಂಸ ಪ್ರಕರಣ ಆಗಿರಬಹುದು, ಕಾನೂನು ಎಲ್ಲರಿಗೂ ಸಮನಾಗಿ ಅನ್ವಯ ಆಗುವ ಕಾರಣ, ನ್ಯಾಯ ವಿಧಾನದ ರೀತಿ, ನಡಾವಳಿ ಒಂದೇ ತೆರನಾಗಿ ಮುಂದುವರಿಯುತ್ತ ಬಂದಿವೆ ಎಂದು ನನಗೆ ತಿಳಿಸಲಾಯಿತು.

ಒಟ್ಟಾರೆ ಕಾರ್ಯವಿಧಾನದ (ನ್ಯಾಯಾಲಯಗಳ) ಬಗ್ಗೆ ಕಡಿಮೆ ಹೇಳಿದಷ್ಟೂ ಒಳ್ಳೆಯದು. ಮಸೀದಿ ಬೀಳಿಸಿ ೧೯ ವರ್ಷಗಳಾದರೂ ವಿಚಾರಣಾ ನ್ಯಾಯಾಲಯವು ನಿರ್ದಿಷ್ಟವಾಗಿ ಅಪರಾಧಿಗಳನ್ನು ಗುರುತಿಸುವಲ್ಲಿ ವಿಫಲವಾಗಿದೆ. ವಾಸ್ತವವಾಗಿ ಪ್ರಮುಖ ಅಪರಾಧಿ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಸಹಿತ ಮುಖ್ಯ ಆರೋಪಿಗಳ ವಿರುದ್ಧ ವಿಚಾರಣೆ ಇನ್ನೂ ಆರಂಭವೇ ಆಗಿಲ್ಲ. ಅವರನ್ನು ಪಿತೂರಿ ಕಲಮಿನಡಿ ವಿಚಾರಣೆಗೊಳಪಡಿಸಬೇಕೋ ಅಥವಾ ಮತೀಯ ದ್ವೇಷ ಹರಡಿದ್ದಕ್ಕಾಗಿ ವಿಚಾರಣೆಗೊಳಪಡಿಸಬೇಕೋ ಎಂಬುದು ನಿರ್ಣಯಕ್ಕಾಗಿ ಸುಪ್ರೀಂಕೋರ್ಟ್‌ನ ತೀರ್ಪಿಗಾಗಿ ಕಾಯಲಾಗುತ್ತಿದೆ.

೪೯ ಪ್ರಮುಖ ಆರೋಪಿಗಳ ವಿರುದ್ಧ ವಿಚಾರಣೆಯು ರಾಯ್‌ಬರೇಲಿ ಮತ್ತು ಲಖನೌ ನ್ಯಾಯಾಲಯಗಳಲ್ಲಿ ನಡೆಯುತ್ತಿದೆ. ನಿಧಾನಗತಿಯ ಕಾರ್ಯವಿಧಾನದಿಂದಾಗಿ ನ್ಯಾಯಾಲಯಗಳಿಗೆ ಅಂತಿಮ ತೀರ್ಮಾನಕ್ಕೆ ಬರಲು ಇನ್ನೂ ಎಷ್ಟು ವರ್ಷ ಬೇಕು ಎಂಬುದು ಯಾರಿಗೂ ಗೊತ್ತಿಲ್ಲ.

ಭಾರತೀಯ ಜನತಾಪಕ್ಷ ಮತ್ತು ವಿಶ್ವ ಹಿಂದೂ ಪರಿಷತ್‌ನ ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾಭಾರತಿ, ವಿನಯ ಕಟಿಯಾರ, ಸಾಧ್ವಿ ರಿತಾಂಬರಾ, ಮುಂತಾದ ಪ್ರಮುಖರ ವಿರುದ್ಧ ರಾಯಬರೇಲಿ ಕೋರ್ಟಿನಲ್ಲಿ ರಾಮಜನ್ಮಭೂಮಿ-ಬಾಬ್ರಿ ಮಸೀದಿ ಹೆಸರಲ್ಲಿ ಕೋಮುದ್ವೇಷ ಪ್ರಚೋದಿಸಿದ್ದಕ್ಕಾಗಿ ವಿಚಾರಣೆ ನಡೆಯುತ್ತಿದೆ.

ಕೇಸರಿ ಪಡೆಯ ಕಿರಿಯ ನಾಯಕರುಗಳ ವಿರುದ್ಧ ಲಖನೌ ವಿಶೇಷನ್ಯಾಯಾಲಯದಲ್ಲಿ ಮಸೀದಿ ನಾಶಗೊಳಿಸಲು ಒಳಸಂಚು ರೂಪಿಸಿದ್ದಕ್ಕಾಗಿ ವಿಚಾರಣೆ ನಡೆಯುತ್ತಿದೆ. ಲಖನೌ ನ್ಯಾಯಾಲಯ ವಿಚಾರಣೆ ಕುರಿತು ದೃಢ ನಿಲುವು ತೋರಿದರೂ, ಎರಡೂ ನ್ಯಾಯಾಲಯುಗಳಲ್ಲಿನ ನಿಧಾನ

ಕಾರ್ಯವಿಧಾನವನ್ನು ಅಲ್ಲಗಳೆಯಲಾಗದು. ವಿಳಂಬ ಗತಿಯ ಕಾರ್ಯವಿಧಾನ, ನ್ಯಾಯವಾದಿಗಳ ಹಳೆಯ ಕಾರ್ಯಶೈಲಿ ಮತ್ತು ನ್ಯಾಯಾಂಗ ಪ್ರಕ್ರಿಯೆಯನ್ನು ವಿಳಂಬಗೊಳಿಸುವುದಯೇ ಹೆಮ್ಮೆ ಪಡುತ್ತಾ ತ್ವರಿತ ವಿಚಾರಣೆಗೆ ಆಸಕ್ತಿ ತೋರಿಸದಿರುವ ಪ್ರವೃತ್ತಿಗಳು ಜನಸಾಮಾನ್ಯರುಮೇಣ ಆಸಕ್ತಿ ಕಳೆದುಕೊಳ್ಳುವಂತೆ ಮಾಡಿವೆ.

ವಿಚಾರಣೆಯನ್ನು ತ್ವರಿತಗತಿಯಲ್ಲಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಕ್ಕಿಂತ ನ್ಯಾಯವಾದಿಗಳು ತಮ್ಮ ವೃತ್ತಿ ನೈಪುಣ್ಯತೆಯನ್ನೂ, ಪಾಂಡಿತ್ಯವನ್ನೂ ಪ್ರದರ್ಶಿಸುವುದರಲ್ಲಿಯೇ ಹೆಚ್ಚು ಆಸಕ್ತರಾಗಿರುವುದರಿಂದ, ನಾನು ಎರಡೂ ನ್ಯಾಯಾಲಯಗಳಲ್ಲಿ ಅಸಂಬದ್ಧ, ಕ್ಷುಲ್ಲಕ ಪ್ರಶ್ನೆಗಳಿಗೆ ಗಂಟೆಗಟ್ಟಲೆ ಉತ್ತರಿಸುತ್ತಾ ಕಟಕಟೆಯಲ್ಲಿ ಕಾಲ ಕಳೆದಿದ್ದೇನೆ.

ನನ್ನ ನೆನಪಿನ ಶಕ್ತಿಯನ್ನು ಪರೀಕ್ಷಿಸುವುದು ಹಾಗೂ ನಾನು ಹೇಳುವುದೆಲ್ಲ ಕಟ್ಟುಕತೆ ಎಂದು ಸಾಧಿಸುವುದರಾಚೆ ಅವರು ನನ್ನನ್ನು ಪ್ರಶ್ನಿಸಿದ್ದಿಲ್ಲ. ನ್ಯಾಯಾಲಯಗಳು ಕೂಡ ಹೊಸ ವಿಧಾನಗಳಲ್ಲಿ ನಂಬಿಕೆ ತೋರುವುದಿಲ್ಲ. ವಕೀಲರು ನೀಡಿದ ಸಲಹೆಗೆ ನಾನು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದಾಗ ನ್ಯಾಯಾಧೀಶರು ಕೂಡ ನನಗೆ ಶಾಂತವಾಗಿರಲು ಮತ್ತು ಸಹಜವಾಗಿರಲು ಸೂಚಿಸಿದರು. ನೇರ ನಡೆನುಡಿಯ ವ್ಯಕ್ತಿಗೆ ಇದು ಕಷ್ಟವೇ.

ನ್ಯಾಯಾಲಯದ ಮುಂದೆ ಪ್ರಮಾಣ ಮಾಡಿ ಹೇಳಿದ್ದೆಲ್ಲ ಸುಳ್ಳು ಎಂದರೆ ಸುಮ್ಮನಿರುವದು ಹೇಗೆ ಸಾಧ್ಯ. ನಾನು ನನ್ನ ಭಾವನೆಗಳನ್ನು ಎಷ್ಟೇ ನಿಯಂತ್ರಿಸಿಕೊಂಡರೂ ಎಲ್ಲರ ಎದುರು ನನ್ನನ್ನು ಸುಳ್ಳುಗಾರ ಎಂದಾಗ ನಾನು ತಡೆಯಲಾರದೆ ಪ್ರತಿಕ್ರಿಯಿಸಿದೆ "ನೀವು ಕಪ್ಪು ಕೋಟು ಧರಿಸಿರಬಹುದಾದರೂ; ನೀವು ಹೊಂದಿರುವ ಕಾನೂನು ಪದವಿ ಖೊಟ್ಟಿ ಎಂದರೆ ನಿಮಗೆ ಹೇಗೆ ಅನಿಸುತ್ತದೆ?" ನನ್ನ ಪ್ರತಿಕ್ರಿಯೆಯಿಂದ ನ್ಯಾಯವಾದಿಗಳು ವಿಚಲಿತರಾಗಿ 'ಗಂಭೀರ ನ್ಯಾಯಾಂಗ ನಿಂದನೆ'ಗಾಗಿ ಸಾಧ್ಯವಾದರೆ ನನ್ನನ್ನು ನೇಣಿಗೇರಿಸಲು ಸಿದ್ಧರಿದ್ದಂತೆ ಕಂಡರು.

ಇಡೀ ನ್ಯಾಯಾಲಯದ ನಡವಳಿಕೆಗಳು ನ್ಯಾಯವಾದಿಗಳ ಪ್ರಯೋಜನಕ್ಕಾಗಿ ನಡೆಯುವ ಕಲಾಪಗಳೆಂಬಂತೆ ನನಗೆ ತೋರಿತು. ಅದರಿಂದ ಬೇರೆ ಯಾವ ಪ್ರಯೋಜನ ಆಗುವಂತೆ ನನಗೆ ಕಂಡು ಬರಲಿಲ್ಲ.


ಮಸೀದಿ ಧ್ವಂಸ ಪ್ರಕರಣದ ವಿಚಾರಣೆಗಾಗಿ ವಿಶೇಷ ನ್ಯಾಯಾಲಯ ರಚನೆಗೊಂಡಾಗ ಯಾರೂ ಕೂಡ ಅಲ್ಲಿ ವಿಚಾರಣೆ ಕೊನೆ ಇಲ್ಲದಂತೆ ಮುಂದುವರೆಯುತ್ತದೆಂದು ಊಹಿಸಿರಲಾರರು.

ಮೊದಲು ಪ್ರಮುಖ ರಾಜಕೀಯ ನೇತಾರರನ್ನು ಕೋರ್ಟಿಗೆ ಕರೆಸಿದಾಗ ಅಯೋಧ್ಯೆ ಪ್ರಕರಣದ ಬಗ್ಗೆ ತೀವ್ರ ಆಸಕ್ತಿಯುಳ್ಳ ಸಾವಿರಾರು ಜನ ಕೋರ್ಟಿನಲ್ಲಿ ತುಂಬಿರುತ್ತಿದ್ದರು. ವರ್ಷಕಳೆದಂತೆ ಸಂಖ್ಯೆ ಕ್ಷೀಣಿಸತೊಡಗಿತು. ಈಗ ನಾನು ನ್ಯಾಯಾಲಯಗಳಿಗೆ ಹೋದರೆ ಪ್ರಕರಣದ ನ್ಯಾಯವಾದಿಗಳ ತಂಡವನ್ನು ಹೊರತುಪಡಿಸಿ ಅಲ್ಲಿ ಯಾರೂ ಇರುವುದಿಲ್ಲ.

ಜನ ಆಸಕ್ತಿ ಕಳೆದುಕೊಂಡಿದ್ದಾರೆ. ಪೀಳಿಗೆ ಬದಲಾಗಿದೆ. ಮಸೀದಿ ಧ್ವಂಸ ಎಂದೋ ನಡೆದ ಕತೆ ಎಂದೆನಿಸುತ್ತಿದೆ. ಭಾಜಪ ಮತ್ತು ಅವರ ಸಹವರ್ತಿಗಳಿಗೆ ಅಯೋಧ್ಯ ಈಗ ಚುನಾವಣೆ ವಿಷಯವಾಗಿ ಹಳಸಲಾಗಿದೆ. ಕೆಲ ಯುದ್ಧೋನ್ಮಾದ ಮುಸ್ಲಿಂರಲ್ಲಿ ಸಿಟ್ಟು ಮತ್ತು ಪ್ರತೀಕಾರದ ಭಾವವನ್ನು ಹುಟ್ಟುಹಾಕಲು ಮಸೀದಿ ವಿಷಯ ಬಳಕೆ ಆಗುತ್ತಿರುವಂತೆ, ಭಾರತೀಯ ಜನತಾ ಪಕ್ಷದ ಕಟ್ಟಾ ಹಿಂದುತ್ವವಾದಿ ಮತಬ್ಯಾಂಕನ್ನು ಹಿಡಿದಿಡಲು ಕೂಡ ಅದು ಬಳಕೆ ಆಗುತ್ತಿದೆ.

ಸಿಬಿಐನ ನೂರು ಸಾಕ್ಷಿದಾರರ ಪಟ್ಟಿಯಲ್ಲಿ ನಾನು ಹನ್ನೆರಡನೆಯ ಸಾಕ್ಷೀದಾರನಾಗಿರುವುದನ್ನು ಗಣನೆಗೆ ತೆಗೆದುಕೊಂಡರೆ ಸಿಬಿಐ ಎಲ್ಲ ಸಾಕ್ಷೀದಾರರ ಸಾಕ್ಷ್ಯವನ್ನು ಮಾಡಿಸಲು ಮುಂದಾಗದಿದ್ದರೂ ನ್ಯಾಯಾಲಯದ ಪ್ರಕ್ರಿಯೆ ಪೂರ್ಣಗೊಳ್ಳಲು ಅನೇಕ ವರ್ಷಗಳೇ ಬೇಕು.

ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಇದ್ದ ಸ್ಥಳದ ಸ್ವರೂಪ ಇಂದು ಗುರುತು ಸಿಗದಷ್ಟು ಆಮೂಲಾಗ್ರವಾಗಿ ಬದಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಅಂತ್ಯಗೊಳ್ಳುವುದನ್ನು ನೋಡಲು ಇನ್ನೊಂದು ಪೀಳಿಗೆಗೆ ಮಾತ್ರ ಸಾಧ್ಯ ನ್ಯಾಯಾಲಯದ ಒಟ್ಟಾರೆ ಪ್ರಕ್ರಿಯೆಯಲ್ಲಿ ವಿಚಾರಣೆ ನ್ಯಾಯಾಲಯದ ಹಂತ ಮೊದಲಿನ ಮೆಟ್ಟಿಲಷ್ಟೆ.



(ಶರತ್ ಪ್ರಧಾನ್ ಲಕ್ನೋವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿರುವ ಹಿರಿಯ ಪತ್ರಕರ್ತ ಮತ್ತು ರಾಜಕೀಯ ವಿಶ್ಲೇಷಕರಲ್ಲೊಬ್ಬರು)

(ಕೃಪೆ : ದ ವೈರ್)

(ಕನ್ನಡಕ್ಕೆ : **ವೆಂಕಟೇಶ ಮಾಚಕನೂರು**)

೨ನೇ ಪುಟದಿಂದ)

ಈ ಲೇಖಕಿ ಮತ್ತು ಪ್ರಕಾಶಕಿ ನನಗೆ ವಂಚಿಸಿದ್ದುದು ಏಕೆ ಎಂದು ಪ್ರಶ್ನಿಸಿದ್ದೀರಿ. ನಾವು ಬಲ್ಲಂತೆ ಇಂದಿರಾ ಕೃಷ್ಣಪ್ಪ ವಂಚಕರಲ್ಲ.

ಕೃಷ್ಣಪ್ಪನವರನ್ನು ಕಳಂಕ ರಹಿತ ಮೂರ್ತಿಯಾಗಿ ಕಡೆಯುವ ಚಾಳಿ, ಇತಿಹಾಸ ಮಹಾಮಹಿಮರ ಸಾಲಿನಿಂದ ಇಳಿಸಿಯಾರೆಂಬ ಆತಂಕ, ಅಭದ್ರತೆ ಮತ್ತು ಅವಾಸ್ತವಿಕ ಮಹಾತ್ವಾಕಾಂಕ್ಷೆಯ ಸುಳಿಗೆ, ಇಂದಿರಾ, ಸಿಕ್ಕಿಕೊಂಡವರು ಎಂದು ಚಿತ್ರಿಸಿ ಈ ಮಹಿಳೆ ಕಿಂಚಿತ್ತೂ ಬದಲಾಗಿಲ್ಲ ಎನ್ನುತ್ತೀರಿ. ಕೊನೆಯ ಎರಡು ಪ್ಯಾರಾಗಳಲ್ಲಿ ಸ್ವಘೋಷಿತ ಪ್ರಗತಿಪರರ ಘಾತುಕತನವನ್ನು ಅವರ ಅವಿನಯ ನಡೆ ಹೇಳಿ ವೈಯುಕ್ತಿಕ ವೈಭವೀಕರಣವೇ ಇವರ "ಪ್ರಗತಿಪರತೆ", ಅಧಿಕಾರ ವಲಯದಲ್ಲಿ ಒಂದು ಸ್ಥಾನ ಗಿಟ್ಟಿಸಿಕೊಳ್ಳುವುದು ಗುರಿ! ಎಂದು ವ್ಯಂಗ್ಯವಾಡಿದ್ದೀರಿ.

ಬುದ್ಧ, ಬಸವ, ಗಾಂಧಿ, ಲೋಹಿಯಾ,ರಮಣರ ತತ್ವ ಸಿದ್ಧಾಂತರಗಳನ್ನು ಜೀರ್ಣಿಸಿಕೊಂಡ ನಾಗಭೂಷಣರು ತೀರಾ ವೈಯುಕ್ತಿಕ ನೆಲೆಯಲ್ಲಿ ಕುಟುಕುವ, ತೇಜೋವಧೆ ಮಾಡುವ ಅಗತ್ಯ ಇತ್ತೇ? ಇಂದಿರಾರೊಡನೆ ನಿಮಗೆ ಏನೇ ಅಸಮಧಾನವಿದ್ದರೂ ನೇರ ಮಾತುಗಳಲ್ಲಿ ಚರ್ಚಿಸಿದ್ದರೆ ಸಾಕಿತ್ತು. ಜಾಹೀರು ಮಾಡಿ, ತೇಜೋವಧೆ ಮಾಡುವ ಅಗತ್ಯ ಇತ್ತೇ? ನಿಮ್ಮ ಅತ್ಮಸಾಕ್ಷಿಯ ಅನುಸಂಧಾನ ಏನನ್ನುತ್ತದೆಯೋ ಗೊತ್ತಿಲ್ಲ. ಇದು ತೇಜೋವಧೆಯಲ್ಲದೆ ಬೇರೇನೂ ಅಲ್ಲ ಎಂದು ನೊಂದು ವಿಷಾದದ ನಾಲ್ಕು ಮಾತು ಹೇಳಿದ್ದೇನೆ.

–ಎಂ. **ಚಂದ್ರಶೇಖರಯ್ಯ,** ಭದ್ರಾವತಿ

ಸಂಪಾದಕರ ಪ್ರತಿಕ್ರಿಯೆ : :ನನ್ನ ಟಿಪ್ಪಣಿಗಳಿಂದ ತಮಗೆ ಬೇಕಾದ ವಾಕ್ಯಗಳನ್ನಷ್ಟೇ ಆಯ್ದು ಉಲ್ಲೇಖಿಸುವ ಮೂಲಕ ನನ್ನ ಮೇಲೆ ಸಲ್ಲದ ಆರೋಪಗಳನ್ನು ಮಾಡಿದ ನಂತರವೂ 'ಬುದ್ಧ, ಬಸವ, ಗಾಂಧಿ, ಲೋಹಿಯಾ, ರಮಣರ ತತ್ವ ಸಿದ್ಧಾಂತಗಳನ್ನು ಜೀರ್ಣಿಸಿಕೊಂಡ ನಾಗಭೂಷಣರು' ಎಂದು ಈ ಓದುಗರು ಬರೆದಿರುವುದು ಆಶ್ಚರ್ಯಕರ. ಅಷ್ಟನ್ನೂ ನಾನು ಜೀರ್ಣಿಸಿಕೊಂಡಿದ್ದೇನೆಂದು ಇವರು ನಿಜವಾಗಿ ಭಾವಿಸಿದ್ದರೆ ನನ್ನ ಬರಹದಲ್ಲಿ ಇಲ್ಲದ ಕೆಡುಕುಗಳನ್ನು ಕಾಣಲು ಇವರಿಗೆ ಸಾಧ್ಯವಿರಲಿಲ್ಲ. ಹಾಗೇ, ಇವರ ಏಕಪಕ್ಷೀಯ ವಾದ ಸರಣಿಯು ಈ ಪತ್ರದ ಬಗ್ಗೆ ಎಲ್ಲವನ್ನೂ ಹೇಳುವಂತಿದೆ.

ಮೊದಲಾಗಿ ನನ್ನ ಟಿಪ್ಪಣಿ ನನ್ನ ನೋವನ್ನು ತೋಡಿಕೊಂಡ ಬರಹ. ಈ ನೋವು ಜಿಗುಪ್ಸೆ ಮತ್ತು ಸಿಟ್ಟಿನ ರೂಪದಲ್ಲೂ ಅಲ್ಲಲ್ಲಿ ವ್ಯಕ್ತವಾಗಿದ್ದರೆ ಆ ನೋವು ಎಷ್ಟು ಆಳದ್ದು ಎಂಬುದು ಇವರಿಗೆ ಅರ್ಥವಾಗಬೇಕಿತ್ತು. ಆದರೆ ಇದು ಇವರಿಗೆ ಇವರದ್ದೇ ಆದ ಕಾರಣಗಳಿಂದಾಗಿ ಅರ್ಥವಾಗದಿರುವುದರಿಂದ ನನ್ನ ಈ ಟಿಪ್ಪಣಿ ಇವರಿಗೆ ಅಲ್ಲಿಲ್ಲದ 'ತೇಜೋವಧೆ'ಯ ಪ್ರಯತ್ನದಂತೆ ಕಂಡಿರಬಹುದು, ಅದಕ್ಕೆ ನಾನು ಹೊಣೆಯಲ್ಲ. ಇನ್ನು ಇವರು ಬೆರಳು ಮಡಿಚಿ ಎಣಿಸಿ ಹೇಳಿದಂತೆ, ಲೇಖನ ಮಾಲೆಗೆ ಸಂಬಂಧಿಸಿದಂತೆ ನಾನು ಮಾಡಿದ ಕೆಲಸಗಳನ್ನು ಹೇಳುವಾಗ 'ನಾನು' ಎಂಬ ಶಬ್ದ ೬+೨ = ಒಟ್ಟು ಎಂಟು ಬಾರಿ ಬಳಕೆಯಾಗಿದ್ದರೆ ಅದಕ್ಕೆ ಅಲ್ಲೆಲ್ಲ 'ನೀನು' ಅಥವಾ 'ಅವನು' ಎಂಬ ಶಬ್ದ ಬಳಸಲಾಗದ್ದೇ ಕಾರಣವಾಗಿದೆ; ಮತ್ತೇನಿಲ್ಲ ಎಂದು ತಿಳಿಸಬಯಸುವೆ. ಜೊತೆಗೆ ನಾನು 'ಈ ಮಹಿಳೆ ಕಿಂಚಿತ್ತೂ ಬದಲಾಗಿಲ್ಲ' ಎಂದು ಬರೆದಿರುವುದು ಆ ಮುನ್ನ ನಾನು ನಿರೂಪಿಸಿರುವ ಒಂದು ಸಂದರ್ಭಕ್ಕೆ ಸಂಬಂಧಿಸಿದಂತೆ ಮತ್ತು 'ಅಧಿಕಾರ ವಲಯದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ' ಮಾತಾಡಿರುವುದು ನನ್ನ ಬೇರೆಯೇ ಅನುಭವಗಳನ್ನು ಉಲ್ಲೇಖಿಸಿ ಎಂಬುದು ಈ ಓದುಗರ ಗಮನಕ್ಕೆ ಬಾರದಿರುವುದು ದುರದೃಷ್ಟಕರ.

ಇನ್ನು ನಾನು ಬಳಸದಿರುವ 'ವಂಚನೆ' ಎಂಬ ಶಬ್ದವನ್ನು ನನ್ನ ಮೇಲೆ ಆರೋಪಿಸಿ ನಂತರ ತಮ್ಮದೇ ತೀರ್ಪು ನೀಡಲು ಮುಂದಾಗಿರುವುದು ನಾನು ಹೇಳಿದ ಸ್ವಘೋಷಿತ ಪ್ರಗತಿಪರರ ಗುಂಪುಗಾರಿಕೆಯ ಘಾತುಕತನವನ್ನು ಸಾಬೀತುಪಡಿಸುವಂತಿದೆ. ಇದು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿಸುವ ಉದ್ದೇಶ ಹೊಂದಿದಂತಿದೆ. ಏಕೆಂದರೆ ನನ್ನ–ಕೃಷ್ಣಪ್ಪ–ಇಂದಿರಾ ಅವರ ಸಂಬಂಧ ಮೂರು ದಶಕಗಳಷ್ಟು ಹಳೆಯದೂ, ಕೌಟುಂಬಿಕವೂ, ಆಪ್ತವೂ ಆದದ್ದಾಗಿದ್ದು, (ಇದೇ ನನ್ನ ಟಿಪ್ಪಣಿಗೂ ಕಾರಣವಾಗಿರಬಹುದು) ಅಂತಹ ಶಬ್ದವನ್ನು ನಾನು ಬಳಸಲಾರೆ.

'ಕೃಷ್ಣಪ್ಪನವರ ನೆನಪುಗಳ ಲೇಖನ ಮಾಲೆಯನ್ನು ಬರೆಯಲು ಪ್ರೇರೇಪಿಸಿದ್ದಲ್ಲದೆ, ಅದನ್ನು ತಿದ್ದಿ ತೀಡಿ, ನಿರ್ದೇಶಿಸಿ ಸುಮಾರು ೫೦ ವಾರಗಳ ಕಾಲ ಲೇಖಕಿಯ ಬೆನ್ನು ಬಿದ್ದು ಒಮ್ಮೆಯೂ ನಿರಂತರತೆ ತಪ್ಪದಂತೆ ಪ್ರಕಟಿಸಿದ (ಆನಂತರ ಅದಕ್ಕಾಗಿ ತನ್ನ ಶಕ್ತ್ಯಾನುಸಾರ ಗೌರವಧನವನ್ನೂ ನೀಡಿದ) ಪತ್ರಿಕೆಯಲ್ಲಿ ಸದರಿ ಟಿಪ್ಪಣಿಯನ್ನು ಬರೆಯುವ ಮೂಲಕ ನಾನು ಒಂದು ಅಗತ್ಯ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಿರುವೆನಷ್ಟೆ ಎಂದು ಭಾವಿಸಿದ್ದೇನೆ.–**ಸಂಪಾದಕ**

ಪ್ರಚಲಿತ-೩

ಹಿಂದೂ-ವೀರಶೈವ-ಲಿಂಗಾಯತ ವಿವಾದ : ಒಂದು ನೋಟ



ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಾಗಿರದೆ ಒಂದು ಸ್ವತಂತ್ರ ಧರ್ಮವಾಗಿದೆ ಎಂಬ ವಾದ ರಾಜ್ಯದಲ್ಲಿ ಇತ್ತೀಚೆಗೆ ಚಾಲ್ತಿಗೆ ಬಂದು ಅದೀಗ ಒಂದು ದೊಡ್ಡ ಆಂದೋಲನವಾಗಿ ಕ್ರಿಯಾಶೀಲವಾಗಿದೆ. ಆದರೆ ಲಾಗಾಯ್ತಿನಿಂದ ಇರುವ ವೀರಶೈವ-ಲಿಂಗಾಯತ ಸಂಬಂಧದ ಗೋಜಲು ಈಗ ಇನ್ನಷ್ಟು ಜಟಿಲವಾಗಿದೆ. ಹಿಂದೂ ಧರ್ಮದ ಭಾಗವಾದ ವೀರಶೈವವು ಲಿಂಗಾಯತವನ್ನೂ ಒಳಗೊಂಡಿದ್ದು, ಅದು ಲಿಂಗಾಯತದ ಮೂಲ ಸ್ಥಾಪಕನೆನ್ನಲಾಗುವ ಬಸವಣ್ಣನ ಕಾಲಕ್ಕಿಂತ ಪ್ರಾಚೀನವಾಗಿರುವುದರಿಂದ ಸ್ವತಂತ್ರ ಧರ್ಮದ ಕೂಗು ರಾಜಕೀಯ ಪ್ರೇರಿತ ಎಂಬ ವಾದವೂ ಪ್ರಬಲವಾಗಿದೆ. ಆದರೆ ಲಿಂಗಾಯತವಾದಿಗಳು ವಚನ ಸಾಹಿತ್ಯವನ್ನು ಮುಂದಿಟ್ಟುಕೊಂಡು ತಮ್ಮದು ಹಿಂದೂ ಧರ್ಮಕ್ಕಿಂತ ಭಿನ್ನವಾದ ವಚನ ಧರ್ಮ ಎಂದು ವಾದಿಸುತ್ತಿದ್ದಾರೆ.

ಹೆಚ್ಚಾಗಿ ರಾಜಕಾರಣಿಗಳು ಮತ್ತು ಅವರ ಪರವಾಗಿಯೋ ವಿರುದ್ಧವಾಗಿಯೋ ಕೆಲವು ಮಠಾಧೀಶರು ವಾದಿಸುತ್ತಾ ಮುನ್ನೆಲೆಗೆ ತಂದಿರುವ ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ನ್ಯಾ. ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ 'ತಜ್ಞ' ಸಮಿತಿಯೊಂದನ್ನು ನೇಮಿಸಿ ಸಲಹೆ ನೀಡಲು ಕೋರಿದೆ. ಆದರೆ ಪ್ರಾಚೀನ ಇತಿಹಾಸದ ಗೋಜಲುಗಳನ್ನು ಬಿಡಿಸಿ, ಧಾರ್ಮಿಕ ಪರಿಕಲ್ಪನೆಗಳು, ನಂಬಿಕೆಗಳು ಮತ್ತು ಆಚರಣೆಗಳನ್ನು ಅಧ್ಯಯನ ಮಾಡಿ ಈ ಬಗ್ಗೆ ಇದಮಿತ್ಥಂ ಎಂದು ಈ ಸಮಿತಿ ಅಥವಾ ಇನ್ನಾವುದೇ ಸಮಿತಿ ಹೇಳಬಲ್ಲುದೇ ಮತ್ತು ತಜ್ಞತೆ ಈ ಅರೆ ರಾಜಕೀಯ-ಅರೆ ಭಾವನಾತ್ಮಕ ಸಮಸ್ಯೆಗೆ ಪರಿಹಾರ ಸೂಚಿಸಬಲ್ಲುದೆ ಎಂಬ ಪ್ರಶ್ನೆ ಇದ್ದೇ ಇದೆ.

ಅದೇನೇ ಇರಲಿ, ವಚನ ಸಾಹಿತ್ಯದ ತಾತ್ವಿಕತೆಯಾದರೂ ಏನು? ಅದಕ್ಕೆ ನಿರ್ದಿಷ್ಟ ಧರ್ಮವೊಂದನ್ನು ನಿರೂಪಿಸಬಲ್ಲ ಅನನ್ಯ ನಿರ್ದಿಷ್ಟವಾದ ತಾತ್ವಿಕತೆ ಇದೆಯೇ? ಈ ಪ್ರಶ್ನೆಯೂ ಈ ವಾದ-ವಿವಾದಗಳಿಗೆ ಸಮಾನಾಂತರವಾಗಿ ಚರ್ಚೆಯಾಗುತ್ತಿದೆ. ಅಂತಹ ಒಂದು ಚರ್ಚೆಯ ಭಾಗವಾಗಿ ಒಂದು ವಿವೇಚನೆ ಮತ್ತು ಈ ಇಡೀ ವಿವಾದ ಕುರಿತಂತೆ ಒಂದು ಒಳನೋಟ ನೀಡುವ ಒಂದು ಟಿಪ್ಪಣಿಯನ್ನು ಇಲ್ಲಿ ನೀಡುತ್ತಿದ್ದೇವೆ-ಸಂ.

ವಚನಗಳ ತಾತ್ವಿಕತೆ ; ಒಂದು ವಿವೇಚನೆ

–ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

ವಚನಗಳ ತಾತ್ವಿಕತೆಯನ್ನು ಕುರಿತು ಮಾತನಾಡುವ ಧೈರ್ಯ ನನಗಿಲ್ಲ. ನನ್ನ ತಲೆಮಾರಿನ ಓದುಗರು ಯಾರಾದರೂ ಅಂಥ ಸಾಹಸಕ್ಕೆ ಸನ್ನದ್ಧರಾಗಿದ್ದಾರೋ ಅನ್ನುವ ಬಗ್ಗೆಯೂ ನನಗೆ ಸಂದೇಹಗಳಿವೆ. ಇಲ್ಲಿ ಈಗ ಆಡುತ್ತಿರುವ ಮಾತು ಅಂಥ ಸಾಹಸಕ್ಕೆ ತೊಡಗಲು ಬಯಸುವವರಿಗೆ ಕೆಲವಾದರೂ ಸೂಚನೆಗಳು ದೊರೆಯಲಿ ಎಂಬ ಉದ್ದೇಶದಿಂದ ಮೂಡಿವೆ. ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ವಚನಗಳನ್ನು ಪರಿಶೀಲಿಸಿ ಇದು ವಚನಗಳ ತಾತ್ವಿಕತೆ ಎಂದು ಹೇಳುವ ವಿದ್ವತ್‌ಪೂರ್ಣ ಬರಹವಲ್ಲ ಇದು. ವಚನಗಳ ಓದು ನನ್ನಲ್ಲಿ ಮೂಡಿಸಿದ ತಾತ್ವಿಕ ಗ್ರಹಿಕೆಗಳನ್ನು ಸಮಾನಮನಸ್ಕರ ಜೊತೆಯಲ್ಲಿ ಹಂಚಿಕೊಳ್ಳುವ ಮಾತು, ಅಷ್ಟೇ.

ಮೊದಲಿಗೇ ಹೇಳಬೇಕಾದ ಮಾತೆಂದರೆ ವಚನ ಪಠ್ಯಗಳು ಯಾವುದೇ 'ಒಂದು' ತಾತ್ವಿಕತೆಯನ್ನೋ ಸಿದ್ಧಾಂತವನ್ನೋ ಪ್ರತಿಪಾದಿಸಲೆಂದು ಸೃಷ್ಟಿಗೊಂಡದ್ದಲ್ಲ. ಅದು ವೈಯಕ್ತಿಕ ಆಧ್ಯಾತ್ಮಿಕ ಸಾಧನೆಯ ಅನುಭವವನ್ನು ಹೇಳಿಕೊಳ್ಳುವ, ಪರಿಶೀಲಿಸುವ ಪಠ್ಯಗಳು; ಯಾವ ತಿಳಿವಳಿಕೆಯಿಂದ ವ್ಯಕ್ತಿಯ ಸಾಮಾಜಿಕ ಬದುಕಿಗೆ ಹದ, ಹವಣು ದೊರೆತೀತು ಎಂದು ಪರಿಶೀಲಿಸುವ ಪಠ್ಯಗಳು; ಕಾಲದ ಹಂಗಿಗೆ ಒಳಪಡದ 'ಬದುಕಿನ ನೀತಿ'ಯನ್ನು ಪ್ರತಿಪಾದಿಸುವ ಪಠ್ಯಗಳು. ವಚನಗಳಿಗಿಂತ ಹಿಂದಿನ ಕಾಲದ, ವಚನಗಳ ಸಮಕಾಲೀನವಾದ ಹಲವು ವಿಚಾರ, ತಾತ್ವಿಕತೆಗಳ ಪ್ರಭಾವವನ್ನು ವಚನಗಳಲ್ಲಿ ನೋಡಬಹುದು. ಹೆಂಗಸರೂ ಸೇರಿದ ಹಾಗೆ ಸಮಾಜದ ಹಲವು ಸ್ತರದ, ಹಲವು ಕಸುಬಿನ, ಹಲವು ಜಾತಿಯ ಜನ, ಬೇರೆ ಬೇರೆ ಧಾರ್ಮಿಕ ಮತ್ತು ವೈಚಾರಿಕ ಹಿನ್ನೆಲೆಯ ಜನ ಪರಸ್ಪರ ಆಡಿಕೊಂಡ ಮಾತು ವಚನಗಳು. ಹಾಗಾಗಿ ಅಲ್ಲಿ ನಮಗೆ ಯಾವುದೇ 'ಒಂದು' ಚಿಂತನೆ, 'ಒಂದು' ಸಿದ್ಧಾಂತ, 'ಒಂದು' ತತ್ವ ಕಾಣುವುದಿಲ್ಲ. ಅಲ್ಲೇನಿದ್ದರೂ ವಿಚಾರಗಳ ಜೀವಂತ ವೈವಿಧ್ಯವಿದೆ, ಜೀವಂತ ವ್ಯಕ್ತಿಗಳು ಆಡುವ ಮಾತಿನಲ್ಲಿ ಇರುವಂಥ ವೈರುಧ್ಯ, ವಿರೋಧಾಭಾಸ, ಅತಾರ್ಕಿಕತೆಗಳೂ ಇವೆ. ಶಾಸ್ತ್ರಗಳಲ್ಲಿರುವ ಹಾಗೆ ವಚನಗಳಲ್ಲಿ ಹಾಗೆ ತಾರ್ಕಿಕ, ಬೌದ್ಧಿಕ, ತತ್ವಪ್ರತಿಪಾದನೆ ಇದೆ ಎಂದು ನಿರೀಕ್ಷಿಸುವುದೇ ಸರಿಯಲ್ಲ.

ಹನ್ನೆರಡನೆಯ ಶತಮಾನದ ಜನ ಆಡಿದ ವಚನ ಬರಹ ರೂಪಕ್ಕೆ ಇಳಿದ ದಾಖಲೆ ನಮಗೆ ಸಿಗುವುದು ಸುಮಾರು ಮುನ್ನೂರು ವರ್ಷಗಳ ನಂತರ; ವಚನಗಳ ಅತ್ಯಂತ ಹಳೆಯ ಹಸ್ತಪ್ರತಿ ಸುಮಾರು ೧೪೫೦ರದ್ದು. ಅಂದರೆ, ಇವತ್ತು ನಮ್ಮ ಕಾಲದವರೆಗೆ ಸಾಗಿಬಂದಿರುವ ವಚನಗಳಲ್ಲಿ ಸುಮಾರು ಒಂಬತ್ತು ಶತಮಾನದ ಕನ್ನಡ ಮನಸ್ಸುಗಳು ಕಂಡ, ಅರಿತ, ಸೇರ್ಪಡೆಮಾಡಿದ ವಿಚಾರಗಳೂ ಸಂದುಕಾಣದಂತೆ ಬೆರೆತಿವೆ. ವಚನಗಳ ಮೂಲಕ ನಮಗೆ ಹೊಳೆಯುವ ಎಲ್ಲ ಸಂಗತಿಗಳನ್ನೂ 'ಹನ್ನೆರಡನೆಯ ಶತಮಾನ'ದ ಕಲ್ಪನೆಗೆ ಲಗತ್ತು ಮಾಡುವುದೂ ಸರಿಯಲ್ಲ. ವಚನಗಳ ತಾತ್ವಿಕತೆಯ ಅನ್ವೇಷಣೆ ಇಂಥ ಪಠ್ಯ ಸಂಬಂಧೀ ಪ್ರಶ್ನೆಯನ್ನೂ ಎತ್ತುತ್ತದೆ.

ಹಾಗೆಂದು ವಚನಗಳಲ್ಲಿ ತಾತ್ವಿಕತೆ ಇಲ್ಲವೇ ಇಲ್ಲವೆಂದಲ್ಲ, ಅದು ವೈವಿಧ್ಯಮಯ ಎಂದಷ್ಟೇ ಅರ್ಥ. ನೋಡಿ, ವಿಚಾರಗಳಿಗೆ ಕಾಲ ಮತ್ತು ದೇಶದ ಹಂಗು ಇರುವುದಿಲ್ಲ. ವಚನಗಳಲ್ಲಿ ಪ್ರಸ್ತಾಪಗೊಂಡಿರುವ ಅದೆಷ್ಟೋ ವಿಚಾರಗಳು ವೇದಗಳ ಕಾಲದಲ್ಲೂ, ಉಪನಿಷತ್ತುಗಳಲ್ಲೂ, ಬೌದ್ಧ ಚಿಂತನೆಯಲ್ಲೂ, ಕನ್ನಡದ ಜೈನ ಕೃತಿಗಳಲ್ಲೂ, ಪಾಶುಪತ, ಲಕುಲೀಶ, ಸಿದ್ಧ, ಕಾಶ್ಮೀರಶೈವ, ತಮಿಳು ನಾಡಿನ ಭಕ್ತಿಪಂಥದ ಪಠ್ಯಗಳಲ್ಲೂ ಇದ್ದವು. ಹನ್ನೆರಡನೆಯ ಶತಮಾನದ ನಂತರದ ವಿಸ್ತಾರ ಕಾಲಮಾನದಲ್ಲಿ ಆಯಾ ಕಾಲದ ತಾತ್ವಿಕ ನಿಲುವುಗಳೂ ಸೇರ್ಪಡೆಗೊಂಡವು. ಹಾಗಿದ್ದರೂ ವಚನಗಳಿಗೇ ವಿಶಿಷ್ಟವೆನಿಸುವ ಕೆಲವು ಸಂಗತಿಗಳನ್ನು, ನಿಲುವುಗಳನ್ನು, ಬದುಕಿನ ತತ್ವವನ್ನು ಸ್ಥೂಲವಾಗಿಯಾದರೂ ಗುರುತಿಸುವುದು ಸಾಧ್ಯವಿದೆ. ನಮ್ಮ ನಮ್ಮ ಬದುಕಿಗೆ, ನಮ್ಮ ಕಾಲದ ಒಟ್ಟು ಬದುಕಿಗೆ ಅಗತ್ಯವಾದ ತಾತ್ವಿಕತೆಯನ್ನು ವಚನಗಳ ಮೂಲಕ ರೂಪಿಸಿಕೊಳ್ಳಲು ಸಾಧ್ಯವಿದೆ.

ತನ್ನ ಕಾಲದವರೆಗೆ ಸಾಗಿಬಂದಿರುವ ವಿಚಾರ ಮತ್ತು ಆಚಾರಗಳಲ್ಲಿ ಹಲವನ್ನು ವಚನ ಸಾಹಿತ್ಯ ಸ್ವೀಕರಿಸಿದೆ, ಇನ್ನು ಕೆಲವು ವಿಚಾರಗಳನ್ನು ಪರಿಷ್ಕರಿಸಿದೆ, ಮತ್ತೆ ಕೆಲವನ್ನು ವಿರೋಧಿಸಿದೆ, ಇನ್ನೂ ಹಲವನ್ನು ನಿರಾಕರಿಸಿದೆ. (ಈ ಸ್ವೀಕಾರ, ಪರಿಷ್ಕಾರ, ನಿರಾಕರಣೆ ಮತ್ತು ವಿರೋಧಗಳನ್ನು ಕುರಿತು ಸೂಕ್ಷ್ಮವಾದ ಚರ್ಚೆ ಇನ್ನೂ ಕನ್ನಡದಲ್ಲಿ ಸರಿಯಾದ ರೀತಿಯಲ್ಲಿ ಆರಂಭವಾಗಿಲ್ಲ.) ವಚನವೆಂಬ ಪರಿಕಲ್ಪನೆಯೇ ಹಾಗೆ ತೀರ ಹೊಸತಾದದ್ದು. ವೇದಗಳು ಅಪೌರುಷೇಯ ಎಂಬ ನಿಲುವು ಇದೆಯಷ್ಟೇ. ಅಂದರೆ ಮನುಷ್ಯರ ಸೃಷ್ಟಿಯಲ್ಲ ವೇದಗಳು ಎಂದು ಅರ್ಥ. ಅದಕ್ಕೆ ಪ್ರತಿಯಾಗಿ ವಚನವೆನ್ನುವುದು ಕಾಯವಿರುವ ಮನುಷ್ಯನ

ಮಾತು; ಮನುಷ್ಯನ ಮೂರು ಕರಣೇಂದ್ರಿಯಗಳಲ್ಲಿ ಒಂದು; ಅದು ಮಾತೂ ಹೌದು, ಕ್ರಿಯೆಯೂ ಹೌದು, ಕ್ರಿಯೆಯ ಉಪಕರಣವೂ ಹೌದು. ಜ್ಞಾನದ ಮೂಲವನ್ನು ಮನುಷ್ಯನಲ್ಲಿ ದೃಢವಾಗಿ ಸ್ಥಾಪಿಸುತ್ತದೆ 'ವಚನ'ವೆಂಬ ಪರಿಕಲ್ಪನೆ. ಗುರು ಎಂಬ ಪರಿಕಲ್ಪನೆಯನ್ನು ಒಪ್ಪಿದರೂ ಗುರು ಹಾಗೆ ಅಂತರಂಗದೊಳಗೇ ಇರುವ ತತ್ವವೇ ಹೊರತು ಕೇವಲ ಮನುಷ್ಯವ್ಯಕ್ತಿಯಲ್ಲ ಎನ್ನುತ್ತದೆ :

ಗುರು ಶಿಷ್ಯ ಸಂಬಂಧವನರಸಲೆಂದು ಹೋದಡೆ,
ತಾನೆ ಗುರುವಾದ ತಾನೆ ಶಿಷ್ಯನಾದ, ತಾನೆ ಲಿಂಗವಾದ.
ಗುಹೇಶ್ವರಾ ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ ಕೊಟ್ಟಡೆ,
ಭಾವ ಬತ್ತಲೆಯಾಯಿತ್ತು! [ಅಲ್ಲಮ, ೨. ೬೩]

ಸ್ವರ್ಗ ನರಕಗಳೆಂಬ ಪರಿಕಲ್ಪನೆಯನ್ನು ತಿರಸ್ಕರಿಸುತ್ತದೆ : [೨],

ಪರುಷ ಮುಟ್ಟಲು ಕಬ್ಬುನ ಹೊನ್ನಾದಂತೆ
ಪುಣ್ಯ ಪಾಪಗಳಿಲ್ಲ, ಸ್ವರ್ಗನರಕಗಳಿಲ್ಲಯ್ಯಾ ನಿಮ್ಮವರಿಗೆ.
ಕೂಡಲಚೆನ್ನಸಂಗಾ ನಿಮ್ಮ ಶರಣ[ರು] ಭವರಹಿತರು
[ಚನ್ನಬಸವಣ್ಣ ೩.೪೬೯]

ಶುಭ ಲಗ್ನ ಅಶುಭಕಾಲವೆಂಬ ಪರಿಕಲ್ಪನೆಯನ್ನು ಅಲ್ಲಗಳೆಯುತ್ತದೆ :

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ,
ರಾಸಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ,
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ,
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ
[ಬಸವಣ್ಣ, ೧. ೮೩]

ಹೆಣ್ಣಿನ ಋತುಕಾಲದ ಸೂತಕವನ್ನು, ಜಾತಿಯ ಸ್ಪೃಶ್ಯ–ಅಸ್ಪೃಶ್ಯ ಸೂತಕವನ್ನು ಒಪ್ಪುವುದಿಲ್ಲ :

ಶ್ರೀಗುರುಕರುಣಕಟಾಕ್ಷದಲ್ಲಿ ಉತ್ಪತ್ಯವಾದ ಅಜಾತಂಗೆ
ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್ಸೂತಕವುಂಟೆಂಬವಂಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲವಯ್ಯಾ
ಕೂಡಲ ಚೆನ್ನಸಂಗಯ್ಯ. [ಚನ್ನಬಸವಣ್ಣ ೩. ೧೬೮]

ಬದಲಾಗಿ ಮನ ಸೂತಕ, ಭಾವ ಸೂತಕ ಎಂಬ ಅಂತರಂಗ ಸೂತಕಗಳನ್ನು ಹೇಳುತ್ತದೆ:

ಎನ್ನ ಕುಲಸೂತಕವ ಕಳೆದಾತ ಬಸವಣ್ಣ
ಎನ್ನ ಛಲಸೂತಕವ ಕಳೆದಾತ ಬಸವಣ್ಣ.
ಎನ್ನ ತನುಸೂತಕವ ಕಳೆದಾತ ಬಸವಣ್ಣ
ಎನ್ನ ಮನಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ
ಎನ್ನ ಭಾವಸೂತಕವ ಕಳೆದಾತ ಬಸವಣ್ಣ
[ನೀಲಮ್ಮ ಸಂ. ೫. ೭೯೧]

ಆದರೆ ಇವೆಲ್ಲ ಸಂಗತಿಗಳೂ ನಮ್ಮ ಕಾಲದ ಮಹಾನ್ ಪೀಡೆಗಳೇ ಆಗಿ ಉಳಿದಿವೆ ಎನ್ನುವುದಕ್ಕೆ ಬೇರೆಯ ಪುರಾವೆಯೇ ಬೇಡ, ಬೆಳಗಿನ ಹೊತ್ತಿನಲ್ಲಿ ಯಾವುದೇ ಕನ್ನಡ ಟಿವಿ ಚಾನೆಲ್ ನೋಡಿದರೂ ಸಾಕು.

ಜ್ಞಾನವೆಂಬುದು ವಿಧ್ಯುಕ್ತ ಆಚರಣೆಗಳ ತಿಳಿವಳಿಕೆ ಎಂಬ ನಿಲುವು ಪ್ರಚಲಿತವಾಗಿದ್ದಾಗ ಹೊತ್ತು ತಿಳಿದು ಕೂಗುವ ಕೋಳಿಗೆ, ಸಿಹಿ ಇರುವ ತಾವನ್ನು ತಿಳಿಯುವ ಇರುವೆಗೆ, ಕೇವಲ ಭಾವನೆ ಮಾತ್ರದಿಂದಲೇ ಮರಿಯ ಹೊಟ್ಟೆ ತುಂಬಿಸುವ ಆಮೆಗೆ [ಕೇವಲ ಕವಿಸಮಯವೂ ಇದ್ದೀತು ಈ ಕೊನೆಯ ಸಂಗತಿ] ಜ್ಞಾನವಿಲ್ಲವೆ ಎಂದು 'ಸಕಲ ಜೀವಿಗಳೂ ಜ್ಞಾನಕ್ಕೆ ಒಳಗು' ಎಂದು ಜ್ಞಾನದ ವ್ಯಾಖ್ಯೆಯನ್ನು ಬದಲಾಯಿಸಿದ್ದು ಕಾಣುತ್ತೇವೆ :

ವೇಳೆಯನರಿದು ಧ್ವನಿದೋರುವ ತಾಮ್ರಚೂಡಂಗೆ ಅದಾವ ಜ್ಞಾನ?
ಮಧುರರಸಂಗಳಿದ ಠಾವನರಿದೆಯಿದುವ ಪಿಪೀಲಿಕಂಗೆ ಅದಾವ ಜ್ಞಾನ?
ತಾನುಂಡು ನೆನೆದಡೆ ಸಾಕು ತೃಪ್ತಿಯಹ ಕೂರ್ಮಂಗೆ ಅದಾವ ಜ್ಞಾನ?
[ವೇದಮೂರ್ತಿ ಸಂಗಣ್ಣ ಸಂ ೯.೧೦೬]

ಯಜ್ಞದಂಥ ಸಾಮೂಹಿಕ ಆಚರಣೆಗಳು ಮುಖ್ಯವಲ್ಲ, ವೈಯಕ್ತಿ ಅನುಭವವೇ ಪ್ರಮಾಣ ಎಂಬುದಕ್ಕೆ ಪ್ರಾಧಾನ್ಯ ನೀಡಿದ್ದು ವಚನಗಳಲ್ಲಿ ನಡೆದ ಇನ್ನೊಂದು ಮುಖ್ಯವಾದ ವಿಚಾರ ಪಲ್ಲಟ. ಯಜ್ಞವೆಂಬ ಧಾರ್ಮಿಕ ಕ್ರಿಯೆ ಯಜ್ಞ ನಡೆಸುವವನ ಪರವಾಗಿ ಮತ್ತೊಬ್ಬರು, ಹಲವರು ನಡೆಸುವ ಕ್ರಿಯೆ; ಧರ್ಮದ ಅನುಭವವೆಂಬುದು ತಾನುಂಬ ಊಟದ ಹಾಗೆ, ತನ್ನದೇ ರತಿಸುಖದ ಹಾಗೆ ತಾನೇ ಪಡೆಯಬೇಕಾದ, ಪಡಬೇಕಾದ ಸಂಗತಿ ಎಂಬುದು ವಚನಗಳ ನಿಲುವು.

'ಕಂಗಳಾಲಿಯ ಕರಿಯ ನಾಳದೊಳಗೆ ಈರೇಳು ಭುವನಂಗಳು ಅಡಗಿದವು' ಎಂಬ ಅಲ್ಲಮನ ಮಾತು ನೋಡಿ :

ಕಂಗಳಾಲಿಯ ಕರಿಯ ನಾಳದಲ್ಲಿ, ಈರೇಳು ಭುವನಂಗಳಡಗಿದವು!
ನಾಟಕ ನಾಟಕವ ರಚಿಸುತ್ತ, ಆಡಿಸುವ ಸೂತ್ರದ ಪರಿ,
ಗುಹೇಶ್ವರಲಿಂಗ ನಿರಾಳಚೈತನ್ಯ. [ಅಲ್ಲಮ, ಸಂ. ೨. ೧೪೪]

ಜಗತ್ತು ಹೊರಗೆ ಇಲ್ಲ, ನಮ್ಮೊಳಗೇ ಇದೆ, ಇಡೀ ವಿಶ್ವವವೇ ನಮ್ಮ ಅಂತರಂಗದಲ್ಲಿದೆ ಅನ್ನುವುದು ವಚನಗಳ ಒಂದು ತಾತ್ವಿಕತೆ. ಅದು ನಮ್ಮ ಅರಿವಿಗೆ ಬರುವ ಹಾಗೆ ನಮ್ಮನ್ನು ನಾವು ಹೇಗೆ ತಿದ್ದಿಕೊಳ್ಳಬೇಕು, ಅಂತರಂಗದ ಕ್ರಾಂತಿ ಸಂಭವಿಸುವುದು ಹೇಗೆ ಅನ್ನುವುದು ವಚನಗಳ ಹುಡುಕಾಟ. ಹೀಗೆ ವಿಶ್ವವೇ ನಮ್ಮೊಳಗೆ ಇದ್ದರೆ ಆಗ ಪ್ರತ್ಯೇಕತೆಗೆ ತಾವಿಲ್ಲ. ನಮ್ಮ ಬುದ್ಧಿ, ನಮ್ಮ ಬಯಕೆ, ನಮ್ಮ ದೇಹ, ನಮ್ಮ ಮಾತು ಇವೆಲ್ಲ ಬೇರೆ ಬೇರೆ ಅನ್ನಿಸಿದರೂ, ಇವು ಒಂದೊಂದೂ ಒಂದೊಂದು ದ್ವೀಪವಾಗಿದೆ ಎಂದು ಆಧುನಿಕ ಮನಸ್ಸಿಗೆ ಅನ್ನಿಸಿದರೂ ಅಲ್ಲಮ ವಚನ ಹೇಳುವುದೇ ಬೇರೆ. ತನು, ಮನ, ಆಪ್ಯಾಯನ, ವಚನ ಇವೆಲ್ಲ ದ್ವೀಪಗಳನ್ನೂ ಗುಹೇಶ್ವರನೆಂಬ ನದಿ ಅಥವ ಕಡಲು ಒಗ್ಗೂಡಿಸಿದೆ ಎನ್ನುತ್ತಾನೆ :

ತನು ಒಂದು ದ್ವೀಪ, ಮನ ಒಂದು ದ್ವೀಪ,
ಆಪ್ಯಾಯನ ಒಂದು ದ್ವೀಪ, ವಚನ ಒಂದು ದ್ವೀಪ._
ಇಂತೀ ನಾಲ್ಕು ದ್ವೀಪದೆಡೆಯ ಬೆಸಗೊಂಬಡೆ
ಗುಹೇಶ್ವರಾ_ನಿಮ್ಮ ಸ್ಥಾನಂಗಳು. [ಅಲ್ಲಮ, ೨. ೫೯೪]

ಬೆಟ್ಟದ ನೆಲ್ಲಿಯ ಕಾಯಿ, ಕಡಲಿನ ಉಪ್ಪು, ಮಾವಿನ ಮರ, ಕೋಗಿಲೆ ಎಲ್ಲಲ್ಲಿಯೋ ಇರುವ ಯಾವ ಯಾವ ಸಂಗತಿಗಳಿಗೂ ಸಂಬಂಧ ಇದ್ದೇ ಇದೆ ಎಂದು ಅವನ ಇನ್ನೊಂದು ವಚನ ಹೇಳುತ್ತದೆ :

ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ ?
ಬೆಟ್ಟದ ಮೇಲಣ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯಾ ?
ಗುಹೇಶ್ವರಲಿಂಗಕ್ಕೆಯೂ ನಮಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ. [ಅಲ್ಲಮ, ೨. ೫೯]

ಹಾಗೆ 'ಸಂಬಂಧ' ಅನ್ನುವುದನ್ನು ವಚನಕಾರರು ತೀರ ವಿವರವಾಗಿ, ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಇಡೀ ಬದುಕಿನ ಸಂಬಂಧಜಾಲ, ಏಕತೆ ವಚನಗಳ ತಾತ್ವಿಕತೆಯ ಬಹಳ ಮುಖ್ಯ ಸಂಗತಿ.

ಇದು ಅರಿವಿಗೆ ಬರುವುದಕ್ಕೆ ಚಾರಿತ್ರಿಕವಾದ, ವ್ಯಾವಹಾರಿಕವಾದ ಕಾಲವನ್ನು, ನಿನ್ನೆಯ ನೆನಪು ನಾಳೆಯ ಕನಸುಗಳನ್ನು ಇಲ್ಲವಾಗಿಸಿ ಇಂದು, ಈ ಕ್ಷಣದ ಅರಿವು–ಅನುಭವಗಳನ್ನು ಪಡೆಯಬೇಕು; ನೆಲವ ಬಿಟ್ಟು ಮುಗಿಲಲ್ಲಿ ಮಿಂಚುವ ಹಾಗೆ ಬದುಕಬೇಕು ಅನ್ನುವ ಆಧ್ಯಾತ್ಮಿಕ ಆದರ್ಶವನ್ನೂ ಹೇಳುತ್ತವೆ. ಮನುಷ್ಯನು ಕಾಲವಶನಲ್ಲ, ಕಾಲವೇ ಮನುಷ್ಯನ ಕಲ್ಪನೆ ಎಂಬುದು ಅಂತರಂಗದ ಕ್ರಾಂತಿಗೆ ಸಂಬಂಧಿಸಿದ ಮುಖ್ಯವಾದ ಮಾತು :

ಅರಿವು ಅರಿವು ಎನುತಿಪ್ಪಿರಿ, ಅರಿವು ಸಾಮಾನ್ಯವೆ ?
ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯನರಿಯಬಾರದು.
ಮುಂದಣ ಹೆಜ್ಜೆಯಳಿದಲ್ಲದೆ, ಒಂದು ಪಾದ ನೆಲೆಗೊಳ್ಳದು.
ನೆಲನ ಬಿಟ್ಟು ಆಕಾಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ
ತಾನಾಗಬಾರದು._ಗುಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ?
[ಅಲ್ಲಮ, ೨. ೪೭೫]

ಇದು ಎಲ್ಲರಿಗೂ ಸಾಧ್ಯವಾಗದಿರಬಹುದು. ಆದರೆ ದೈವದ, ಧರ್ಮದ ಅನುಭವ ದೇಹದ ಅನುಭವವಾಗಿಯೇ ಮನುಷ್ಯರಿಗೆ ದಕ್ಕುವುದು ಎಂಬ ನಿಲುವು ಕೂಡ ಗಮನಾರ್ಹವಾಗಿದೆ. ದೇವರು ಕೂಡ ಕೇವಲ ಕಣ್ಣಿಗೆ ಕಾಣುವ ಸಾಕ್ಷಾತ್ ನೋಟಮಾತ್ರವಲ್ಲ ಸ್ಪರ್ಶದ ಆಪ್ತ, ಆತ್ಮೀಯ ಅನುಭವವೇ ಆಗಬೇಕು. ಮಾಗಿಯಲ್ಲಿ ಹುಲ್ಲಿನೆಸಳ ಮೇಲಿನ ಇಬ್ಬನಿಯ ಸ್ಪರ್ಶದ ಹಾಗೆ ದೇವರ ಅನುಭವ ಎಂಬರ್ಥದ ಮಾತು ಗಜೇಶ ಮಸಣಯ್ಯನಲ್ಲಿದೆ :

ಮಾಗಿಯ ಹುಲ್ಲಿನ ಸೋಂಕಿನಂತೆ
~~ತನು~~ ಪುಳಕಿತಳಾದಳವ್ವೆ.
ನುಡಿ ತೊದಳು ಆತನ ಒಲವೆ ಆಧಾರವಾಗಿದ್ದಳವ್ವೆ.
ಬಿಳಿಯ ತುಂಬಿ ಕುಂಕುಮ ರಸದಲ್ಲಿ ಬಂಡುಂಡಂತೆ.
ಮಹಾಲಿಂಗ ಗಜೇಶ್ವರನಲ್ಲಿ
ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ [ಗಜೇಶಮಸಣಯ್ಯ, ೭. ೨೪೮]

ಮೈಯಲ್ಲಿ ಪುಳಕತೋರದಿದ್ದರೆ, ಕಣ್ಣಲ್ಲಿ ಕಂಬನಿ ಬಾರದಿದ್ದರೆ, ದನಿ ಗದ್ಗದಿಸದಿದ್ದರೆ ನಾನೆಂಥ ಭಕ್ತ ಎಂದು ಬಸವಣ್ಣ ಕೇಳುವುದುಂಟು :

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ,
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ [ಬಸವಣ್ಣ, ೧. ೩೭೯]

ಭಕ್ತಿ ಕೂಡ ದೈಹಿಕ ಅನುಭವವಾಗಿಯೇ ವ್ಯಕ್ತವಾಗಬೇಕು. ಸೋಂಕಿನ ಸಹಜತೆ ಫಲಿಸಬೇಕು ಎನ್ನುವುದು ಅಲ್ಲಮನ ನುಡಿ :

ಅರಿವಿನ ಬಲದಿಂದ ಕೆಲಬರು
ಅರಿಯದವರ ಗೆಲಬೇಕೆಂದು,
ಬರುಮಾತಿನ ಉಯ್ಯಲೆಯನೇರಿ, ಒದೆದು ಒರಲಿ ಕೆಡೆವ ದರಿದ್ರರು !
ಅರಿವು ತೋರದೆ ಇರಬೇಕು_ಕಾಯನಿರ್ಣಯ ನಿಃಪತಿಯೆಂಬಾತನು.
ಸೋಂಕಿನ ಸೋಜಿಗವೆಂಬ ಪರಿಣತೆ ಫಲಿಸಬೇಕು,
ಅರಿವು ತೋರದೆ ಎರಡೆಂಬ ಭಿನ್ನವೇಷವ ತೊಟ್ಟು
ಡಂಬಕವ ನುಡಿದೆಹೆವೆಂಬ ಉದ್ದಂಡರ
ಗುಹೇಶ್ವರ ಕಂಡರೆ ಕನಲುವ [ಅಲ್ಲಮ ೨. ೪೮೮]

ಜಗದಗಲ ಮಿಗಿಲಗಲ ಇರುವ ದೇವರು ಇಷ್ಟು ಚುಳುಕಾಗಿ ಅಂಗೈಯಲ್ಲಿ ಬಂದಿದ್ದಾನಲ್ಲ ಎಂಬ ಅಚ್ಚರಿಯೂ ಇದೆ. ದೇಹವಿರದಿದ್ದರೆ ಚನ್ನಮಲ್ಲಿಕಾರ್ಜುನ ತನ್ನನ್ನು ಹೇಗೆ ಒಲಿಯುತ್ತಾನೆ ಎಂದು ಅಕ್ಕ ಚಡಪಡಿಸುತ್ತಾಳೆ :

ಬೆಟ್ಟಕ್ಕೆ ಸಾರವಿಲ್ಲೆಂಬರು
ತರುಗಳು ಹುಟ್ಟುವಪರಿ ಇನ್ನೆಂತಯ್ಯಾ ?
ಇದ್ದಲಿಗೆ ರಸವಿಲ್ಲೆಂಬರು ;
ಕಬ್ಬುನ ಕರಗುವಪರಿ ಇನ್ನೆಂತಯ್ಯಾ ?
ಎನಗೆ ಕಾಯವಿಲ್ಲೆಂಬರು;ಚೆನ್ನಮಲ್ಲಿಕಾರ್ಜುನನೊಲಿವಪರಿ ಇನ್ನೆಂತಯ್ಯಾ?
[ಅಕ್ಕ, ೫.೩೦೬]

ಲಿಂಗಾಂಗ ಸಾಮರಸ್ಯ, ಶರಣಸತಿ-ಲಿಂಗಪತಿ ಎಂಬ ಆಧ್ಯಾತ್ಮಿಕ ಪರಿಕಲ್ಪನೆಗಳು ಕೂಡ ದೈಹಿಕಾನುಭವದ ತಳಹದಿಯವೇ ಆಗಿವೆಯಲ್ಲವೇ? ಇಂಥ ಅನುಭವ ವಿಚಾರಕ್ಕೆ ನಿಲಕುವುದಲ್ಲ. ವಿಚಾರವೆಂದು ಸಂದೇಹಕ್ಕೆ ಒಳಗು ಎನ್ನುವ ಮಾತು ವಚನಗಳಲ್ಲಿ ಕಾಣುತ್ತದೆ :

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ.
ವಿಚಾರಿಸುವನ್ನಕ್ಕರ ನೀನಾರೆಂಬುದನೆತ್ತ ಬಲ್ಲೆ?
ಮರುಳೆ ವಾಙ್ಮನೋತೀತವಾದ ಘನವು ವಿಚಾರಕ್ಕೆ ನಿಲುಕುವುದೆ?
ಗುಹೇಶ್ವರನೆಂಬ ಲಿಂಗವು ತನ್ನ ತಿಳಿದು ನೋಡಿಹೆನೆಂಬವರ[ನು]
ವಿಚಾರವೆಂಬ ಬಲೆಯಲ್ಲಿ ಕೆಡಹಿದನು [ಅಲ್ಲಮ ೨. ೧೫೨೫]

ಆದರೆ, ಕೇವಲ ವೈಯಕ್ತಿಕ ಅನುಭವವಾಗಿ ಮಾತ್ರ ಉಳಿದುಕೊಂಡರೆ ಅದು ಭಾವುಕವೆಂದೋ, ಕಲ್ಪನೆಯೆಂದೋ, ಭ್ರಮೆಯೆಂದೋ ಅನುಮಾನಕ್ಕೆಡೆಮಾಡಿಕೊಡಬಹುದು. ಅನುಭವವನ್ನೂ ಅರಿವಾಗಿಸುವುದು, ಅನುಭವವನ್ನು ಜ್ಞಾನವಾಗಿಸುವುದು ಕೂಡ ವಚನಗಳ ಮುಖ್ಯ ಆಸಕ್ತಿ. ಆಗ ಮಾತ್ರವೇ ವಚನಾನುಭವ ಮುಂದಿನ ತಲೆಮಾರಿಗೆ ದಕ್ಕುವುದಕ್ಕೆ ಸಾಧ್ಯ. ಹೀಗೆ ಅರಿವಾಗಿ ಪರಿವರ್ತಿತವಾದ ಅನುಭವವನ್ನೇ ಅನುಭಾವವೆಂದು ಕರೆಯುತ್ತಾರೆ. ಪಶ್ಚಿಮದೇಶಗಳಲ್ಲಿ ಅನುಭಾವ ಎಂಬ ಮಾತು ಮೌನಕ್ಕೆ ತರ್ಕಾತೀತ ನಿಲುವಿಗೆ ಸಂಬಂಧಿಸಿದ್ದು. ಆದರೆ ವಚನಗಳಲ್ಲಿ ಅನುಭಾವವೆಂಬುದು ಸಂವಾದ ಎಂಬ ಅರ್ಥದಲ್ಲಿ, ಸಮಾನ ಅನುಭವಿಗಳ ವಿಚಾರ ವಿನಿಮಯ ಎಂಬರ್ಥದಲ್ಲಿ ಬಳಕೆಯಾಗಿದೆ, ಅನುಭಾವಕ್ಕೆ ಹಾಗೆ ಸಾಮಾಜಿಕ ಜವಾಬ್ದಾರಿ ಬಂದಿದೆ.

ಸೃಷ್ಟಿಕರ್ತನೋ ನ್ಯಾಯಾಧೀಶನೋ ಆದ ದೇವರು ಮೂರ್ತಿಗೊಂಡು ದೇವಸ್ಥಾನ ನಿರ್ಮಾಣವಾದದ್ದು ಒಂದು ಹಂತ. ಅಲ್ಲಿಂದ ಬಿಡುಗಡೆ ಪಡೆದು ಉತ್ಸಮೂರ್ತಿಯಾಗಿ ಜನರ ನಡುವೆ ಅಡ್ಡಾಡಿದ್ದು ಇನ್ನೊಂದು ಹಂತ. ಇದು ಸಾಧ್ಯವಾದದ್ದು ರಾಮಾನುಜಾಚಾರ್ಯರ ಕಾಲದಲ್ಲಿ ಎಂಬ ಮಾತಿದೆ. ಜನರ ನಡುವೆ ಬೀದಿಯಲ್ಲಿ ಅಲೆವ ದೇವರು ಮನುಷ್ಯ ವ್ಯಕ್ತಿಯ ದೇಹಕ್ಕೇ ತಾಗಿಕೊಂಡು ಸದಾ ಇರುವ ಸ್ಪರ್ಶಾನುಭವವಾದದ್ದು ನಿಜವಾದ ಆಧ್ಯಾತ್ಮಿಕ ಕ್ರಾಂತಿ, ಸಮಾಜದ ವಿಕಾಸದ ಪ್ರಮುಖ ಘಟ್ಟ. ಇಂಥ ಸ್ಪರ್ಶಾನುಭವ, ಅನುಭಾವ ಅರಿವಾಗಿ ಪರಿವರ್ತನೆ ಹೊಂದುವಾಗ ಪ್ರಜ್ಞೆಯ ಬೇರೆಯ ಸ್ತರವನ್ನೇ ಉದ್ದೇಶಿಸುವ ಬೇರೆಯ ರೀತಿಯ, ಮಾಮೂಲಿಯಲ್ಲದ ಭಾಷೆಯ ಬಳಕೆಯೂ ಆಗಿರುವುದನ್ನು ವಚನಗಳಲ್ಲಿ ಕಾಣಬಹುದು.

ಮನುಷ್ಯ ವ್ಯಕ್ತಿತ್ವ, ಬಾಳು, ಸಮಾಜ, ಎಲ್ಲವೂ ಅಖಂಡವಾಗಿವೆ ಎಂಬುದು ವಚನಗಳ ತಾತ್ವಿಕತೆಯ ಬಹಳ ಮುಖ್ಯ ಅಂಶ. ಅಂತರಂಗವೆಂದಡೆ ಬಹಿರಂಗ ಮುಂದುಗೊಂಡಿಪ್ಪುದು, ಬಹಿರಂಗವೆಂದರೆ ಅಂತರಂಗ ಮುಂದುಗೊಂಡಿಪ್ಪುದು:

ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನಾರು ಬಲ್ಲರು ಹೇಳಾ ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು.
ಬಹಿರಂಗವೆಂಬ ಶಬ್ದಕ್ಕೆ ಅಂತರಂಗ ಮುಂದುಗೊಂಡಿಪ್ಪುದು.
ಮನವನೆಡೆಗೊಂಡ ಲಿಂಗದ ಅರಿವು,
ವಿಚಾರ ವ್ಯಾಕುಲಕ್ಕೊಳಗಾಗಬಾರದೆಂದು
ಮನ ಭಾವ ಜ್ಞಾನ ನೋಟಕ್ಕೆ ತಂದು, ಕರಸ್ಥಲದಲ್ಲಿ ನಿಕ್ಷೇಪಿಸಿ
ಅಂತರಂಗ ಬಹಿರಂಗವೆಂದರಿಯದೆ, ಅನಿಮಿಷನಾಗಿಪ್ಪನು ಶರಣನು.
ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ
ತೇಜ (ಜಂಗಮ?)ವೆಂಬ ದರ್ಪಣವ ಹಿಡಿದಿಪ್ಪ ನೋಡಯ್ಯಾ.
ಗುಹೇಶ್ವರಲಿಂಗದಲ್ಲಿ ನಿಜವನೆಯ್ದಿಹೆನೆಂದಡೆ,
ಕುರುಹುವಿಡಿದು ಕುರುಹುಗೆಡಬೇಕು ನೋಡಾ ಸಿದ್ಧರಾಮಯ್ಯಾ.
[ಅಲ್ಲಮ ೨. ೯೪೫]

ಎಂಬ ಮಾತನ್ನು ನೋಡಿ. ಖಾಸಗಿ ಮತ್ತು ಸಾರ್ವಜನಿಕ ಎಂಬ ವಿಂಗಡಣೆಯಂತೆಯೇ ವ್ಯಕ್ತಿ ಮತ್ತು ಸಮಾಜ ಎಂಬ ವಿಂಗಡಣೆಯೂ, ಎರಡೂ ಭಿನ್ನವೆಂಬ ನಿಲುವೂ ಸರಿಯಲ್ಲ ಎಂದೇ ವಚನಗಳು ಹೇಳುತ್ತವೆ. ಇಂಥ ದ್ವಂದ್ವವೇ ಆಧುನಿಕ ಬದುಕಿನ ಹಲವು ಬಿಕ್ಕಟ್ಟುಗಳಿಗೆ, ಮನಸಿನ ಅಸ್ವಸ್ಥತೆಗೆ ಕಾರಣವಾಗಿದೆ. ಈ ಅಭಿನ್ನತೆ ಆಚಾರ-ವಿಚಾರ, ನಡೆ-ನುಡಿ, ಇಂಥ ಎಲ್ಲ ಎರಡೆಂಬಂತೆ ತೋರುವ ಜೋಡಿಕಲ್ಪನೆಗಳಿಗೂ ಅನ್ವಯವಾಗುತ್ತದೆ. ಮುತ್ತಿನ ಹಾರದ ಹೊರಗಿನ ಹೊಳಪಲ್ಲ, ಮಾಣಿಕ್ಯದ ದೀಪ್ತಿಯಂತೆ ಒಳಗಿನಿಂದ ಮೂಡುವ ಬೆಳಕೂ ಅಲ್ಲ, ಸ್ಫಟಿಕದ ಶಲಾಕೆಯಂತೆ ಒಳಗು-ಹೊರಗು ಎಂಬ ಭಿನ್ನತೆ ಇರದ ಅಖಂಡ ಬೆಳಕಿನಂಥ ವ್ಯಕ್ತಿತ್ವ ಮೂಡಬೇಕು ಎಂಬುದು ಬಸವಾಪೇಕ್ಷೆ. ಈ ನಿಲುವಿನ ಕಾರಣದಿಂದಲೇ ವಚನಗಳಲ್ಲಿ ಗಂಡು-ಹೆಣ್ಣು, ಮೇಲು ಜಾತಿ ಕೆಳಜಾತಿ ಇಂಥ ಮೇಲು ಕೀಳುಗಳ ವ್ಯತ್ಯಾಸವನ್ನೂ ಸುಳ್ಳೆಂದು ನಿರ್ದಾಕ್ಷಿಣ್ಯವಾಗಿ ಹೇಳಲಾಗಿದೆ.


ವಿಚಾರಗಳ ಮಂಡನೆಗೆ ಹೋಲಿಕೆಗಳು ಮುಖ್ಯವಾದ ಉಪಮೆ, ರೂಪಕಗಳ ದಾರಿ, ತಬ್ಬಿಬ್ಬಾಗಿಸುವ ವಿರೋಧಾಭಾಸಗಳನ್ನು ಮುಂದೊಡ್ಡುವ ದಾರಿ, ಆಪ್ತ ಭಾವನಾತ್ಮಕ ನುಡಿಯನ್ನು ಬಳಸುವ ದಾರಿ ಇವು ಮೂರೂ ಬಳಕೆಯಾಗಿರುವುದನ್ನು ನೋಡಬಹುದು. ಬಸವ, ಅಲ್ಲಮ ಮತ್ತು ಅಕ್ಕ ಈ ಮೂರು ದಾರಿಗಳ ಪ್ರಮುಖ ಪ್ರತಿನಿಧಿಗಳು. ಈ ಮೂರೂ ದಾರಿಗಳಲ್ಲಿ ಸಾಗುತ್ತ ಅರ್ಥದ ಆಲಯವನ್ನು ಕಟ್ಟುತ್ತಲೂ, ಕಟ್ಟಿದ ಆಲಯವನ್ನು ಬಯಲಾಗಿಸಿ ಅನುಭವವೇ ಮುಖ್ಯ ಎನ್ನುತ್ತಲೂ ವಚನಗಳು ಕನ್ನಡದ ಅಚ್ಚರಿಗಳಾಗಿ ನಮಗೆ ದೊರೆತಿವೆ.

ಸ್ಥೂಲವಾಗಿ ಹೇಳುವುದಾದರೆ ಮನುಷ್ಯರ ಎಲ್ಲ ವಿಚಾರಗಳೂ ತತ್ವಗಳೂ ಅಧಿಕಾರದ ಆಸೆಯಿಂದ ಪ್ರೇರಿತವಾಗಿರುತ್ತವೆ, ಅಥವಾ ಪ್ರೀತಿಯಿಂದ ಮೂಡಿರುತ್ತವೆ. ಅಧಿಕಾರದ ಆಸೆಯಿಂದ ಪ್ರೇರಿತವಾದ ತತ್ವಗಳು ಅಸಮಾನತೆ, ಅಧಿಕಾರ, ದುರಾಸೆ, ಸ್ವಸಮರ್ಥನೆ, ಅನ್ಯರ ನಿಂದನೆ, ಇಂಥ ಎಲ್ಲ ಬಗೆಯ ಸಲ್ಲದ ಗುಣಗಳನ್ನು ಬೆಳೆಸುತ್ತ ಸುಖವೇ ಮುಖ್ಯವೆನ್ನುತ್ತವೆ; ಪ್ರೀತಿಯ ತತ್ವಗಳು ಸಮಾನತೆ, ಸಹನೆ, ತಿಳಿವು, ಅರಿವುಗಳನ್ನು ಬೆಳೆಸುತ್ತ ಸುಖವಲ್ಲ ಸಂತೋಷವೇ ಮುಖ್ಯವೆನ್ನುತ್ತವೆ. ವಚನಗಳದ್ದು ಪ್ರೀತಿ ಮತ್ತು ಸಂತೋಷದ ತಾತ್ವಿಕತೆ. ಕುತೂಹಲದಿಂದ ಹುಡುಕುವವರಿಗೆ ನಾಗಾರ್ಜುನ, ಅಭಿನವಗುಪ್ತ, ಪಂಪ, ತಮಿಳಿನ ಶೈವ ಪಂಥ, ಯೋಗ, ಸೂಫೀ ತತ್ವ ಇಂಥ ಹಲವು ಚಿಂತನ, ತತ್ವಧಾರೆಗಳಿಗೂ ವಚನಗಳಿಗೂ ಇರುವ ಸಂಬಂಧ ಗುರುತಿಸುವುದು

ಸಾಧ್ಯವಾಗುತ್ತದೆ, ವಚನಗಳು ಹೇಗೆ ಎಷ್ಟು ವಿಶಿಷ್ಟ ಎನ್ನುವುದನ್ನೂ ಕಂಡುಕೊಳ್ಳಬಹುದು. ಅದು ಬುದ್ಧಿಯ ದಾರಿಯ ಹುಡುಕಾಟ. ನಮ್ಮ ಇಂದಿನ ಬದುಕಿಗೆ ಅಗತ್ಯವಾದ ತತ್ವಗಳನ್ನು ವಚನಗಳಲ್ಲಿ ಕಂಡು ನಮಗೆ ನಮ್ಮ ಸುತ್ತಲ ಬದುಕಿಗೆ ಅನ್ವಯಿಸಿಕೊಂಡು ಜಾರಿಗೆ ತಂದುಕೊಳ್ಳುವುದು ಒಬ್ಬೊಬ್ಬರೂ ಮಾಡಬಹುದಾದ ಕೆಲಸ. ಹೀಗೆ ನಮ್ಮ ಇಂದಿನ ಅಗತ್ಯಕ್ಕೆ ಒದಗುವ ಕನ್ನಡ ಪಠ್ಯಗಳು ಬಹಳವಿಲ್ಲ. ಇರುವ ಕೆಲವನ್ನೂ ನಾವು ಒಣ ಭಾಷಣದ ವಸ್ತುವಾಗಿಸಿಕೊಂಡು, ಅನುಭವದ ಜೀವಂತಿಕೆಯನ್ನು ಕಳೆದು ಕುರುಹಿನ ಮತಧರ್ಮವಾಗಿಸಿ ಹಾಳುಮಾಡಿಕೊಳ್ಳುತಿದ್ದೇವೆ ಅನ್ನುವುದು ವಾಸ್ತವ ದುರಂತ. ಭೌತಿಕ ಸಂಪತ್ತನ್ನು ಎಷ್ಟೇ ಕೂಡಿಟ್ಟುಕೊಂಡರೂ ಅನುಭವಿಸುವ ದೇಹ ಮನಸ್ಸುಗಳಿಗೆ ಮಿತಿ ಇದೆ ಎಂಬ ಬಲು ದೊಡ್ಡ ಎಚ್ಚರಿಕೆಯನ್ನು ಈ ವಚನ ಹೇಳುತ್ತಿದೆ:

ಆನೆ ಕುದುರೆ ಭಂಡಾರವಿರ್ದಡೇನೊ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ?
ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.
ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ

[ಮೋಳಿಗೆಯ ಮಾರಯ್ಯಮ ೮.೧೫೧೧]



(ಲೇಖಕ ಓ.ಎಲ್. ನಾಗಭೂಷಣ ಸ್ವಾಮಿ ನಿವೃತ್ತ ಇಂಗ್ಲಿಷ್ ಅಧ್ಯಾಪಕರು ಮತ್ತು ಕನ್ನಡದ ಹಿರಿಯ ಸಂಸ್ಕೃತಿ ಚಿಂತಕರೂ, ಅನುವಾದಕರೂ ಆಗಿದ್ದಾರೆ)

ಇದು ಉಪಜಾತಿಗಳ ನಡುವಣ ಜಗಳ ಮಾತ್ರ

–ಡಾ, ರಾಜೇಂದ್ರ ಚೆನ್ನಿ

ಜಗತ್ತಿನ ಯಾವ ತಜ್ಞರ ಸಮಿತಿಯೂ ಈ ವಿವಾದಕ್ಕೆ ಪರಿಹಾರವನ್ನು ನೀಡಲಾರದು. ಯಾಕೆಂದರೆ ಭಾರತದಲ್ಲಿ ಇಂದು ಧರ್ಮವು ನಂಬಿಕೆ, ಶ್ರದ್ಧೆ, ತತ್ವ ಚಿಂತನೆಗಳ ಜೊತೆಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ಅದು ಅಪವಿತ್ರ ರಾಜಕೀಯದ ಇನ್ನೊಂದು ಮುಖ ಮಾತ್ರವಾಗಿದೆ.


ವೀರಶೈವ ಲಿಂಗಾಯತ ವಿವಾದವು ಹೊಸದೇನಲ್ಲ. ಕೇವಲ ಆಧುನಿಕ ಕಾಲದ ಬಗ್ಗೆ ಮಾತನಾಡುವುದಾದರೆ ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಹಾಗೂ ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಇದು ತೀವ್ರವಾಗಿತ್ತು. ಇದಕ್ಕೆ ಕಾರಣವೆಂದರೆ ವಸಾಹತುಶಾಹಿಯು ತೆರೆದಿಟ್ಟ ಶಿಕ್ಷಣ ಹಾಗೂ ಉದ್ಯೋಗಗಳ ಅವಕಾಶಗಳನ್ನು ಬಳಸಿಕೊಳ್ಳಲು ಸಂಖ್ಯಾಬಲ ಹಾಗೂ ಆರ್ಥಿಕ ಶಕ್ತಿಯುಳ್ಳ ಅತಿದೊಡ್ಡ ಬ್ರಾಹ್ಮಣೇತರ ವರ್ಗವಾಗಿದ್ದ ಲಿಂಗಾಯತ ಸಮುದಾಯವು ಆ ಕಾಲದಲ್ಲಿ ಸಂಘಟಿತವಾಗತೊಡಗಿತು ಹಾಗೂ ಬ್ರಾಹ್ಮಣ ಸಮುದಾಯದೊಂದಿಗೆ ಪೈಪೋಟಿಯಲ್ಲಿ ತೊಡಗಿತು. ಈ ಪೈಪೋಟಿಯ ಒಂದು ತಿರುವೆಂದರೆ ಪ್ರಧಾನವಾಗಿ ಪುರೋಹಿತಶಾಹಿ ಅಥವಾ ಜಂಗಮ ಉಪಜಾತಿಗೆ ಸೇರಿದ ವೀರಶೈವರು ತಾವು ಲಿಂಗೀ ಬ್ರಾಹ್ಮಣರು, ವೇದಾಧ್ಯಯನ ಮಾಡುವವರು, ಸಂಸ್ಕೃತ ಕಲಿತವರು ಜನಿವಾರಕ್ಕೆ ಸಮನಾದ ಶಿವದಾರವನ್ನು ಧರಿಸುವವರು ಎಂದು ಸಾರ್ವಜನಿಕವಾಗಿ ಪತ್ರಿಕೆಗಳಲ್ಲಿ ಹಾಗೂ ಕೋರ್ಟುಗಳಲ್ಲಿ ವಾದಿಸತೊಡಗಿದರು. ವೀರಶೈವರಲ್ಲೂ ವರ್ಣವ್ಯವಸ್ಥೆಯಿದೆಯೆಂದೂ ವಾದಿಸಿದರು! ಇದಕ್ಕೆ ಐತಿಹಾಸಿಕ ಕಾರಣವೆಂದರೆ ೧೨ನೇ ಶತಮಾನದ ಶರಣರು ಎಲ್ಲಾ ನಿಮ್ನ ಜಾತಿಯವರನ್ನು ತಮ್ಮ ಧರ್ಮದಲ್ಲಿ ಸ್ವೀಕರಿಸಿದರೂ ಆಯಾ ಉಪಜಾತಿಗಳು ಒಂದುಗೂಡದೇ ಉಳಿದುಕೊಂಡವು.

ಹೀಗಾಗುವುದಕ್ಕೆ ಕಾರಣವೆಂದರೆ ಜಂಗಮರೆನ್ನುವ ಪುರೋಹಿತಶಾಹಿ ವರ್ಗ. ನನ್ನ ದೃಷ್ಟಿಯಲ್ಲಿ ವಚನಕಾರ ಚಳುವಳಿ ಹಾಗೂ ಸಿದ್ಧಾಂತಗಳು ಜಂಗಮ ಪರಿಕಲ್ಪನೆಯನ್ನು ಸ್ವೀಕರಿಸಿದ್ದರಿಂದಲೇ ತಮ್ಮ ಕ್ರಾಂತಿಕಾರಿ ಸತ್ವವನ್ನು ಕಳೆದುಕೊಂಡು ಜಾತಿವ್ಯವಸ್ಥೆಯಲ್ಲಿ ಶಾಮೀಲಾಗುವುದು ಸಾಧ್ಯವಾಯಿತು. ಅಕ್ಕ, ಬಸವ, ಅಲ್ಲಮರು ಜಂಗಮವರ್ಗವನ್ನು ಒಪ್ಪಿಕೊಂಡರೆಂದು ನಂಬುವುದು ಕಷ್ಟ ಹಾಗೆ ಒಪ್ಪಿಕೊಂಡಿದ್ದರೆ ಅದು ಆತ್ಮ–ವಿನಾಶದ ಕೆಲಸವಾಗಿತ್ತು. ಸಂಪ್ರದಾಯನಿಷ್ಠ ಜಂಗಮ ವರ್ಗವು ವಚನಕಾರ ಧರ್ಮವನ್ನು ವೈದಿಕೀಕರಣಗೊಳಿಸಿತು. ಜೊತೆಗೆ ಈ ಧರ್ಮವನ್ನು ಕೇವಲ ಉಪಜಾತಿಗಳಲ್ಲಿ ಹಂಚಿಹೋದ ಜಾತಿಯನ್ನಾಗಿ ಪರಿವರ್ತಿಸಲು ಸಹಾಯವಾಯಿತು. ಇದು ನಮ್ಮ ಬಹುಪಾಲು ಭಕ್ತಿ ಪರಂಪರೆಗಳ ಗತಿಯೂ ಆಗಿದೆ. ಗುರು ಸಂಪ್ರದಾಯ ಪಂಚಾಚಾರ್ಯ ಸಂಪ್ರದಾಯವೆಂದು ಕರೆಯಲಾಗುವ ಉಪಜಾತಿಯವರು ನಿಮ್ನ ವರ್ಗಗಳಿಂದ ಬಂದ ಲಿಂಗಾಯತರನ್ನು ಅಸ್ಪೃಶರನ್ನಾಗಿಯೇ ನೋಡಿದರು.

ಆಧುನಿಕ ಭಾರತದಲ್ಲಿ ಜಾತಿ ಹಾಗೂ ರಾಜಕೀಯಗಳು ಒಂದುಗೂಡಿದ ವಿಶಿಷ್ಟ ರೀತಿಯಿಂದಾಗಿ ಪ್ರತಿಯೊಂದು ಲಿಂಗಾಯತ ಉಪಜಾತಿಯೂ ಇಂದು ಸಂಘಟಿತವಾಗಿದೆ. ಈ ಹಿನ್ನೆಲೆಯಲ್ಲಿ ಲಿಂಗಾಯತ–ವೀರಶೈವ ವಿವಾದವು ಮೂಲತಃ ಉಪಜಾತಿಗಳ ಮಧ್ಯದ ಜಗಳವಾಗಿದೆ. ಇಲ್ಲದಿದ್ದರೆ ಪ್ರತ್ಯೇಕ ಧರ್ಮದ ಚಳುವಳಿಯು ಎರಡು ಪಂಗಡಗಳು ಪ್ರತಿದಿನವೂ ತಮ್ಮ ಸಂಖ್ಯಾಬಲವನ್ನು ಪ್ರದರ್ಶಿಸುವ ಹಾಸ್ಯಾಸ್ಪದ ಅಸಂಗತ ನಾಟಕವಾಗುತ್ತಿರಲಿಲ್ಲ. ಕರ್ನಾಟಕದ ಜನಸಂಖ್ಯೆಯ ಕಾಲು ಭಾಗದಷ್ಟು ಇರಬಹುದೆನ್ನುವ ಹೆದರಿಕೆ ಹುಟ್ಟಿಸುವ ಸಂಖ್ಯೆಯಲ್ಲಿರುವ ಸ್ವಾಮೀಜಿಗಳು ಮಾಧ್ಯಮಗಳ ಮುಂದೆ ೨೪x೭ ಬಯಲಾಟದಲ್ಲಿ ತೊಡಗಬೇಕಾಗಿರಲಿಲ್ಲ. ಯಾಕೆಂದರೆ ಅನೇಕ ಸಂಗತಿಗಳು ಬಹಳ ಸ್ಪಷ್ಟವಾಗಿದೆ. ಹಿಂದೂ ಎನ್ನುವ ಧರ್ಮವು ಇಲ್ಲವೇ ಇಲ್ಲ. ಹಿಂದೂ ಎನ್ನುವ ಸಮಾಜ ಹಾಗೂ ಜೀವನ ಪದ್ಧತಿಗಳು ಇವೆ ಹಾಗೂ ಅತ್ಯಂತ ಸಂಕೀರ್ಣವಾಗಿವೆ. ಆದರೆ ಹಿಂದೂ ಧರ್ಮದ ಪರಿಕಲ್ಪನೆಯನ್ನು ಎಷ್ಟರ ಮಟ್ಟಿಗೆ ಹಿಗ್ಗಿಸಲಾಗಿದೆಯೆಂದರೆ ಯಾವುದು ಹಿಂದೂ ಯಾವುದು ಹಿಂದೂ ಅಲ್ಲ ಎನ್ನುವುದನ್ನು ಈ ಜಗತ್ತಿನಲ್ಲಿ ಯಾರೂ ನಿರ್ಧರಿಸಲಾರರು. ಆದ್ದರಿಂದಲೇ ಲಿಂಗಾಯತ ಧರ್ಮವು ಪ್ರತ್ಯೇಕ ಧರ್ಮವೆಂದು ಹೇಳುವುದು ಸಮರ್ಥನೀಯವೇ ಆಗಿದೆ. ಆದರೆ ಹೆಚ್ಚು ಖಚಿತವಾಗಿ ವೈದಿಕ ಧರ್ಮವಲ್ಲವೆಂದು ಹೇಳಬೇಕಾಗಿದೆ. ದುರಂತವೆಂದರೆ ವಚನಕಾರ ಚಳುವಳಿಯ ಸಮಾನತೆಯ ಮೌಲ್ಯಗಳನ್ನು ಸಂಪೂರ್ಣವಾಗಿ ಮರೆತುಬಿಟ್ಟ ಲಿಂಗಾಯತರು ವೈದಿಕ–ಹಿಂದೂ ನಂಬಿಕೆ ಹಾಗೂ ಆಚರಣೆಗಳಿಂದ ದೂರವಿರುವ ಬದಲು ಇತ್ತೀಚೆಗೆ 'ಹಿಂದುತ್ವ'ದ (ಅಂದರೆ ಬಲಪಂಥೀಯ ರಾಜಕೀಯ/ಸಿದ್ಧಾಂತಗಳ) ಬೆಂಬಲಿಗರಾಗಿಬಿಟ್ಟಿದ್ದಾರೆ. ಹಿಂದುತ್ವವನ್ನು ಒಪ್ಪಿಕೊಳ್ಳುವವರು ಹಿಂದೂ ಧರ್ಮದಿಂದ ಪ್ರತ್ಯೇಕವೆಂದು ಹೇಗೆ ವಾದಿಸಿ ಗೆಲ್ಲಲು ಸಾಧ್ಯ?

ಜಗತ್ತಿನ ಯಾವ ತಜ್ಞರ ಸಮಿತಿಯೂ ಈ ವಿವಾದಕ್ಕೆ ಪರಿಹಾರವನ್ನು ನೀಡಲಾರದು. ಯಾಕೆಂದರೆ ಭಾರತದಲ್ಲಿ ಇಂದು ಧರ್ಮವು ನಂಬಿಕೆ, ಶ್ರದ್ಧೆ, ತತ್ವ ಚಿಂತನೆಗಳ ಜೊತೆಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ಅದು ಅಪವಿತ್ರ ರಾಜಕೀಯದ ಇನ್ನೊಂದು ಮುಖ ಮಾತ್ರವಾಗಿದೆ. ತಜ್ಞರಲ್ಲದ ನನ್ನಂಥ ಸಾಮಾನ್ಯರಿಗೂ ಗೊತ್ತಿರುವಂತೆ ಭಾರತದ ಯಾವುದೇ ಧರ್ಮದ ಮೂಲವನ್ನು ವಿವರಿಸುವುದು ಅಥವಾ ಒಂದು ಧರ್ಮವನ್ನು ಇನ್ನೊಂದರಿಂದ ಬೇರ್ಪಡಿಸುವುದು ಅಸಾಧ್ಯವಾದುದು. ಅಲ್ಲದೆ ಈಗಾಗಲೇ ಆರಂಭವಾಗಿರುವ ಧರ್ಮರಾಜಕಾರಣದಲ್ಲಿ ಯಾರೂ ಇತಿಹಾಸಕಾರರು, ತಜ್ಞರ ಅಭಿಪ್ರಾಯವನ್ನು ಒಪ್ಪುವ ಸಾಧ್ಯತೆ ಇಲ್ಲ. ಹೀಗಾಗಿ ನಮ್ಮ ಸಂವಿಧಾನ ಹಾಗೂ ಕಾನೂನುಗಳ ಮೂಲಕ ವೀರಶೈವ–ಲಿಂಗಾಯತರು ಪ್ರತ್ಯೇಕ ಧರ್ಮ ಅಥವಾ ಅಲ್ಪಸಂಖ್ಯಾತ ಧರ್ಮವೆಂಬ ಗುರುತನ್ನು ಪಡೆಯಲು ಪ್ರಯತ್ನಿಸಲು ಅವರನ್ನು ಬಿಟ್ಟುಬಿಡಬೇಕು. ರಾಜಕೀಯ ಪಕ್ಷಗಳಿಂದ ಈ ಸಮಸ್ಯೆಗೆ ಪರಿಹಾರವಿಲ್ಲ.

ಕೊನೆಯದಾಗಿ ನನ್ನ ಹಗಲುಗನಸನ್ನು ಹೇಳುತ್ತೇನೆ. ಲಿಂಗಾಯತ ಸಮುದಾಯವು ತನ್ನ ಚಾರಿತ್ರಿಕ ಹಾಗೂ ಧಾರ್ಮಿಕ ನೆನಪುಗಳನ್ನು ನಿಜವಾಗಿ ಪುನಶ್ಚೇತನಗೊಳಿಸಿಕೊಂಡು, ತನ್ನ ವರ್ಣ–ಜಾತಿ ವಿರೋಧಿ ಮಾನವಪರ ವಚನಕಾರ ಗುರುಗಳನ್ನು ಪ್ರಾಮಾಣಿಕವಾಗಿ ಸ್ವೀಕರಿಸಿಕೊಂಡು ಸಮಾನತೆಯ ಮೌಲ್ಯಗಳಿಗಾಗಿ ಹೋರಾಡಿದ್ದರೆ ಅದು ತನಗೇ ತಾನೇ ಪ್ರತ್ಯೇಕ ಧರ್ಮವಾಗಿ ಬೆಳೆದು ಗಟ್ಟಿಯಾದ ಮಾನವೀಯ ಪರಂಪರೆಯಾಗಿ ನಿಲ್ಲುತ್ತಿತ್ತು. ಅದರ ಪ್ರತ್ಯೇಕತೆಯೇ ಅದರ ಸತ್ವವಾಗಿರುತ್ತಿತ್ತು. ಹೀಗೆ ಸಾರ್ವಜನಿಕವಾಗಿ ಅಲವತ್ತುಕೊಂಡು ಎಲ್ಲರ ಅಪಹಾಸ್ಯಕ್ಕೆ ಕಾರಣವಾಗುತ್ತಿರಲಿಲ್ಲ.



(ನಿವೃತ್ತ ಇಂಗ್ಲಿಷ್ ಅಧ್ಯಾಪಕರಾದ ರಾಜೇಂದ್ರ ಚೆನ್ನಿಯವರು ನಮ್ಮ ನಡುವಿನ ಹಿರಿಯ ಸಂಸ್ಕೃತಿ ಚಿಂತಕರು ಮತ್ತು ರಾಜಕೀಯ ವಿಶ್ಲೇಷಕರು)


ಸಾಹಿತ್ಯ-ಸಂಸ್ಕೃತಿ, ನಾಟಕ ಕಲೆ ಇತ್ಯಾದಿ

ಶಿವಮೊಗ್ಗದ ರಂಗಾಯಣ ಕುರಿತು ಕೆಲ ಮಾತುಗಳು

ಇದ್ದಕ್ಕಿದ್ದಂತೆ ನಮ್ಮ ಸಮಾಜದಲ್ಲಿ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಆಸಕ್ತಿ -ಶ್ರದ್ಧೆ ಹೆಚ್ಚಿದಂತಿದೆ. ಹಬ್ಬ ಹರಿದಿನ, ವ್ರತ-ಸಂಕಷ್ಟಿ, ಹೋಮ ಹವನಗಳ ಮೇಲೆ ಹಣ ಸುರಿದು ಏಕೋ ತೃಪ್ತರಾಗದ, ಹೊಸ ಸಮೃದ್ಧಿಯನ್ನು ಕಂಡಿರುವ ಜಾಗತೀಕರಣದ ಫಲಾನುಭವಿ ವರ್ಗಗಳ ಕೆಲ ಜನ ಸಾಹಿತ್ಯ-ಸಂಸ್ಕೃತಿ 'ಸೇವೆ'ಯಲ್ಲಿ ಪುಣ್ಯ ಮತ್ತು ಮಾನ್ಯತೆಯನ್ನು ಸಂಪಾದಿಸಿಕೊಳ್ಳ ಹೊರಟಂತಿದೆ. ಹೊಸ ಹೊಸ ಪ್ರಶಸ್ತಿಗಳ ಸುರಿಮಳೆಯೇ ಆಗುತ್ತಿದೆ. ಇಷ್ಟು ದಿನ ಬಡತನವನ್ನು ಅನುಭವಿಸಿ ಸುಸ್ತಾಗಿಹೋಗಿದ್ದ ನಮ್ಮ ಸಾಹಿತ್ಯ-ಸಂಸ್ಕೃತಿ ಜೀವಿಗಳು ಈ ಸುರಿಮಳೆಯಲ್ಲಿ ಮಿಂದು ಪಾವನರಾಗುತ್ತಿದ್ದಾರೆ. ದಿನ ನಿತ್ಯ ವಿಚಾರ ಸಂಕಿರಣ, ಕಮ್ಮಟ, ಕವಿ ಗೋಷ್ಠಿ, ಪ್ರಶಸ್ತಿ ಪ್ರದಾನ, ಸನ್ಮಾನ, ಪುಸ್ತಕ ಬಿಡುಗಡೆ, ಸಾಹಿತ್ಯ ಹಬ್ಬ-ಹುಣ್ಣಿಮೆ-ಸಂಭ್ರಮಗಳಲ್ಲದೆ, ನಾಟಕೋತ್ಸವ, ನೃತ್ಯೋತ್ಸವ, ಜನಪದ ಉತ್ಸವ, ನುಡಿಸಿರಿ, ವಿರಾಸತ್ ಒಂದೇ ಎರಡೇ?


ಬೆಂಗಳೂರಿನಂತಹ ದೊಡ್ಡ ನಗರಗಳನ್ನು ಬಿಡಿ, ಶಿವಮೊಗ್ಗದಂತಹ ಸಣ್ಣ ಊರುಗಳಲ್ಲೂ ದಿನವೂ ಇಂತಹ ಕಾರ್ಯಕ್ರಮಗಳು ಕಿಕ್ಕಿರಿದಿದ್ದು, ರಸಿಕ ಮಹಾಶಯರು ಎಲ್ಲ ಕಡೆಗಳಲ್ಲೂ ಅಷ್ಟಿಷ್ಟು ಅಡ್ಡಾಡುತ್ತಾ ಮನಸ್ಸನ್ನು ಹರಿದು ಹಂಚಿ ಕಂಗಾಲಾಗಿದ್ದಾರೆ. ಹೀಗೆ ಹರಿದು ಹಂಚಿಹೋದ ಮನಸ್ಸಿಗೆ ಏನೂ ನಿರ್ದಿಷ್ಟವಾಗಿ ತಲುಪದೆ, ಯೋಚಿಸಲು ಏನೂ ಸತ್ವ ಸಿಗದೆ ಅವರು ಸಂದರ್ಭಕ್ಕೆ ತಕ್ಕ ಮಾತುಗಳನ್ನಾಡುತ್ತಾ ಹೆಚ್ಚೆಚ್ಚು ಭೋಳೆಯಾಗುತ್ತಿದ್ದಾರೆ. ಸಮಾಜ ತನ್ನ ಸೃಷ್ಟಿಶೀಲತೆಯ ಶಕ್ತಿಯನ್ನು ಕಳೆದುಕೊಳ್ಳುತ್ತಿದೆ.

ಈ ಆತಂಕವನ್ನೇ ಮೊನ್ನೆ ಹಿರಿಯ ರಂಗಕರ್ಮಿ ರಘುನಂದನ ಶಿವಮೊಗ್ಗದ ರಂಗಾಯಣ ಆಯೋಜಿಸಿದ್ದ ರಂಗ ಸಂಕ್ರಾತಿ ರಾಷ್ಟ್ರೀಯ ನಾಟಕೋತ್ಸವವನ್ನು ಉದ್ಘಾಟಿಸಿ ವ್ಯಕ್ತಪಡಿಸಿದ್ದು. ಅವರು ಬರೀ ನಾಟಕಗಳ ಬಗ್ಗೆ ಮಾತ್ರ ಹೇಳುತ್ತಿರಲಿಲ್ಲ. ಇಂದು ಅನೇಕ ಯೋಜನೆ, ಅನುದಾನಗಳ ಅಡಿಯಲ್ಲಿ 'ಸಾಂಸ್ಕತಿಕ' ಎಂಬ ಎಷ್ಟೊಂದು ಪ್ರದರ್ಶನಗಳು, ವಿಚಾರಗಳು ಮತ್ತು ವಿವಾದಗಳು ಹಾರಾಡುತ್ತಿವೆಯೆಂದರೆ ಕನ್ನಡ ಸಂಸ್ಕೃತಿ ಕುರಿತ ಚರ್ಚೆ ಎಂಬುದು ಒಂದು ಏಕಸೂತ್ರವನ್ನು ಕಳೆದುಕೊಂಡು ಕನ್ನಡದ ಬೌದ್ಧಿಕತೆ ಎಂಬುದು ನಿಶ್ಚೇಷ್ಟಿತವಾಗುತ್ತಿರುವ ಸೂಚನೆ ಇದು. ಹಾಗಾಗಿಯೇ ಕನ್ನಡ ಸಂಸ್ಕೃತಿ ಎಂದರೆ ಇಂದು ಸರ್ಕಾರದ ಬಾಲಬಡುಕರ ಪ್ರದರ್ಶನಪ್ರಿಯತೆಯೇ ಆಗಿದೆ.



ಇದೆಲ್ಲದರ ಮಧ್ಯೆ ನಮ್ಮ ಶಿವಮೊಗ್ಗದಲ್ಲಿ ರಂಗಾಯಣ ಈಗ ಸಕ್ರಿಯವಾಗಿದೆ. ಎಂ. ಗಣೇಶ ಅವರ ನಿರ್ದೇಶಕತ್ವದಲ್ಲಿ ವೈವಿಧ್ಯಮಯ ರಂಗ ಚಟುವಟಿಕೆಗಳು ಶುರುವಾಗಿವೆ. ಅವರು ಸರ್ಕಾರ ತನಗೊಪ್ಪಿಸಿರುವ ಅಧಿಕೃತ ರಂಗತಂಡವನ್ನು ತರಬೇತುಗೊಳಿಸುತ್ತಾ ರಾಜ್ಯಾದ್ಯಂತ ಪ್ರಯೋಗಗೊಳ್ಳುತ್ತಿರುವ ನಾಟಕಗಳ ಪೈಕಿ ಆಯ್ದುವನ್ನು ವಾರಾಂತ್ಯ ನಾಟಕಗಳಾಗಿ ಪ್ರದರ್ಶಿಸುತ್ತಿದ್ದಾರೆ. ಜೊತೆಗೆ ವಾರಕ್ಕೊಂದು ನಾಟಕ ಓದು. ನಿಜ, ರಂಗಾಯಣ ಶಿವಮೊಗ್ಗ ನಗರವಾಸಿಗಳ ಮಧ್ಯೆ ಕನಿಷ್ಠ ವಾರಾಂತ್ಯ ಭೇಟಿಯ ತಾಣವಾಗಿ ಇನ್ನೂ ಸ್ಥಾಪಿತವಾಗಬೇಕಿದೆ. ಅದಕ್ಕಾಗಿ ಅಲ್ಲಿ ದಿನನಿತ್ಯವೂ ಒಂದಲ್ಲ ಒಂದು-ಕವನ ವಾಚನ, ಮಿಮಿಕ್ರಿ, ವರ್ಣ/ಛಾಯಾ ಚಿತ್ರ ಪ್ರದರ್ಶನ, ಪುಸ್ತಕ ಬಿಡುಗಡೆ, ವಿಶೇಷ ಉಪನ್ಯಾಸ-ಚರ್ಚೆ ಮುಂತಾದ ಸಣ್ಣಪುಟ್ಟದಾದರೂ- ಸಾಂಸ್ಕೃತಿಕ ಚಟುವಟಿಕೆಗಳು ನಡೆದು, ಕನಿಷ್ಟ ವಿದ್ಯಾರ್ಥಿಗಳೂ ಸೇರಿದಂತೆ ಯುವಜನರ ಆಕರ್ಷಣೆಯ ಕೇಂದ್ರವಾಗಬೇಕಿದೆ. ಅಲ್ಲೊಂದು ಪುಟ್ಟ ಉಪಹಾರ ಗೃಹದ ಅವಶ್ಯಕತೆಯೂ ಇದೆ. ಇದೆಲ್ಲವನ್ನು ಗಣೇಶ್ ಮಾಡಬಲ್ಲರು. ಏಕೆಂದರೆ ಅವರು ನೀನಾಸಂನ ವಾತಾವರಣದಲ್ಲಿ ಬೆಳೆದವರು. ನಾಟಕ ನಿರ್ದೇಶನದಲ್ಲೂ ಅನನ್ಯತೆಯನ್ನು ಪ್ರದರ್ಶಿಸಿರುವ ಪ್ರಯೋಗಶೀಲರು. ಕನ್ನಡ ರಂಗಭೂಮಿಯ ವಿಶೇಷ ಅಧ್ಯಯನ ಮಾಡಿ ಡಾಕ್ಟೋರೇಟ್‌ನ್ನು ಪಡೆದವರು. ಶಿವಮೊಗ್ಗದಲ್ಲಿ ಹತ್ತಾರು ನಾಟಕ ತಂಡಗಳಿವೆ, ನೂರಾರು ರಂಗಕರ್ಮಿಗಳಿದ್ದಾರೆ. ಇವರೆಲ್ಲರೂ ಬಿಂಕ ತೊರೆದು ರಂಗಾಯಣವನ್ನು ಬೆಳೆಸಲು ಕೈ ಜೋಡಿಸಬೇಕಿದೆ.

ಇತ್ತೀಚೆಗೆ ಶಿವಮೊಗ್ಗ ರಂಗಾಯಣ ಪ್ರದರ್ಶಿಸಿದ ವಾರಾಂತ್ಯ ನಾಟಕಗಳ ಪೈಕಿ ನಾನು ನೋಡಿದ ಎರಡು ನಾಟಕಗಳ ಬಗ್ಗೆ ಬರೆಯಬೇಕಿದೆ. ಒಂದು ರಂಗ ಸಂಕ್ರಾಂತಿ ಉತ್ಸವದ ಭಾಗಾವಾಗಿ ಪ್ರದರ್ಶಿತವಾದ ಪಾಂಡಿಚೆರಿಯ ಜತನ್ ನಾಟ್ಯ ಮಂಚ್‌ನ ಸವಿತಾ ರಾಣಿ ಅವರು ಏಕವ್ಯಕ್ತಿ ಅಭಿನಯದ ಇಂಗ್ಲಿಷ್ ನಾಟಕ 'ರಿಪ್' (RIP) ರಿಪ್ ಅಂದರೆ ಇಂಗ್ಲಿಷ್‌ನಲ್ಲಿ ಅಲೆ, ಸಂಘರ್ಷ ಎಂಬ



ಅರ್ಥಗಳಿವೆಯಂತೆ. ಇದೊಂದು ಸ್ತ್ರೀ ಸ್ವಾಯತ್ತತೆ, ಪರಿಸರ ನಾಶ, ಹಿಂಸಾತ್ಮಕ ರಾಷ್ಟ್ರೀಯತೆ ಇತ್ಯಾದಿ ಕುರಿತ ಸಮಕಾಲೀನ ಜ್ವಲಂತ ಚರ್ಚೆಗಳನ್ನೊಳಗೊಂಡ; ಪ್ರೇಕ್ಷಕರೊಡನೆಯ ಸಂವಾದ ಮತ್ತು ಅವರ ಭಾಗವಹಿಸುವಿಕೆಯ ಮೂಲಕ ಮತ್ತು ರಂಗ ಸಜ್ಜಿಕೆ, ಬೆಳಕು, ಸಂಗೀತ ಇತ್ಯಾದಿ ಕನಿಷ್ಟ ರಂಗ ಪರಿಕರಗಳೊಂದಿಗೆ ಜೀವಂತವಾಗಿ ಅಲ್ಲೇ ರಂಗವೇದಿಕೆಯಲ್ಲೇ ಕಟ್ಟಲ್ಪಡುತ್ತಿರುವಂತೆ ತೋರುವ ಅನನ್ಯ ರಂಗಪ್ರಯೋಗ. ಜಾಗತೀಕರಣದ ಹಿಂಸೆ ಹಲವು ರೂಪ ತಾಳಿ ಆತ್ಯಂತಿಕವಾಗಿ ಹೆಣ್ಣಿನ ಮೇಲೆ ಪ್ರಯೋಗವಾಗುತ್ತಿರುವ ಇಂದಿನ ದುರಂತದ ಸಂದರ್ಭದಲ್ಲಿ ಅದನ್ನೆಲ್ಲ ನುಂಗಿಕೊಂಡ ಸಂವೇದನಾಶೀಲ ಹೆಣ್ಣೊಬ್ಬಳು ನಮ್ಮೊಡನೆ ಸಂವಾದಿಸುತ್ತಲ್ಲೇ ನೀಡುತ್ತಿರುವ ಸೂಕ್ಷ್ಮ ಎಚ್ಚರಿಕೆಯಾಗಿ ನಮ್ಮನ್ನು ಕಾಡುತ್ತದೆ. ಸವಿತಾ ರಾಣಿ ಅವರ ವ್ಯಕ್ತಿತ್ವ ಈ ಪ್ರದರ್ಶನಕ್ಕೆ ಹೇಳಿ ಮಾಡಿಸಿದಷ್ಟು ಪರಿಪೂರ್ಣವಾಗಿತ್ತು. ಈ ನಾಟಕವನ್ನು ಶಿವಮೊಗ್ಗದ ರಂಗಾಸಕ್ತರ ಮುಂದಿಟ್ಟ ಶಿವಮೊಗ್ಗ ರಂಗಾಯಣ ಅಭಿನಂದನಾರ್ಹ.

ನಾನು ಇತ್ತೀಚೆಗೆ ರಂಗಾಯಣದಲ್ಲಿ ನೋಡಿದ ಇನ್ನೊಂದು ನಾಟಕ ಶಿವಮೊಗ್ಗದ 'ಚೆಲುವ ರಂಗ' ಎಂಬ ಬಹಳ ಜನ ಎಳೆಯರೇ ಇರುವ ತಂಡವು ಅಜಯ್ ಅವರ ನಿರ್ದೇಶನದಲ್ಲಿ ಅಭಿನಯಿಸಿದ 'ಖೈರ್ಲಾಂಜಿ'. ಮಹಾರಾಷ್ಟ್ರದಲ್ಲಿ ಕೆಲ ವರ್ಷಗಳಹಿಂದೆ ನಡೆದ ದಲಿತರ ಮೇಲಿನ ದೌರ್ಜನ್ಯದ ಘಟನೆಯನ್ನು ಬಿಡಿಸಿ ಹೇಳುವ ಈ ನಾಟಕ ಒಂದು ಪ್ರದರ್ಶನವಾಗಿ-ಕೆಲ ರೂಕ್ಷ ದೃಶ್ಯ ಸಂಯೋಜನೆಗಳ ಹೊರತಾಗಿಯೂ-ಒಂದು ಪ್ರಾಮಾಣಿಕ ಪ್ರಯತ್ನವಾಗಿ ಕಂಡರೂ, ಈ ನಾಟಕ ಏಕೆ? ಎಂಬ ಪ್ರಶ್ನೆಯನ್ನೂ ಹಾಕಿಕೊಂಡು ಉತ್ತರಿಸುವ ಪ್ರಯತ್ನವನ್ನು ಮಾಡುತ್ತ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತದೆ. ಭಾರತ ದಾಖಲೆಯ ಅಭಿವೃದ್ಧಿ ದರದೊಂದಿಗೆ 'ಪ್ರಕಾಶಮಾನ'ವಾಗಿ ಬೆಳೆಯುತ್ತಿದ್ದಾಗಲೇ ಈ ಘಟನೆ ನಡೆಯುತ್ತದೆ ಎಂಬಿತ್ಯಾದಿ ಹೊರ ನಿರೂಪಣೆಗಳೊಂದಿಗೆ ಪ್ರೇಕ್ಷಕಕರನ್ನು 'ಎಚ್ಚರ'ಗೊಳಿಸುವ ಮೂಲಕ ಅವರನ್ನು ನಾಟಕಕ್ಕಿಂತ ಹೋರಾಟವೊಂದಕ್ಕೆ ಸಿದ್ಧಗೊಳಿಸುವ ಪ್ರಯತ್ನವಾಗಿ ಕಂಡು ನಿರ್ದೇಶಕನ ಈ 'ದೊಡ್ಡಣ್ಣತನ' ಪ್ರೇಕ್ಷಕರನ್ನು ಸಣ್ಣವರನ್ನಾಗಿ ನೋಡುವ ಪ್ರಯತ್ನವಾಗಿ ಮಾರ್ಪಾಡಾಗುತ್ತದೆ. ನಿರ್ದೇಶಕ ಏನು ಹೇಳುವುದಿದ್ದರೂ ನಾಟಕದ ಪರಿಣಾಮಶೀಲತೆಯ ಮೂಲಕವೇ ಹೇಳಬೇಕು, ಅದರ ಹೊರಗಿನ ಮಾತುಗಳೆಲ್ಲವೂ ನಾಟಕದ ಒಳಗಿನ ದೌರ್ಬಲ್ಯಗಳನ್ನು ಮುಚ್ಚುವ ಉಪಾಯಗಳೇ ಆಗಿ ನಾಟಕ ಮೂಲತಃ ಒಂದು ಕಲಾಪ್ರಕಾರ ಎಂಬ ತಿಳುವಳಿಕೆಗೇ ಅಪಚಾರವೆಸಗುತ್ತದೆ.. ಇದನ್ನು ಇಂದು ಯುವ ನಿರ್ದೇಶಕರಿಗೆ ಮನದಟ್ಟು ಮಾಡುವುದು ನಿಮ್ಮ ಮೊದಲ ಕೆಲಸವಾಗಬೇಕೆಂದು ಅಂದು ಗಣೇಶ್‌ಗೆ ಹೇಳಿ ಬಂದೆ. ತಪ್ಪಲ್ಲ ತಾನೇ?

-ಡಿಎಸ್ಸೆನ್



ನವಿಲುಗರಿ



ಹೊಸಬಾಳು

ಬಿಡಿಸಿಕೋ ಬೇಡಿಗಳ ಕಳಚಿಕೋ ಕೊಂಡಿಗಳ
ಎಲ್ಲ ಬಂಧನದಿಂದ ಮುಕ್ತನಾಗು
ನೆಲೆಯಿಲ್ಲದೆಡೆಯಲ್ಲಿ ನಿಲ್ಲಲೆತ್ನಿಸಬೇಡ
ಕಡೆಗಣನೆಯಿಂದ ನೀ ಕುಗ್ಗಬೇಡ

ಕಗ್ಗಾಡ ಪೊದೆಯಲ್ಲಿ ಕಜ್ಜಾಯ ಹುಡುಕದಿರು
ನಿನ್ನ ಪಾಲಿಗೆ ದೈವ ಎಂಬುದಿಲ್ಲ
ನಿನ್ನ ಕನಸಿನ ಲೋಕ ಹೊತ್ತಿ ಉರಿಯುತ್ತಿಹುದು
ಹೊಸಲೋಕವೊಂದನ್ನು ಸೃಷ್ಟಿ ಮಾಡು

ಕಂಡರೂ ಕಾಣದಂತಿರಬೇಡ ಭ್ರಮೆಯಲ್ಲಿ
ನಿಜದ ಬೆಳಕೇ ನಿನಗೆ ದಾರಿದೀಪ
ಎಲ್ಲ ಸುಳ್ಳುಗಳನ್ನು ಸುಟ್ಟು ಬೂದಿಯ ಮಾಡು
ಭೂತಕಾಲವೂ ನಿನ್ನ ಪಾಲಿಗಿಲ್ಲ

ಹುಣ್ಣಿಮೆಯ ಚಂದಿರನು ನಿನ್ನ ಹರುಷಕೆ ಮಾತ್ರ
ಎಂಬ ಭ್ರಮೆಯಲಿ ನೀನು ಮುಳುಗಬೇಡ
ಸೂರ್ಯಚಂದ್ರರು ನಿತ್ಯ ಪ್ರೀತಿಯಲಿ ತಬ್ಬುವರು
ಪ್ರಾಣಿ ಪ್ರಕೃತಿ ಮನುಜ ಲೋಕವನ್ನು

ದುಗುಡ ದುಮ್ಮಾನದಲ್ಲಿ ಮುಳುಗಿರುವ ನಿನ್ನನ್ನು
ಕಾವ್ಯಕನ್ನಿಕೆ ಬಂದು ಕೈಹಿಡಿಯಲಿ
ಪಾತಾಳದಾಳದಲಿ ಮುಳುಗಿರುವ ನಿನ್ನನ್ನು
ನಾಗಲೋಕದ ಬಳಗ ಮೇಲೆತ್ತಲಿ

ಹಸಿರು ಕಣಿವೆಯ ಕಡೆಗೆ ನೀನೆದ್ದು ಬಾ ಗೆಳೆಯ
ಎದುರಾದ ಎಲ್ಲವನು ಒಡ್ಡು ಅನುಮಾನಕ್ಕೆ
ನಂಬಿಕೆಯ ನಂಜುಂಡು ನರಳಬೇಡ




ಮೈ ಕೊಡವಿ ನೀನೆದ್ದು ತಲೆಯೆತ್ತಿ ನಿಂತಾಗ
ತಡೆಯ ನಿನಗೊಡ್ಡುವುದು ನೀಲಗಗನ
ಸಪ್ತಸಾಗರವನ್ನು ನೀನು ದಾಟುವ ವೇಳೆ
ಪುಟ್ಟ ಕೊಳವಾಗುವುದು ರತ್ನಗಡಲು.

–ಸಿದ್ದಲಿಂಗಯ್ಯ

ಚುಟ್ಟ ಸೇದುವ ಹುಡುಗಿ


ಚಹಾದ ಅಡ್ಡೆಯಲ್ಲಿ
ಒಳಗಿನ ಶೂನ್ಯಕ್ಕೆ ಕನ್ನ ಕೊರೆದು
ಬುಸು ಬುಸು ಹೊಗೆ ಬಿಡುತ್ತ
ಲೋಕನೀತಿಯ
ವಿತಂಡವಾದಕ್ಕೆ
ಮಾರೊ ಗೋಲಿ



ಚಿತ್ರಗಳು : ರೂಪ ಹಾಸನ

ದೇಹವನ್ನು ಬೆಂಬತ್ತಿದೆ ಸಕಲವೂ...
ಹೀಗೆ ಸೂಜಿಯಿಂದ ಬಾವಿ ತೋಡಿದರೆ
ಆವಿಯಾಯಿತೆ ಅಪಮಾನದ ತುತ್ತು
ಕಳೆದೀತೆ ಗುಮಾನಿ ಕಳವಳದ ಹೊತ್ತು
ಮೀರಲು ಸಾಧ್ಯವೆ ಅನುದಿನದ ಆಪತ್ತು

ಒಂದು ಹಾಡು
ಒಂದರೆ ಗಳಿಗೆ ಧ್ಯಾನ
ಕಾಡಿನ ನೀರವ ಮೌನ
ಉಡಿಯಲ್ಲಿ ಸುಡು ಸುಡು ಕೆಂಡ
ಮಂಪರು
ಸಣ್ಣ ಕೊಳವೆಯಲ್ಲಿ
ಅರಳೆಯಂತೆ ಹಿಂಜಿದ ಜಗತ್ತು




ಏನೇ ಇರಲಿ ಹೀಗೇ ನಡೆಯುತ್ತಿರಲಿ
ಸಂವಾದ
ಕ್ಷಯಿಸುವ ಲೋಕಕ್ಕೆ ಬೀಳಲಿ
ನಿನ್ನದೂ ಒಂದು ಮೊಹರು

–ಪವಿತ್ರ ಪ್ರಿಯಭಾಷಿಣಿ


ಐರಿಷ್ ಬಾನಸೈನಿಕನೊಬ್ಬ ತನ್ನ ಸಾವನ್ನು ಮುಂಗಾಣುತಾನೆ, ಹೀಗೆ

(ಡಬ್ಲ್ಯು. ಬಿ. ಯೇಟ್ಸ್‌ನ **'An Irish Airman Forsees his death'** ಪದ್ಯದ ಕನ್ನಡಾನುವಾದ)

ಅಲ್ಲೆ ಮೇಲೆ ಆ ಮೋಡಗಳ ಒಳಗೆ ಎಲ್ಲೊ
ಎದುರಿಸಬೇಕು ನನ್ನ ಹಣೆಬರಹ ನಾನು,
ಗೊತ್ತಿದೆ ನನಗೆ. ನಾ ಹೋರುವಾ ನ
ನ್ನೆದುರಾಳಿಗಳಮೇಲೆ ಹಗೆಯಿಲ್ಲ ನನಗೆ;
ನಾ ಕಾಯುವವರಮೇಲೆ ಕಕ್ಕುಲತೆಯಿಲ್ಲ.
ನನ್ನ ದೇಶವೊ, ಅದು ಕಿಲ್ಟಾರ್ಟನ್ ಕ್ರಾಸು;
ನನ್ನ ದೇಶದ ಜನರೊ, ಅವರು ಕಿಲ್ಟಾ
ರ್ಟನ್ನಿನ ಬಡವರು. ಇದು, ಇದೆಲ್ಲವೂ,
ಹೇಗೆ, ಯಾವ ಕೊನೆಮುಟ್ಟಿದರೂ ನಷ್ಟ
ವಾಗದು ಅವರಿಗೆ, ಅಥವಾ, ಮೊದ
ಲಿದ್ದುದಕ್ಕಿಂತ ಹಿಗ್ಗು ಹೆಚ್ಚಾಗದು.
ಹೋರಾಡು ನೀನು ಅಂತ ನನಗಂದದ್ದು
ಕಾನೂನು ಅಲ್ಲ, ಕರ್ತವ್ಯನಿಷ್ಠೆಯಲ್ಲ
ತಲೆಯಾಳುಗಳಲ್ಲ, ಹುರಿದುಂಬಿಸುವಾ
ಜನದೊಂಬಿಯಲ್ಲ: ಸುಮ್ಮಾನ
ದೊಬ್ಬೊಂಟಿತನದ ತುಡಿತವಕ
ದೂಡಿತ್ತು ಈ ಮೋಡಗಳ ಒಳಗುಲ್ಲಿಗಿಲ್ಲಿ.
ಎಲ್ಲ ತೂಗಿದೆ ನಾನು, ಎಲ್ಲ ಮನಸ್ಸಿಗೆ
ತಂದುಕೊಂಡೆ: ಬರುವೆಲ್ಲ ವರ್ಷಗಳು,
ಆಯುಸ್ಸು ದಂಡ; ಸಂದೆಲ್ಲ ವರ್ಷಗಳು,
ಆಯುಸ್ಸು ದಂಡ – ತೂಗಿ ಸಮತೂಕ
ಈ ಬದುಕಿನೊಂದಿಗೆ, ಈ ಸಾವಿನೊಂದಿಗೆ.



(ಕನ್ನಡಾನುವಾದ : ರಘುನಂದನ)



ಒಂದು ಪ್ರವಾಸ ಕಥನ

ನಾನೂ ಅಮೆರಿಕಾ ನೋಡಿ ಬಂದೆ!

-ವಿಜಯೇಂದ್ರ ಪಾಟೀಲ

ನಮ್ಮ ಸಾಮಾನ್ಯ ರಾಜಕೀಯ ವಿಶ್ಲೇಷಣೆಗಳಲ್ಲಿ ಅಮೆರಿಕಾ ಎಂದರೆ ಜಗತ್ತಿನ 'ದೊಡ್ಡಣ್ಣ'. ದುಷ್ಟ ರಾಷ್ಟ್ರ. ದೇಶ ದೇಶಗಳ ನಡುವೆ ಜಗಳ ತಂದಿಟ್ಟು ತನ್ನ ಸ್ವಾರ್ಥ ಸಾಧಿಸಿಕೊಳ್ಳುವ ಬಂಡವಾಳಶಾಹಿ ರಾಷ್ಟ್ರ. ಶಸ್ತ್ರಾಸ್ತ್ರ ತಯಾರಿಕೆ ಮತ್ತು ಮಾರಾಟವೇ ಆ ದೇಶದ ಅತ್ಯಂತ ದೊಡ್ಡ ದಂಧೆ. ಹೀಗೇ ಸಾಲು ಸಾಲಾಗಿ ಆ ದೇಶದ ಮೇಲೇ ಆರೋಪಗಳ ಗಂಟನ್ನೇ ಹೊರಿಸುತ್ತಾ ಬಂದ ನಮ್ಮ ಮಧ್ಯಮ ವರ್ಗದ ಜನ ಈಗ ಜಾಗತೀಕರಣದ ಲಾಭ ಪಡೆದು ಅಲ್ಲಿಗೆ ತಾತ್ಕಾಲಿಕವಾಗಿಯೋ, ಶಾಶ್ವತವಾಗಿಯೋ ನೆಲೆಸಲು ಹೋಗಿರುವ ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಕಾಣಲು ಅಮೇರಿಕಾಕ್ಕೆ ಹೋಗಿ ಸಂತೋಷಪಟ್ಟೂ ಬರುತ್ತಿದ್ದಾರೆ. ನಮ್ಮ ದೇಶದ ಜನಜೀವನ, ಮೌಲ್ಯಗಳು ಇತ್ಯಾದಿಗಳನ್ನು ಹೋಲಿಸಿ ನೋಡಿ ಒಂದು ಆತ್ಮನಿರೀಕ್ಷೆಯೊಂದಿಗೆ ಬರುತ್ತಿದ್ದಾರೆ. ಹಾಗೆ ಬರುವಾಗ ಅಮೆರಿಕಾವನ್ನು ನಾವು ನೋಡುವ ಬಗೆ ಸಂಪೂರ್ಣ ಸರಿಯೇ ಎಂಬ ಪ್ರಶ್ನೆಯನ್ನು ಹೊತ್ತುಕೊಂಡೇ ಬರುತ್ತಿದ್ದಾರೆ. ಅಂತಹ ಒಂದು ಬರಹ ಇಲ್ಲಿದೆ-ಸಂ.



ಅಧ್ಯಕ್ಷ ಜಾನ್ ಎಫ್ ಕೆನಡಿ ೬೪ರಲ್ಲಿ ಗುಂಡೇಟಿನಿಂದ ತೀರಿಹೋದರು. ಶಾಲೆಯ ಹಿರಿಯ ವಿದ್ಯಾರ್ಥಿಗಳು 'ಅವರ ಪ್ರಾಣಪಕ್ಷಿ ಹಾರಿಹೊಯಿತು' ಎಂದು ಪತ್ರಿಕೆಯಲ್ಲಿದುದನ್ನು ಪ್ರಾರ್ಥನಾ ಸಮಯದಲ್ಲಿ ಓದಿದರು. ಅದು ಅಮೇರಿಕ ಕುರಿತ ನನ್ನ ಮೊದಲ ನೆನಪು. ಈ ಸುದ್ದಿಯಿಂದಾಗಿ ಆ ದೇಶದ ಕುರಿತಾಗಿ ಅರೆಬರೆ ಭಾವುಕ ಹಾಗೂ ಅನುಕಂಪದ ಭಾವ. ಮುಂದೆ ಪಾಕಿಸ್ತಾನದ ಯುದ್ಧದ ಸಮಯದಲ್ಲಿ 'ರಷಿಯಾದಿಂದ ಭಾರತದ ಪರ ವೀಟೋ ಚಲಾವಣೆ' ಅಂತೆಲ್ಲ ರೇಡಿಯೋದಲ್ಲಿ ಕೇಳುವಾಗ ನಾವು ರಷಿಯಾ ಪರರೂ ಅಮೆರಿಕಾ ವಿರೋಧಿಗಳೂ ಆದೆವು. ೧೯೭೦ರ ಮುಂದಿನ ಸಮಾಜವಾದಿ ಸರಕಾರ, ಎಡಚ ಸಾಹಿತ್ಯ, ಗರೀಬೀ ಹಟಾವೋಗಳು ನಮ್ಮನ್ನೆಲ್ಲ ರಷಿಯಾದ ಕಡೆ ಸೆಳೆದುವು. ೬೯ರಲ್ಲಿ ಅಪೋಲೋ ೧೧ ಚಂದ್ರನ ಮೇಲೆ ಆರ್ಮ್ಸ್‌ಸ್ಟ್ರಾಂಗ್ ಇಳಿದಾಗ ಅಂದಿನ ಹೈಸ್ಕೂಲ್ ವಿದ್ಯಾರ್ಥಿಯ ಕರ್ತವ್ಯವಾಗಿ 'ಚಂದಿರ ಲೋಕದ ಅಂಗಳದಲ್ಲಿ ಮೃತ್ಯುಮಾನವನ ಅವತರಣ' ಎಂಬ ಕವನ ಬರೆದಿದ್ದೆ. ಮುಂದೆ ರಷಿಯಾ ಒಡೆದುಹೋಗಿ, ಜಾಗತೀಕರಣ ಬಂದು, ನಾವು ಬ್ಯಾಂಕ್ ನೌಕರರು-ಎಡದಂಡೆಯ ಸಂಘಟನೆಯಲ್ಲಿದ್ದವರು-ದಿಕ್ಕು ತಪ್ಪಿದಂತಾಗಿ ಅಮೇರಿಕ ವಿರೋಧವನ್ನು ನಮ್ಮ ಪ್ರಣಾಳಿಕೆಯಾಗಿಸಿಕೊಂಡೆವು. ಹೊರಗುತ್ತಿಗೆ, ಬ್ಯಾಂಕ್ ವಿಲೀನೀಕರಣ, ಸ್ವಯಂನಿವೃತ್ತಿ, ಯಾಂತ್ರೀಕರಣ, ಜಾಗತೀಕರಣ ಎಲ್ಲವುಗಳನ್ನೂ ವಿರೋಧಿಸಿದಂತೆಲ್ಲ ಅವು ಸಂಭವಿಸುತ್ತಲೇ ಸಾಗಿದುವು. ನಮ್ಮನ್ನು ರಮಿಸಲು ಮ್ಯಾನೇಜ್‌ಮೆಂಟ್‌ನವರು ರಮಿಸಲು ಒಂದು ಇನ್ಕ್ರಿಮೆಂಟ್ ಎಸೆಯುತ್ತಿದ್ದರು. ಅದನ್ನು ಪ್ರತಿಭಟನೆಯೊಂದಿಗೆ ಸ್ವೀಕರಿಸುತ್ತಿದ್ದೆವು. ಮತ್ತೆ ಹೋರಾಟ. ನಮ್ಮದು ಗುಂಪಿನಲ್ಲಿ ವಿರೋಧ; ವೈಯಕ್ತಿಕವಾಗಿ ಅರೆ ಒಪ್ಪಿಗೆ ಎನ್ನುವಂತೆ ಸಾಗಿದ ಹೋರಾಟ. ಆದರೂ ರಾಜಧನ ರದ್ದತಿ, ರಾಷ್ಟ್ರೀಕರಣದಿಂದಾದ ಎಡದ ಪ್ರಭಾವವೇ ಹೆಚ್ಚಾಗಿ ಅಮೆರಿಕವನ್ನು ತೆಗಳುವ ಸಂದರ್ಭವನ್ನು ನಾವು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಇಂಜಿನಿಯರಿಂಗ್ ಓದಿ ಮಾಹಿತಿ ತಂತ್ರಜ್ಞಾನದತ್ತ ಸಾಗಿದ ಮಕ್ಕಳಿಗೆ ಎಡ ಧೋರಣೆ ಇಷ್ಟವಾಗುತ್ತಿರಲಿಲ್ಲ. ಅವರ ಜ್ಞಾನ, ಕಲಿಕೆ, ಉದ್ಯೋಗ, ವ್ಯವಹಾರ, ಗ್ರಾಹಕರೆಲ್ಲ ಅಮೇರಿಕಾದ ಸಂಬಂಧ ಬಿಟ್ಟು ಬದುಕಲಾರದಂಥವು. ಇದು ವಾಸ್ತವ. ನಾವು ಬೆಳೆಸಿಕೊಂಡಿದ್ದೇವೆಂದು ನಂಬಿದ ಎಡ ಧೋರಣೆಗಳಿಂದಾಗಿ ಮಕ್ಕಳ ಜೊತೆಗೆ ಬಿಸಿಬಿಸಿ ಮಾತಾಗುತ್ತಿದ್ದುವು. ಅವರೂ ಓದಿಕೊಂಡವರೇ. ಹೀಗಾಗಿ ಮಾತು ಕೆಲಸಾರಿ ಬಿರುಸಾಗುತ್ತಿದ್ದುವು! ಆದರೂ ಮಕ್ಕಳೇ ಅಲ್ಲವೇ? ಅವರು ಕಲಿಕೆಗೋ ನೌಕರಿಗೋ ವಿಮಾನ ಹತ್ತುವಾಗ ೨೩ - ೨೩ ಕಿಲೋ ಮೀರದಂತೆ ಸೂಟಕೇಸುಗಳಲ್ಲಿ ಪಾತ್ರೆ, ಧಾನ್ಯ, ತಿಂಡಿ, ಬಟ್ಟೆ, ಪುಸ್ತಕ ತುರುಕಿ ಅಪರಾತ್ರಿಯಲ್ಲಿ ವಿಮಾನ ನಿಲ್ದಾಣ ನೋಡಿ ಬರುವುದೂ ಆಗುತ್ತಿತ್ತು. ದ್ವಂದ್ವವೂ ಇತ್ತು. ಮಕ್ಕಳ ಓದು, ಉದ್ಯೋಗ, ಒಳ್ಳೆಯ ಸಂಬಳ ಒಂದು ಕಡೆ; ಜಗತ್ತಿಗೆಲ್ಲ ಆಯುಧ ನೀಡಿ, ಜಗಳ ಹಚ್ಚಿ, ತನ್ನ ನಿಯಂತ್ರಣದಲ್ಲಿರಿಸಿಕೊಳ್ಳುವ ದೇಶದ ಕುರಿತಾದ ಸಿಟ್ಟು ಇನ್ನೊಂದು ಕಡೆ. ವಯಸ್ಸಿನಿಂದಲೂ ಉದಾರವಾದೀ ವಾತಾವರಣದಿಂದಲೂ ನಮ್ಮ ಧ್ವನಿ ಕ್ಷೀಣವಾಗುತ್ತ ಸಾಗಿದ್ದರೂ ಒಮ್ಮೊಮ್ಮೆ ಒಳಗಡೆಯ ಮುಳ್ಳು ಚುಚ್ಚುತ್ತಿದ್ದುದೇನೋ ಸುಳ್ಳಲ್ಲ.

ಈ ಹಿನ್ನೆಲೆಯಿಂದಾಗಿ ನಾನು ಮೊದಲ ಸಾರಿ ಅಮೆರಿಕಕ್ಕ ಹೊರಟಾಗ 'ಜಗಳವಾಡಿದ ಬೀಗರ ಮನೆಯ ಸಮಾರಂಭಕ್ಕೆ ಹೊರಟು ನಿಂತಂಥ' ಎಡಚೆಡಚು ಭಾವ. ಕೇವಲ ಪ್ರವಾಸವಾಗಿದ್ದರೆ ಅದು ಬೇರೆ. ಸಿಂಗಪೋರ್, ಥೈಲ್ಯಾಂಡ್, ಮಲೇಶಿಯಾಗಳಂತೆ ೯ ರಾತ್ರಿ ೧೦ ಹಗಲಿನಂತಹ ಪ್ರವಾಸವಲ್ಲ. ಮುಖ್ಯವೆಂದರೆ ಇದು ಪ್ರವಾಸವೇ ಅಲ್ಲ. ಇದು ಅಮೇರಿಕ 'ವಾಸ'. ಮಗನ ಮನೆಯಲ್ಲಿ ೬೫ ದಿನ ಇರುವಂಥದ್ದು. ವಯಸ್ಕರ ಉದ್ಯೋಗಾವಕಾಶ. ಮೊಮ್ಮಗು ನೋಡಿಕೊಳ್ಳುವಂಥದು!

ಮೊದಲ ಸಾರಿ ಆಂಸ್ಟರ್ಡ್ಯಾಮ್‌ನಲ್ಲಿ (ಹಾಲೆಂಡ್) ವಿಮಾನ ಬದಲಿಸಬೇಕು. ಅದು ದೊಡ್ಡ ನಿಲ್ದಾಣವಾದುದರಿಂದ ಮುಂದಿನ ವಿಮಾನ ಹುಡುಕಲು ತೊಂದರೆಯಾಗಬಾರದೆಂದು ಮಗ ಗಾಲೀಕುರ್ಚಿ ಸೌಲಭ್ಯದ ವ್ಯವಸ್ಥೆ ಮಾಡಿದ್ದ. ನಾವೋ ಬೇಕೆಂದರೆ ೨೦ ಕಿ.ಮೀ. ನಡೆಯುಬಲ್ಲವರು. ಗಾಲೀಕುರ್ಚಿಯಲ್ಲಿ ಕೂದಲು ಬಹಳ ಮುಜುಗರವಾಯ್ತು. ಮುದ್ದೆಯಾಗಿ ಕೂತೆವು. ಅವರೋ ನಾವು ತೀರಾ ಕೈಲಾಗದವರೆಂಬಂತೆ ನಂಬಿ ಹೂವಿನಂತೆ ಸಾಗಿಸಿ ನಮ್ಮೆಲ್ಲ ರಹದಾರಿಯ ಔಪಚಾರಿಕ ವಿಧಿಗಳನ್ನು ನಮ್ಮ ಪರವಾಗಿ ತಾವೇ ಮುಗಿಸಿಕೊಟ್ಟರು. ಐದ್ಯೆದು ನಿಮಿಷಕ್ಕೊಮ್ಮೆ ಚೆನ್ನಾಗಿದ್ದೀರಾ ಎಂದು ಕೇಳುತ್ತಿದ್ದರು. ಸಂಕೋಚ ಹೆಚ್ಚಾಗುತ್ತಿತ್ತು. ಅಟ್ಲಾಂಟಾದಲ್ಲಿ ಇದಕ್ಕೂ ಹೆಚ್ಚು ಕಾಳಜಿ. ನಮ್ಮ ಲಗೇಜುಗಳನ್ನು ತಿರುಗುವ ಪಟ್ಟಿಯಿಂದ ಎತ್ತಿ, ನಮ್ಮನ್ನು ಕೂಡಿಸಿಕೊಂಡು ಎಲ್ಲ ಮುಂಗಟ್ಟೆಗಳಿಗೆ ಕರೆದೊಯ್ದು ಔಪಚಾರಿಕತೆ ಮುಗಿಸಿ ಹೊರಗೆ ಕಾರು ನಿಲ್ಲುವ ಜಾಗದವರೆಗೆ ತಲುಪಿಸಿದರು. 'ಫೀಲಿಂಗ್ ಕಂಫರ್ಟಬಲ್?' ಅಂತ ಕೇಳುತ್ತಲೇ ಇದ್ದರು. ಇಬ್ಬರೂ ಕಪ್ಪು ಹೆಣ್ಣುಮಕ್ಕಳು. ಸಂತೋಷದಲ್ಲಿ ಮುಳುಗಿಹೋದಂತೆ ಉದ್ಯೋಗವನ್ನು ಅನುಭವಿಸುತ್ತಿದ್ದರು! ಮಧ್ಯೆ ಸಣ್ಣ ಕುಣಿತ, ಮಣಿತ, ನಗು! ನಮ್ಮ ಫೋನ್ ಅಲ್ಲಿ ಕೆಲಸ ಮಾಡದ್ದರಿಂದ ಮಗನಿಗೆ ತಾವೇ ಫೋನ್ ಮಾಡಿ ನಮ್ಮ ಆಗಮನ ತಿಳಿಸಿದರು. ನಮ್ಮ 'ಬೀಗರ' ಆ ಪ್ರಥಮೋಪಚಾರ ನಮ್ಮನ್ನು ನಮ್ರರನ್ನಾಗಿಸಿತು!

ಬೆಂಗಳೂರಿನ ಮನೆಯಿಂದ ವಿಮಾನ ನಿಲ್ದಾಣ ಹಾಗೂ ಅಟ್ಲಾಂಟಾ ವಿಮಾನ ನಿಲ್ದಾಣದಿಂದ ಮಗನ ಮನೆ ಎರಡೂ ೪೦ ಮೈಲಿ ದೂರ. ಆದರೆ ಬೆಂಗಳೂರಿನಲ್ಲಿ ಎರಡರಿಂದ ಮೂರು ಗಂಟೆ ಬೇಕಾದರೆ ಇಲ್ಲಿ ೪೦ ನಿಮಿಷ ಸಾಕು

ಅಮೆರಿಕಾ ಬಲು ದೊಡ್ಡ ದೇಶ. ನಮ್ಮದರ ಮೂರು ಪಟ್ಟು ವಿಸ್ತಾರ. ಜನಸಂಖ್ಯೆ ನಮ್ಮದರ ಸುಮಾರು ನಾಲ್ಕನೇ ಒಂದು ಭಾಗ (೩೨ ಕೋಟಿ) ಮಾತ್ರ. ಹೀಗಾಗಿ ಜಾಗ ಸಮೃದ್ಧಿ. ಜನರ ಕೊರತೆ. ದೊಡ್ಡನಗರಗಳನ್ನು ಬಿಟ್ಟರೆ ಸಂದಣಿಯೇ ಇಲ್ಲ. ಬಹುಶಃ ಮನುಷ್ಯರ ಸಂಖ್ಯೆಯಷ್ಟೇ ದೊಡ್ಡದೊಡ್ಡ ಕಾರುಗಳಿವೆ. ಅಲ್ಲದೆ ಕುಟುಂಬಕ್ಕೊಂದು ಗಾಲ್ಫ್ ಕಾರ್ಟ್ ಗಳು, ಸೈಕಲ್ಲುಗಳು, ಬಹುದೊಡ್ಡ ಗಾತ್ರದ ಘಟಘಟಿಗಳು! ಹೆದರಿಕೆ ಹುಟ್ಟಿಸುವಂಥ ದೊಡ್ಡ ಲಾರಿಗಳು. ವಿವಿಧ ಉದ್ದೇಶದ ನಮನಮೂನೆಯ ವಾಹನಗಳು. ನಾಲ್ಕು-ಆರು ಪಟ್ಟಿಗಳ ದಾರಿಗಳು. ಎಡ ಬಲಕ್ಕೆ ಎತ್ತರೆತ್ತರ ಮರಗಳು. ಕಾಡಿನಂಥ ನಾಡು. ದೊಡ್ಡ ಕೆರೆಗಳು. ಆದರೆ ಒಂದೆರಡು ಕಡೆ ಬಿಟ್ಟರೆ ಎಂಥ ಹಳ್ಳಿ ಅನ್ನಿಸಿಕೊಂಡರೂ ಕೃಷಿಯೇ ಇಲ್ಲ. ಹವಾಮಾನದ ಸಹಕಾರವಿರುವ ಕೆಲಭಾಗಗಳಲ್ಲಿದೆಯಂತೆ. ಇದ್ದರೆ ಮಾತ್ರ ಅದು

ಸಾವಿರಾರು ಎಕರೆಯ ಹಿಡುವಳಿಯದು. ಚಿಕ್ಕ-ಪುಟ್ಟ ರೈತರಿಲ್ಲ. ಜಿಮ್ಮಿ ಕಾರ್ಟರ್ ಶೇಂಗಾ ಬೆಳೆಯುವ ದೊಡ್ಡ ರೈತ (ಅಟ್ಲಾಂಟಾ ಹತ್ತಿರ)! ಒಟ್ಟಿಗೆ ವಿಶಾಲ ಜಾಗ ಹಾಗೂ ಕಡಿಮೆ ಜನರಿಂದಾಗಿ ಈ ದೇಶ ಬದುಕನ್ನು ಬಹಳ ಸುಖಕರವಾಗಿ ಮಾಡಿಕೊಂಡಿದೆ.

ಇಲ್ಲೆಲ್ಲಾ ಮರದ ಮನೆಗಳು. ೩ ವಾರದಲ್ಲಿ ಸಿದ್ಧಗೊಳಿಸಿ ಕೊಡುತ್ತಾರೆ. ಗೃಹಪ್ರವೇಶದ ತಾರೀಖು ನಿಗದಿಪಡಿಸಿ ನಂತರ ಮನೆ ಕೊಳ್ಳಬಹುದು! ಆಯುಧ ರಫ್ತು ಬಿಟ್ಟರೆ ಬಹುಶಃ ಆಸ್ತಿ ವಹಿವಾಟು ಈ ದೇಶದ ಮತ್ತೊಂದು ದೊಡ್ಡ ದಂಧೆಯೆಂದೇ ಹೇಳಬೇಕು. ಕಾರು ತಯಾರಿಕೆ ಕೂಡ ದೊಡ್ಡ ಉದ್ದಿಮೆ. ನಾವು ತಿರುಗಾಡಲು ಹೋದಾಗ ದಿನದಿನವೂ ಬದಲಾವಣೆ ಗಮನಿಸುತ್ತಿದ್ದೆವು. ೧೫-೨೦ ದಿನದಲ್ಲಿ ಎಲ್ಲ ಸಿದ್ಧವೇ. ಮನೆಯ ಜನವೇ ನಕ್ಷೆ ತಯಾರಿಸಿ, ಗೂಗಲ್ ನೋಡಿ ಮನೆ ಜೋಡಿಸಿಕೊಳ್ಳುವುದೂ ಉಂಟೆಂದು ಮಗ ಹೇಳುತ್ತಿದ್ದ. ಎಲ್ಲ ಅಳತೆಯ ಸಾಮಾನುಗಳೂ ವಾಲ್ಮಾರ್ಟಿನಲ್ಲಿ ಸಿಕ್ಕುತ್ತವೆ. ನಾವು ಬೆಳೆದ ವಾತಾವರಣದಿಂದಾಗಿ ಕೆಲ ದಿನ ಮನೆಗೆ ಹೊಂದಿಕೊಳ್ಳಲು ಕಷ್ಟವಾಯಿತು. ಮನೆ ತುಂಬ ಹಾಸಿದ ದಪ್ಪ ಕಂಬಳಿ. ಬಚ್ಚಲು, ಅಡಿಗೆ ಜಾಗಕ್ಕೆ ವಿನಾಯತಿ. ಆದರೆ ಕಕ್ಕಸದ ಮನೆಯಲ್ಲಿ ಕಾಗದ ಮಾತ್ರ. ಭಾರತದಿಂದ ಮಗ್ ತರಲು ಮಗ ಮೊದಲೇ ಸೂಚಿಸಿದ್ದರಿಂದ ಬಚಾವ್! ಬೇಕಾದಷ್ಟು ಬಿಸಿ, ತಣ್ಣಗಿನ ನೀರು; ಒಂದೇ ತಾಪಮಾನದ ವ್ಯವಸ್ಥೆಯ ವಾತಾನುಕೂಲಿತ ಮನೆ. ಅನುಕೂಲ. ಆದರೆ ಹಲವಾರು ಬಾರಿ ಕಾಲು ತೊಳೆದುಕೊಳ್ಳುವ ಅಭ್ಯಾಸವಿದ್ದವರಿಗೆ ಅಲ್ಲಿ ತೊಂದರೆ. ಜಗತ್ತಿನ ಅನ್ಯ ದೇಶಗಳ ಕುರಿತಾಗಿ ಅಮೆರಿಕದ ನೀತಿ ಏನೆಂದು ಎಲ್ಲರಿಗೂ ಗೊತ್ತು. ದೊಡ್ಡಣ್ಣ. ಆದರೆ ತನ್ನ ಪ್ರಜೆಗಳ ವಿಷಯದಲ್ಲಿ ಮಾತ್ರ ಅದು ಖಂಡಿತ ತಂದೆಯಂತೆಯೇ. ಅತ್ಯುತ್ತಮ ಸರಬರಾಜು. ಸರಕಾರೀ ಶಾಲೆಗಳು. ನಾಗರೀಕ ಹಕ್ಕು, ಸೌಲಭ್ಯ, ರಕ್ಷಣೆ, ಅಮೇರಿಕಾದ ಸಾಧನೆಗಳು. ನಾವು ನೋಡಿದ್ದೆಂದರೆ ಪೆಟ್ರೋಲ್ ಬಹಳ ಅಗ್ಗ. ಭಾರತದ ರೂಪಾಯಿಯಲ್ಲಿ ಕೂಡ. ಹೀಗಾಗಿ ಸರಕಾರೀ ಸಾರಿಗೆಯ ಬಳಕೆ ಕಡಿಮೆ. ರಸ್ತೆಗಳು ಸುಸಜ್ಜಿತ, ಸುಂದರ. ಆದರೆ ನಮ್ಮಲ್ಲಿಯ ಹಾಗೆ ದಾರಿ ಕೇಳಿಕೊಂಡು ಹೋಗುವಂತಿಲ್ಲ. ಕಾರಿನಲ್ಲಿ ಮಾರ್ಗದರ್ಶಿ ಬೇಕೇಬೇಕು. ಇಂಥ ನಂಬರಿನ ಹೈವೇ. ಇಂಥ ಸಂಖ್ಯೆಯ ನಿರ್ಗಮನ, ಅದು ಇಷ್ಟು ದೂರದಲ್ಲಿದೆ ಇತ್ಯಾದಿ. ದಾರಿಯಲ್ಲಿ ವಿಚಾರಿಸಲು ಯಾರೂ ಇರುವುದಿಲ್ಲ!

ನಮ್ಮ ಒಳಗಿನ 'ಎಡ' ಮಾತ್ರ ನಮ್ಮ ಪರವಾಗಿರುವುದನ್ನು ಹುಡುಕುತ್ತಲೇ ಇರುತ್ತಿತ್ತು. ಇಲ್ಲಿ ಬಲಬದಿಯ ರಸ್ತೆ ಸಾಗಾಟ. ನಾವು ರಸ್ತೆಗೆ ಸಂಬಂಧಿಸಿದಂತೆ ಎಷ್ಟು ಎಡವೋ ಅವರು ಅದರಲ್ಲೆಲ್ಲ ಬಲ. ವಿದ್ಯುತ್ ಗುಂಡಿಗಳೂ ಹಾಗೆ. ನಮ್ಮದರ ವಿರುದ್ಧ ಚಲನೆ. ನಾವು ಸಣ್ಣ ಹಿಡುವಳಿದಾರರೆಂದರೆ ಅವರು 'ತಪ್ಪು, ದೊಡ್ಡ ಹಿಡುವಳಿದಾರರು' ಎನ್ನುವವರು. ನಮ್ಮದು ಚಿಕ್ಕ ಕಾರಿನ ಕಡೆಯ ನೋಟ, ಅವರದು ದೊಡ್ಡ ಕಾರಿನತ್ತ. ತರಕಾರಿ ಕೂಡ ಅಲ್ಲಿ ದಪ್ಪ ಅಂತ ನಮ್ಮ ಅಸಹನೆ ಉಳಿಯುತ್ತಿತ್ತು. ಆದರೆ ಒಂದು ವಿಷಯದಲ್ಲಿ ಅವರು ನಮಗಿಂತ ಎಡ. ಅದು ಕಾರ್ಮಿಕ ವರ್ಗ. ಸಾರ್ವಜನಿಕ ಸ್ವಚ್ಛತೆ ಇತ್ಯಾದಿಗಳನ್ನು ನಿಭಾಯಿಸಲು ಜನರಿದ್ದರೂ ಅವರ ಸೂಟು, ಬೂಟು, ಯಂತ್ರೋಪಕರಣಗಳು, ಕೈಗವಸು, ವಾಹನಗಳನ್ನು ನೋಡಿದರೆ ಅವರನ್ನು ಕಾರ್ಮಿಕರೆಂದು ನೋಡಲಾಗುವುದಿಲ್ಲ. ಮನೆಗೆಲಸಕ್ಕೆಂತ ಜನರು ಸಿಕ್ಕರು. ಇಲ್ಲಿಂದ ಕರೆದೊಯ್ದರೂ ಅವರ ನಿಗದಿತ ವೇತನ, ಮಾನವ ಹಕ್ಕುಗಳ ನಿಯಮಗಳನ್ನು ನೋಡಿದರೆ ಅದು ಅಸಾಧ್ಯವಿಲ್ಲ. ಹೀಗಾಗಿ ಇಲ್ಲಿ ಎಲ್ಲರೂ ಎಲ್ಲ ಕೆಲಸ ಮಾಡಿಕೊಳ್ಳಲೇಬೇಕು. ಕಕ್ಕಸು, ಪಾತ್ರೆ ಬಟ್ಟೆ ತೊಳೆಯುವುದು, ಎಲ್ಲ ಅವರವರದೇ ಕಾರ್ಯ. ಏನೂ ಗೊತ್ತಿಲ್ಲದ ನಮ್ಮ ಮಕ್ಕಳು ಅಲ್ಲಿ ಹೋಗಿ ಎಲ್ಲ ಕಲಿತದ್ದು ಒಂದು ಸಾಧನೆಯೇ. ಮನೆಗೆಲಸ ಮಾತ್ರವಲ್ಲ, ಕಾರಿನ ಚಿಕ್ಕ ಪುಟ್ಟ ದುರಸ್ತಿ, ಬಡಿಗತನ, ವಿದ್ಯುತ್ ಉಪಕರಣಗಳ ದುರಸ್ತಿ ಅಗತ್ಯ ಬಿದ್ದಾಗಲೆಲ್ಲಾ ಗೂಗಲ್, ಯೂಟ್ಯೂಬ್ ಗುರು ದರ್ಶನ! ಉಳಿತಾಯ, ಶಿಸ್ತು, ಪ್ರಾಮಾಣಿಕತೆಗಳನ್ನು ಇಲ್ಲಿಗಿಂತ ಅಲ್ಲಿ ಹೆಚ್ಚು ಕಲಿಯುತ್ತಾರೆ.

ನಾವು ಅಶೆವಿಲ್ಲೆ ಎಂಬಲ್ಲಿಗೆ ಹೋಗಿ ಬರುವಾಗ ಪುಟ್ಟ ಮೊಮ್ಮಗಳು ಮಾಡಿಕೊಂಡ ಕಕ್ಕಸಿನ ಚಡ್ಡಿಯನ್ನು ಅಲ್ಲಿದ್ದ ದಟ್ಟ ಕಾಡಿನಲ್ಲಿ ಎಸೆಯುವಂತೆ ನಾನು ಸೂಚಿಸಿದೆ. ಸೊಸೆ ಬಿಲ್‌ಕುಲ್ ಒಪ್ಪದೇ ಅದನ್ನು ನೂರಾರು ಮೈಲು ಕಾರಿನಲ್ಲಿ ತಂದು ನಿಗದಿತ ಸ್ಥಳದಲ್ಲೇ ಹಾಕಿದಳು! ನೋಡುವವರಿಲ್ಲದ ಜಾಗದಲ್ಲೂ ಶಿಸ್ತು ಸ್ವಚ್ಛತೆಯನ್ನು ಅನುಸರಿಸುವುದು ದೇಶದ ಘನತೆಯನ್ನು ಹೆಚ್ಚಿಸುವಂಥದು. ಇಡೀ ಜಗತ್ತು ಅಮೆರಿಕವನ್ನು ಹೇಗಾದರೂ ನೋಡಲಿ, ಜನ ಮಾತ್ರ ಪ್ರಾಮಾಣಿಕರು. ಅಂಗಡಿಯಲ್ಲಿ ಆಯ್ದುಕೊಳ್ಳುವ ಎಲ್ಲ ಸಾಮಾನುಗಳಿಗೆ ತಾವೇ ಬಿಲ್ಲು ತಯಾರಿಸಿ ಕಾರ್ಡಿನಲ್ಲೋ ನಗದಿನಲ್ಲೋ ಕೊಟ್ಟು ಬರುತ್ತಾರೆ. ಹತ್ತಿಪ್ಪತ್ತು ಸಾಮಾನಿನಲ್ಲಿ ಒಂದೆರಡಕ್ಕೆ




ಬಿಲ್ಲು ಮಾಡದಿದ್ದರೇನು? ಎಂಬ ಪ್ರಶ್ನೆ ಭಾರತಮಾತೆಯ ಸುಪುತ್ರರಾದ ನಮ್ಮಲ್ಲಿ ಮೂಡದಿದ್ದೀತೇ! ಆದರೆ ಆ ವಾತಾವರಣದಲ್ಲಿ ನಾವು ಹಾಗೆ ಮಾಡಲಾರೆವು.

ಕೊರಿಯರ್‌ನಲ್ಲಿ ಬರುವ ಬೆಲೆಬಾಳುವ ವಸ್ತು, ಉಡುಗೊರೆಗಳು ಹತ್ತಿಪ್ಪತ್ತು ದಿನಗಳ ಕಾಲ ಊರಿಗೆ ಹೋಗದವರ ಬಾಗಿಲ ಬಳಿಯೇ ಸುರಕ್ಷಿತವಾಗಿ ಉಳಿದಿರುತ್ತವೆ. ಹಬ್ಬಗಳಿಗೆ ಮಕ್ಕಳಿಗೆ ಕೊಡಲೇಬೇಕಾದ ಚಾಕೋಲೇಟುಗಳನ್ನೂ ಬಾಗಿಲ ಹೊರಗೆ ಇಟ್ಟು ಕೆಲಸಕ್ಕೆ ಹೋಗುವುದೂ ಉಂಟು. ಮಕ್ಕಳೂ ಅತಿಯಾಸೆ ಮಾಡದೆ ಕೆಲವನ್ನು ಮಾತ್ರ ಕೊಂಡೊಯ್ಯುವುದು ಕೂಡ ಉಂಟು. ಕೆಲಸಗಾರರಿಗೆ ಮೇಲ್ವಿಚಾರಕರು ಬೇಕಾಗಿಲ್ಲ. ತಮ್ಮ ಕೆಲಸ ತಾವು ಮಾಡುತ್ತಾರೆ. ಸರಕಾರೀ (ಸಾರಿಗೆ) ಕಚೇರಿಗೆ ನನ್ನ ಮಗನೊಂದಿದೆ ಹೋಗಿದ್ದೆ. ಅತ್ಯಂತ ಶಿಸ್ತು, ವಿನಯ, ಹಾಗೂ ಕೆಲಸ ಮಾಡಿಕೊಡಲೆಂದೇ ತಾವಿರುವುದು ಎಂಬ ನಂಬಿಕೆ ನನಗೆ ಅವರಲ್ಲಿ ಕಂಡಿತು. ಸಿಡುಕು ಮುಖದ ಮೇಲೆ 'ನಿರೀಕ್ಷೆ'ಯ ಯಾಚನೆ ಹೊತ್ತ ನಮ್ಮ ಆರ್.ಟಿ.ಓ.ಗಳು, ಏಜೆಂಟರುಗಳು ನನ್ನ ಕಣ್ಮುಂದೆ ಮುಂದೆ ಬಂದು ಹೋದರು!

ಬಹುಷಃ ನಮ್ಮ ಮಕ್ಕಳು ಅಮೇರಿಕ ಇಷ್ಟಪಡಲು ಈ ಎಲ್ಲ ಕಾರಣಗಳಿವೆ. ಇನ್ನೊಂದು ತುಂಬಾ ಮಹತ್ವದ್ದು: ಅದು ವ್ಯಕ್ತಿ ಘನತೆ. ಧಡೂತಿ, ಬಡಕಲು, ಕುಳ್ಳ, ಎತ್ತರ, ಕಪ್ಪು, ಬಿಳಿ, ಭಾಷೆ, ವಿವಿಧ ದೇಶದ, ಜನಾಂಗದ ಎಂಥ ವ್ಯಕ್ತಿತ್ವದ ಕುರಿತೂ ಇಲ್ಲಿ ಸಣ್ಣ ಮಾತು, ವ್ಯಂಗ್ಯ, ಕಣ್ಣಲ್ಲಾಗಲೀ ಮಾತಲ್ಲಾಗಲೀ ವ್ಯಕ್ತವಾಗದು. ವಿಚಿತ್ರ ಬಟ್ಟೆ ಕೇಶಾಲಂಕಾರಗಳೂ ನಮ್ಮೊಳಗೆ ನಗು ತರಿಸಬಹುದು. ಆದರೆ ಅಲ್ಲಿ ಅಂಥದು ಸಾಧ್ಯವೇ ಇಲ್ಲ. ಆಗಾಗ ಕಪ್ಪು ಜನಾಂಗದವರ ಮೇಲೆ ಅಸಹನೆಯ ಆರೋಪಗಳು ಬರುವುದಿಲ್ಲವೆಂದಲ್ಲ. ಆದರೆ ನಮ್ಮ ದೇಶಕ್ಕೆ ಹೋಲಿಸಿದರೆ ಬಹಳ ಕಡಿಮೆ.

ಹ್ಯಾಲೋವೀನ್, ಥ್ಯಾಂಕ್ಸ್ ಗಿವಿಂಗ್, ಕ್ರಿಸ್ಮಸ್ ಹಬ್ಬಗಳ ಹೊತ್ತಿಗೆ ನಾವಲ್ಲಿದ್ದೆವು. ಹ್ಯಾಲೋವೀನ್ ಭೀಕರತೆಯ ಹಬ್ಬ. ಮನೆಯ ಮುಂದೆ ಅಸ್ಥಿಪಂಜರ, ಹೆಣಗಳ ಚಿತ್ರ/ಮೂರ್ತಿಗಳನ್ನು ಇಟ್ಟು ವಿದ್ಯುತ್ ಅಲಂಕಾರ ಮಾಡುವುದು ಸಾಮಾನ್ಯ. ನಾವು ಇದೇ ಹೊತ್ತು ನ್ಯೂಯಾರ್ಕಿನ ಪ್ರಸಿದ್ಧ ಟೈಮ್ ಸ್ಕ್ವೇರ್‌ನಲ್ಲಿದ್ದು ರಾತ್ರಿ ೧ ಗಂಟೆಯವರೆಗೂ ಜನಸಂದಣಿಯೊಂದಿಗೆ ಹ್ಯಾಲೋವೀನ್ ಹಬ್ಬ ನೋಡಿದೆವು. ಭೀಕರ ವೇಷಗಳು, ಕಾರಿನ ಕಸರತ್ತುಗಳು, ಒಂದರ ನಂತರ ಒಂದು ಸಾಲಾಗಿ ಬರುತ್ತಿದ್ದುವು. ಅವರೊಂದಿಗೆ ಸೆಲ್ಫಿ, ಫೋಟೋಗಳ ಗಲಾಟೆ. ಥ್ಯಾಂಕ್ಸ್ ಗಿವಿಂಗ್ ಒಂದು ಕೃತಜ್ಞತೆ ಅರ್ಪಿಸುವ ಹಬ್ಬ. ಗೆಳೆಯರು, ಹಿರಿಯರು, ಗುರುಗಳು ಬಳಗದವರೆಲ್ಲರನ್ನು ಕಂಡು ಉಡುಗೊರೆ ಕೊಟ್ಟು ಕೃತಜ್ಞತೆ ಅರ್ಪಿಸುವುದು ಇದರ ಉದ್ದೇಶ. ಇನ್ನು ಕ್ರಿಸ್ಮಸ್ ಗೊತ್ತಿದ್ದದ್ದೇ. ಈ ನಡುವೆ ದೀಪಾವಳಿ ಕೂಡ ಅಮೇರಿಕಾದ ಹಿಂದೂಗಳಲ್ಲದವರಲ್ಲೂ ಮೆರುಗು ಪಡೆಯುತ್ತಿದೆ.

ಉಳಿದಂತೆ ನಮ್ಮ ಅಮೇರಿಕ ವಾಸದ ಮುಖ್ಯ ವಿಷಯ ದಿನದ ಹವಾಸೇವನೆ. ಸ್ವಚ್ಛ ಪರಿಸರ, . ಪರಿಚಯವಿರಲಿ ಇರಲಿ ಎದುರು ಬಂದವರಿಗೆಲ್ಲ 'ವಿಶ್' ಇರಲೇಬೇಕು. ನಡೆದಷ್ಟೂ ಹಾದಿ. ಗಿಡಮರಗಳು. ದಾರಿಯಲ್ಲಿ ಸಿಕ್ಕುವ ಜಿಂಕೆ, ಮೊಲಗಳು, ಮತ್ತು ಸಾಕಿದ ಒಡೆಯರ ಜೊತೆಗಿನ ನಾಯಿಗಳು.




ಅಮೇರಿಕ, ಅದರ ಧೋರಣೆ, ರಾಜಕೀಯ, ನನ್ನ ಅಳವಿನದಲ್ಲ. ಆದರೆ ಪ್ರತ್ಯಕ್ಷ ನೋಡಿದಾಗ ನನ್ನ ಕೆಲ ಅಭಿಪ್ರಾಯಗಳಿಗೆ ಧಕ್ಕೆ ಬಂದದ್ದಂತೂ ಸುಳ್ಳಲ್ಲ!

(ನಿವೃತ್ತ ಬ್ಯಾಂಕ್ ಮ್ಯಾನೇಜರರಾದ ಲೇಖಕ ವಿಜಯೇಂದ್ರ ಪಾಟೀಲ್ ನಮ್ಮ ಒಳ್ಳೆಯ ಲಲಿತ ಪ್ರಬಂಧಕಾರರು ಕೂಡ)

ಪುಸ್ತಕಾವಲೋಕನ

ಪು: ಸಾವಿನ ದಶಾವತಾರ (ಕಾದಂಬರಿ) ಲೇ: ಕೆ. ಸತ್ಯನಾರಾಯಣ ಪ್ರ ಅಭಿನವ, ಬೆಂಗಳೂರು ಪು :೧೮೦ ಬೆಲೆ ರೂ. ರೂ. ೧೫೦/-

ಸಂರಚನೆಯ ನಿರಚನೆ



ಕಳೆದ ಮೂರು ದಶಕಗಳಿಂದ ಕನ್ನಡದ ಓದುಗರಿಗೆ ತಮ್ಮ ಕಥೆ, ಕಾದಂಬರಿಗಳ ಮುಖೇನ ಚಿರಪರಿಚಿತರಾಗಿರುವ ಕೆ.ಸತ್ಯನಾರಾಯಣ ಅವರ ಈಚಿನ (೮ನೆಯ) ಕಾದಂಬರಿ ಇದು. ಭಿನ್ನ ಹಾಗೂ ತೀವ್ರವಾಗಿ ಬರೆಯುವ ಅವರ ಬರವಣಿಗೆಯನ್ನು ಕನ್ನಡದ ಗಂಭೀರ ಓದುಗ ವರ್ಗ ತುಂಬಾ ಕುತೂಹಲ ಹಾಗೂ ನಿರೀಕ್ಷೆಯಿಂದಲೇ ಮೊದಲಿನಿಂದಲೂ ಬರಮಾಡಿಕೊಂಡಿದ್ದಾರೆ. ಅವರ ಬರವಣಿಗೆಂಯು ತೀರಾ ಲೋಲುಪವಾಗದಿರುವುದೇ ಇದಕ್ಕೆ ಕಾರಣವಿದ್ದೀತು.

ಕಾದಂಬರಿ ರಚನೆಯಲ್ಲಿ ಎರಡು ಬಗೆಯ ನಿರೀಕ್ಷೆಗಳಿರುತ್ತವೆ. ಓದುಗನ ಹುಸಿ ಮಾಡದಿರುವುದು ಅವನ ಅಪೇಕ್ಷೆಯನ್ನು, ಅವನ ಭಾವ ಪ್ರಚೋದನೆಯನ್ನು ರೋಚಕವಾಗಿ ಉಂಟುಮಾಡುವುದೆನ್ನುವುದು ಒಂದು ಅರ್ಥವಾದರೆ, ಇನ್ನೊಂದು ಅವರೇನೋ ಹೊಸತನ್ನು ಕೊಡಬಲ್ಲರು ಎಂಬುದೂ ಒಂದು ಬಗೆ. ಈ ಎರಡನೆಯ ಬಗೆಯನ್ನು ಸತ್ಯನಾರಾಯಣರು ಮೊದಲಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಈ ಕಾದಂಬರಿಯಲ್ಲಂತೂ ಗೃಹೀತ ಸಂರಚನೆಗಳನ್ನೆಲ್ಲಾ ನಿರಚನಗೊಳಿಸುವ ಒಂದು ಪ್ರಯೋಗವನ್ನು ಆತ್ಮವಿಶ್ವಾಸದಿಂದಲೇ ಮಾಡಿದ್ದಾರೆ ಮತ್ತು ಅದರ ಮೂಲಕ ಕನ್ನಡ ಕಾದಂಬರಿಯನ್ನು ಇನ್ನೊಂದು ಮಜಲಿಗೆ ಕೊಂಡೊಯ್ದಿದ್ದಾರೆ.

ಇದು ಕೇವಲ ಅವರ ನಿರೂಪಣಾ ತಂತ್ರಕ್ಕೆ ಸಂಬಂಧಿಸಿದ ಮಾತೆಂದು ಈ ಕಾದಂಬರಿಯನ್ನ ಪ್ರವೇಶಿಸಿದವರಿಗೆ ಮೊದಲಿಗೆ ಅನ್ನಿಸಬಹುದು. ಆದರೆ ಅದೊಂದು ಅನುಷಂಗಿಕ. ಪ್ರಜ್ಞಾಪೂರ್ವಕವೂ ಇದ್ದಿರಬಹುದು. ಆದರೆ ಅದೇ ವಿಜೃಂಭಿಸದೆ ಕೃತಿಯ ಆಕೃತಿಯನ್ನು ಅಳ್ಳಕವಾಗಿಸದೆ ಕೊನೆ ಮುಟ್ಟುವ ಹೊತ್ತಿಗೆ ಈ ತಂತ್ರದಾರಿಯೇ ಮರೆತು ಹೊಸಲಯದ ಸಹಜಯಾನದಲ್ಲಿ ಹೊಸ ತಾತ್ವಿಕತೆಯೊಂದನ್ನು ಓದುಗ ಎದುರುಗೊಳ್ಳುತ್ತಾನೆ. ಈ ಲಯಕ್ಕೆ ಹೊಂದಿಕೊಳ್ಳುವುದಾಗಲೇ ದೇವನೂರರಿಂದಲೇ ಓದುಗ ಅಭ್ಯಾಸ ಮಾಡಿಕೊಂಡಿದ್ದಾನೆ. ತಂತ್ರವೇ ವಿಜೃಂಭಿಸುವ ಕೃತಿಗಳನ್ನು ಕೈ ಬಿಟ್ಟೂ ಇದ್ದಾನೆ.

ಇದನ್ನು ಕಾಣ್ಕೆ, ದರ್ಶನ ಎಂಬಂತ ದೊಡ್ಡ ಮಾತುಗಳಲ್ಲಿ ಹೇಳಲಾರೆ, ಸಹಜಯಾನದಲ್ಲಿ ತಲುಪಲೇಬೇಕಾದ ಗಮ್ಯ. ಇದು ಪ್ರಕ್ರಿಯಾತ್ಮಕವಾದುದು. ಶೂನ್ಯದಿಂದ ಹೊರಟು ಸುಮ್ಮನೆ ಆಗುವುದೆಲ್ಲವನ್ನು ಆಗುತ್ತಿರುವಂತೆ ಕಾಣುತ್ತಾ, ಯಾವ ವಿಶಿಷ್ಟಾರ್ಥಗಳನ್ನು ಆರೋಪಿಸದೆ ಎಲ್ಲ ಕ್ಷಣಗಳನ್ನು ಜೀವಂತ ಕ್ಷಣಗಣನ್ನಾಗಿಸಿಕೊಳ್ಳುವ ಬಗೆ. ಪ್ರತೀತ್ಯುತ್ಪಾದದ ಹಾಗೆ. ಯಾವುದೂ ನಿರಾಕರಿಸುವುದೂ ಅಲ್ಲಾ, ಅನರ್ಥವೆನ್ನುವುದಲ್ಲ, ಇದು ಮಹತ್ತು; ಇದು ಕ್ಷುಲ್ಲಕ ಎನ್ನುವ ಬಗೆಯದಲ್ಲ. ಬದುಕನ್ನು ಕಾಣುವ ಬಗೆ; ಬಾಳುವ ಬಗೆ; ಬಾಳಿಸುವ ಬಗೆ, "ವಿಮುಖಕ್ಕೇ ವಿಮುಖವಾಗುವುದು". ಕಾದಂಬರಿಯ ಒಟ್ಟು ಆಕೃತಿಯೇ ಹೀಗೆ ಮೈದಾಳಿರುವ ಕಾರಣವೇ ಇದು ಕತೆಯಿಲ್ಲದ ಕಾದಂಬರಿಯೆಂದೇ, ಆತ್ಮಕಥಾನಕವೆಂದೋ, ಕೃತಿಕಾರನ ಮಾತಿನ ಚಪಲವೆಂದೋ–ಎಂದೇನೆನೋ ಅನ್ನಿಸಬಹುದು. ಪ್ರಕಾರದ ಓದಿನ ಹಂಗಿನ ಜಾಡಿನಲ್ಲಿ ಬಿದ್ದವನಿಗೆ ಇದು ದಿಕ್ಕು ತಪ್ಪಿಸುವಂತಾ ಅನುಭವವಾಗುತ್ತದೆ. ಕೆಲವೊಮ್ಮೆ ಕಕ್ಕಾವಿಕ್ಕಿ ಎನ್ನಿಸಬಹುದು. ಲೋಲುಪ ಬರವಣಿಗೆಯನ್ನೇ ನಿರೀಕ್ಷಿಸಿದವನು ಸುರುವಿಗೆ ಇದರ ಓದಿಗೆ ಬೆನ್ನು ತಿರುಗಿಸಿಯಾನು.

ಕನ್ನಡದ ಮಹತ್ವ ಕಾದಂಬರಿಯೊಂದಕ್ಕೆ "ಕೇಂದ್ರವೇ ಇಲ್ಲ" ಎಂದು ಷರಾ ಬರೆದು ಕಾದಂಬರಿಯನ್ನು ಮೂಲೆಗೆಸೆಯಲು ವಿಮರ್ಶಾ ಪ್ರಭೃತಿಗಳು ಪ್ರಯತ್ನಿಸಿದ್ದುಂಟು. ಆದರೆ, ಅದು ಇಂದೇನಾಗಿದೆ ಎಂಬುದು ಗೊತ್ತು. ಸ್ವಲ್ಪ ಯಾಮಾರಿದರೂ ಈ ಕಾದಂಬರಿಯೂ ಹಾಗೆಯೇ–ವಸ್ತುವಿಲ್ಲ ಎಂದು ನಿರಾಕರಣೆಗೆ ಒಳಗಾಗುವ ಅಪಾಯವೂ ಇಲ್ಲದಿಲ್ಲ. ಆದರೆ ಅದು ಹಾಗಿಲ್ಲ.


ಕಾದಂಬರಿ ಒಳಗೊಳ್ಳುವ ವಿಸ್ತಾರವಾದ ಅನುಭವ ಪ್ರಾಮಾಣ್ಯವೇ ಇಲ್ಲಿ ವಸ್ತು. ಆಕೃತಿಯ ಬಂಧದೊಳಗೆ ಬಿಡಿಸಿ ನೋಡಲಾಗದ ಹೆಣಿಗೆಯನ್ನು ಅದು ಸಾಧಿಸಿಕೊಂಡಿದೆ. ಅದು ಪ್ರಜ್ಞಾಪೂರ್ವಕವಾಗಿ ಆಗಿದೆಯೊಂದು ಅನ್ನಿಸದ ಒಂದು ಆಕೃತಿಯ ರೂಪಣವಾಗಿದೆ. ವಸ್ತುವಿನ ನೆಲೆಗೆ ಕೈ ಹಾಕಿದರೆ, ಪುರುಷೋತ್ತಮ, ಅನುಪಲ್ಲವಿ, ಪ್ರತಾಪ, ಪಾಟೀಲರ ಮಗಳು, ಒರಿಸ್ಸಾ ಹುಡುಗ, ಪಂಜಾಬಿ ಹುಡುಗಿ, ರಾಮಚಂದ್ರ–ಹೀಗೆ ಸಾವು, ಆತ್ಮಹತ್ಯೆಯ ಘಟನೆಗಳನ್ನು ಬಿಡಿ ಬಿಡಿಯಾಗಿ ಡಿಸೆಕ್ಟ್ ಮಾಡುವ ಪ್ರಯತ್ನ ಮಾಡಬಹುದು. ಆದರೆ ಆಕೃತಿಯೊಳಗಿಂದ ಹೀಗೆ ಬಿಡಿಸುವುದೇ ಕಾದಂಬರಿಯ ದೇಹದಿಂದ ಪ್ರಾಣವನ್ನು ಬಿಡಿಸಿದಂತೆ.

ದಿಕ್ಕುಗೆಡುವ ವೃತ್ತಿಗಳ ಆಯ್ಕೆಗಳ ನಡುವೆ ಜೀವನದ ಕಟ್ಟಕಡೆಯ ಕ್ಷಣದೊಂದಿಗೆ ವ್ಯವಹರಿಸುವ ಅಪರಕರ್ಮದ ವೃತ್ತ ನಿರೂಪಕನ ವೃತ್ತಿ; ನೌಕರಿಯೋ, ಚಾಕರಿಯೋ, ಸಮಾಜ ಸೇವೆಯೋ? ಎಂಬ ಗೊಂದಲಗಳ ನಡುವೆ ಇದು ತನ್ನನ್ನು ತಾನು ಕಂಡುಕೊಳ್ಳುವ, ಶೋಧಿಸಿಕೊಳ್ಳುವ ಮಾರ್ಗವೆಂದು; ಅದೇ ಗಮ್ಯವೆಂದು ಅನ್ನಿಸತೊಡಗಿ ತನ್ನ ವೃತ್ತಿಯನ್ನು ಗಾಢವಾಗಿ ಗೌರವಿಸುವ, ತನ್ನ ಪತ್ನಿಯೂ ಈ ಕಡೆ ಹೊರಳಿಕೊಳ್ಳುವ ರೀತಿ ಪ್ರಕ್ರಿಯಾತ್ಮಕವಾದುದು. ಬುದ್ಧ ಗುರುವಿನ ಜ್ಞಾನದಿಂದ ಹಿಡಿದು ಕ್ವಾಂಟಂ ಫಿಸಿಕ್ಸ್‌ನವರೆಗೆ ಎಲ್ಲವನ್ನು ಒರೆಗೆ ಹಚ್ಚುವ ಅಗಾಧತೆಯೂ ಸತ್ಯನಾರಾಯಣರು ಕಾದಂಬರಿಯ ಕ್ಯಾನ್‌ವಾಸನ್ನೇ ಬ್ರಹ್ಮಾಂಡದ ಚೌಕಟ್ಟಿನಲ್ಲಿರಿಸಿ ನೋಡುವ ರೀತಿ ಒಂದು ಕ್ಷಣ ಬೆರಗನ್ನು ಉಂಟು ಮಾಡುತ್ತದೆ. ದೇಶ ಕಾಲಾತೀತವಾಗುವ ತಾತ್ವಿಕತೆಯೊಂದು ಅರಿವಿಲ್ಲದೆ ಓದುಗನೊಳಗೆ ಧ್ವನಿಸದಿರಲಾರದು. ಸ್ವಭಾವದಿಂದ ಬಿಡುಗಡೆಗೊಳ್ಳುವ ಯಾವ ರಹದಾರಿಯೂ ಮನಸ್ಸಿಗಿರಲಾರದು. ಅನಿಶ್ಚಿತ ಬದುಕಿನಲಿ, ಅಸಂಗತ ಬಾಳಿನಲ್ಲಿ ನಿಶ್ಚಿತಜ್ಞಾನದಿಂದ ಬದುಕುವುದರ ಕಡೆ ಜಗತ್ತು ಹೊರಳಿಕೊಳ್ಳಬೇಕು. ಆಗಲೇ ಪುನರಪಿವರ್ತನೆ, ಅಸಂಗತತೆ, ಪೂರ್ವ ಗೃಹೀತಗಳಿಂದ ಹೊರಬರಬಹುದೆಂಬುದನ್ನು, ಸಾವನ್ನು ಕುರಿತ ಕರ್ಮದ ಮಾತಾಗಲಿ, ಧರ್ಮದ ಮಾತಾಗಲಿ ಇದು ಆಗಿರದೆ ಇರುವುದನ್ನು ಇರುವಂತೆಯೇ ಕಣ್ಣೊಳಗಿಳಿಸುವ ಸಾಚಾಪ್ರವೃತ್ತಿಯನ್ನು ನಾವು ಇಲ್ಲಿ ಎದುರುಗೊಳ್ಳುತ್ತವೆ. ಹೀಗೆಂದರೆ ಕಾದಂಬರಿಗೊಂದು ತಾತ್ವಿಕತೆಯನ್ನು, ಆಶಯವನ್ನು ಬಲವಂತದಿಂದ ಆರೋಪಿಸಿದಂತೆ–ಎಂಬ ಅರಿವು ನನಗಿದೆ. ಇದು ಪಾರ್ಶ್ವಿಕ, ಆತ್ಯಂತಿಕವೂ ಎಲ್ಲಾ. ಕಾದಂಬರಿಯನ್ನು ಎದುರಾಗುತ್ತಲೇ ಅದನ್ನು ನಮ್ಮ ಪ್ರಜ್ಞಾಲೋಕದೊಳಕ್ಕೆ ಇಳಿಸಿಕೊಳ್ಳುತ್ತಾ ಅಲ್ಲಾಗುವ ಕೋಲಾಹಲ, ತಳಮಳಗಳಿಗೆ ಸ್ವಯಂ ಸಾಕ್ಷಿಯಾಗುವುದೇ ಇರುವ ಸಹಜ ದಾರಿ.

ಮಾತುಕತೆಯ ನಿರೂಪಣಾ ಶೈಲಿಯನ್ನು ರೂಢಿಸಿಕೊಳ್ಳುವ ಸತ್ಯನಾರಾಯಣರು ಸಾವಿನ 'ದಶಾವತಾರ'ದ ಸಂವಾದಕ್ಕೆ ಇಳಿದಿರುವುದು ಈ ಕಾದಂಬರಿಯ ಯಶಸ್ಸಿಗೆ ಮತ್ತೊಂದು ಕಾರಣ. ಒಮ್ಮೊಮ್ಮೆ ಮಾತು ಅತಿಯಾಯಿತೆನ್ನಿಸಬಹುದು, ಚಪಲದಂತೆಯೂ ಕಾಣಬಹುದು. ಆದರೆ, ಅದೇ ನಮ್ಮೊಳಗಿನ ಆತ್ಮಪ್ರಜ್ಞೆಯೊಂದಿಗೆ ಸಂಭಾಷಿಸುವ ನಿಜದ ಧ್ವನಿಯಂತೆಯೂ ಕಾಣಬಹುದು. ಆ ಮಾತಿನಲ್ಲಿ ವಿಷಾದತೆ ಎಲ್ಲೂ ಇಣುಕದೆ ವಾಸ್ತವತೆಯೊಂದರ ಅರಿವನ್ನು ಉಂಟು ಮಾಡಿ ನಮ್ಮ ಆಲೋಚನೆ, ಅನುಭವಗಳನ್ನು ವಿಸ್ತರಿಸುತ್ತಾ ಗೃಹೀತಗಳ ಮೇಲೆ ದಾಳಿಯನ್ನು ಮಾಡಬಹುದು. ಒಳಗೊಳಗೇ ಗೊತ್ತಿಲ್ಲದಂತೆ ಕಾದಂಬರಿಯ ನಿರೂಪಕ ಅಭೇದವನ್ನು ಸೃಷ್ಟಿಸುವ ಅನುಭವವೂ ಆಗದಿರಲಾರದು. ಹೀಗೆ ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಆವರ್ತನ ಕ್ರಿಯೆಯ ಜೀವಂತಿಕೆಯನ್ನು ಕಾದಂಬರಿಯ ಮಾತು–ಕತೆಯ ಶೈಲಿ ಯಶಸ್ವಿಗೊಳಿಸಿದೆ.

ಇಂದನ್ನು ಹಿಂದಿಕ್ಕಿ ಮುಂದನ್ನು ಹೊಸತನದಿಂದಲೇ ಸ್ವೀಕರಿಸುವ ಅಪೇಕ್ಷೆಯಂತೆ ಸತ್ಯನಾರಾಯಣರು ತಮ್ಮ ಬರವಣಿಗೆಗಳ ಮಿತಿಗಳನ್ನು ದಾಟುತ್ತಾ ಹೊಸ ಹೊಸದಕ್ಕೆ ಕೈ ಚಾಚುವ ಕಾರಣವೇ ನಮ್ಮ ನಡುವಿನ ಮುಖ್ಯ ಲೇಖಕರಾಗುತ್ತಾರೆ. ಈ ಕಾದಂಬರಿ ಅವರ ಪ್ರಯೋಗ ಶೀಲತೆಯನ್ನು ಮತ್ತೊಮ್ಮೆ ದೃಢಪಡಿಸಿದೆ. ನವೀನ ಅನುಭವಕ್ಕೆ ತೆರೆದುಕೊಳ್ಳುತ್ತದೆ.

–ಡಾ. ಲೋಕೇಶ್ ಅಗಸನಕಟ್ಟೆ



ಆಸೆ ಮತ್ತು ಭರವಸೆಗಳ ನಡುವೆ :

ಆರು ಜನ ಕವಯತ್ರಿಯರ ಹೊಸ ಸಂಕಲನಗಳು ; ಒಂದು ಪಕ್ಷಿನೋಟ

ಕವಿತೆ ಎಂದರೆ ಹಲವರಿಗೆ ಜೀವ. ಅದು ಹೇಗೇ ಇರಲಿ, ಸಹೃದಯರು ಅದನ್ನು ಮುಟ್ಟದೆ ಮುಂದೆ ಸಾಗುವುದಿಲ್ಲ. ಈ ದಿನಮಾನಗಳಲ್ಲಂತೂ ಎಲ್ಲೆಲ್ಲೂ ಕವಿತೆ ಎಂಬ ರಚನೆಗಳೇ! ಫೇಸ್‌ಬುಕ್, ವಾಟ್ಸಾಪ್, ಯೂ ಟ್ಯೂಬ್ , ಪತ್ರಿಕೆಗಳು, ಸಂಕಲನಗಳು, ಕವಿ ಗೋಷ್ಠಿಗಳು, ಕಮ್ಮಟಗಳು... ಸಾವಿರ ಸಾವಿರ ಕವಿಗಳಿದ್ದಾರೆ. ಸಾವಿರ ಸಾವಿರ ಕವಿತೆಗಳಿವೆ. ದೇಗುಲಕ್ಕೆ ಎಲ್ಲ ಹೋಗುವವರು. ನಿಜ ಭಕ್ತರ ಸಂಖ್ಯೆ ಎಷ್ಟಿದ್ದೀತು? ನಿಜವಾಗಿ ಕವಿತೆಗಳಿಗೆ ನಡೆದುಕೊಳ್ಳುವ ಕವಿಗಳ ಸಂಖ್ಯೆ ಕಡಿಮೆಯೇ. ಇನ್ನು ಸಹೃದಯ ವಿಮರ್ಶೆ ನೀಡುವವರಿಲ್ಲ ಎಂಬ ಕೊರಗೂ ಇದೆ. ಪಾಪ, ಒಬ್ಬ ವೈದ್ಯ ಎಷ್ಟು ರೋಗಿಗಳನ್ನು ನಿಭಾಯಿಸಬಲ್ಲ? ಒಳ್ಳೆಯ ಕವಿತೆ ಬರೆಯಬೇಕೆಂದು ಎಲ್ಲ ಕವಿಗಳೂ ಹೆಣಗುತ್ತಲೇ ಇರುವರು. ಅಕ್ಕ, ಬಸವ, ಪುರಂದರ, ಕನಕ, ರೂಮಿ, ಗಿಬ್ರಾನ್, ನೆರೂದಾ, ಕುವೆಂಪು, ಬೇಂದ್ರೆ, ಶಿವಪ್ರಕಾಶ್, ಸಿದ್ಧಲಿಂಗಯ್ಯ ಮುಂತಾದವರನ್ನು ಮತ್ತೆ ಮತ್ತೆ ಓದುತ್ತಲೇ ಇರುತ್ತೇವೆ. ಅವರಂತೆಯೇ ಜನ ಮಾನಸದಲ್ಲಿ ಸದಾ ಉಳಿಯುವ ಕವಿತೆ ಬರೆಯುವ ಆಸೆ ಕಾವ್ಯವನ್ನು ಗಂಭೀರವಾಗಿ ತೆಗೆದುಕೊಂಡ ವಿದ್ಯಾರ್ಥಿ/ನಿಯರಿಗೆ ತಪ್ಪಿದ್ದಲ್ಲ.

ಹಲವು ಸಾವಿರ ಕವಿತೆಗಳನ್ನು ಪ್ರತಿ ವರುಷವೂ ಓದುವ ನನಗೆ ಇನ್ನೂ ಬರೆಯುವ /ಓದುವ ಆಸೆ ತೀರಿಲ್ಲ. ಸದಾ ಕವಿತೆಯ ಶಕ್ತಿಯ ಬಗ್ಗೆ ಅಚ್ಚರಿ ಆದರ, ಕುತೂಹಲ. ಕವಿತೆಯ ಬಗೆಗಿನ ಈ ತಣಿಯದ ಕುತೂಹಲದ ಫಲವಾಗಿಯೇ ಒಂದಿಷ್ಟು ಕವಯತ್ರಿಯರ ಇತ್ತೀಚಿನ (೨೦೧೭) ಕವನ ಸಂಕಲನಗಳನ್ನು ಒಟ್ಟಿಗೆ ಓದಿದೆ : **ಎಚ್. ಎಸ್. ಅನುಪಮ** ಅವರ **'ನೆಗೆವ ಪಾದದ ಜಿಗಿತ', ಮಂಜುಳಾ ಹುಲಿಕುಂಟೆ** ಅವರ **'ದೀಪದುಳುವಿನ ಕಾತರ', ಎಲ್. ಸಿ. ಸುಮಿತ್ರ** ಅವರ **'ತುಂಬೆ ಹೂ', ಸಬಿತಾ ಬನ್ನಾಡಿ** ಅವರ **'ನಿರಿಗೆ', ಡಿ. ಬಿ ರಜಿಯಾ** ಅವರ **'ಪರದೆ ಸರಿದಂತೆ'** ಮತ್ತು **ಸುಶೀಲ ಸದಾಶಿವಯ್ಯ** ಅವರ **'ಚಿತ್ತ ಕಲಕಿದಾಗ'**. ಎಲ್ಲವೂ ಓದಿಸಿಕೊಂಡು ಹೋಗುವ ರಚನೆಗಳೇ. ಆದರೆ ಓದಿ ಮುಗಿಸಿದಾಗ ಮನದಲ್ಲಿ ಉಳಿದದ್ದು ಕೆಲವೇ ಕೆಲವು. ಮರಳಿ ಓದುವೆನೆ? ಅನುಮಾನ! ನನ್ನ ಓರಗೆಯ ಗೆಳತಿಯರ ಕವನಗಳನ್ನು ಓದಿ ಖುಷಿಪಡುತ್ತಿರುವ ಸಮಯದಲ್ಲೇ ಇನ್ನೊಂದು ಹೊಳೆಯಿತು. ಇವರ ಕವನಗಳ ಕೆಲವು ಸಾಲುಗಳು ನಿಜಾರ್ಥದಲ್ಲಿ ನಮ್ಮ ಇತ್ತೀಚಿನ ಕವನಗಳನ್ನು ತೀಕ್ಷ್ಣವಾಗಿ ವ್ಯಾಖ್ಯಾನಿಸಿದಂತೆ ಇದ್ದವು :

ಪವಾಡಕ್ಕೂ ಕಣ್ಕಟ್ಟಿಗೂ
ಬಲಿಗೂ ಓಕುಳಿಗೂ
ಫರಕೇ ಇಲ್ಲದ ಕಡೆ
ಕರುಣವೆಂಬುದು ಬರಿಯ ಶಬುದವಷ್ಟೆ? **(ಎಚ್. ಎಸ್. ಅನುಪಮ)**

ಹೊಸಗಾಳಿ ಬೆಳಕಿಗೆ ವಾತಾಯನಗಳಿಲ್ಲ
ಹಳೆಗಾಳಿಯ ಹಳಸು ಹೋಗದಲ್ಲ
ಹೊರಗೆ ಮಳೆ ಕತ್ತಲು, ಎಂದಿಗೆ ಬೆಳಗು? **(ಎಲ್. ಸಿ. ಸುಮಿತ್ರ)**

ಬೆಳಕ ಮೋಹಕೆ
ಬದುಕ ಸುಟ್ಟುಕೊಳ್ಳುವ
ದೀಪದುಳುವಿನ ಕಾತರ? **(ಮಂಜುಳಾ ಹುಲಿಕುಂಟೆ)**

ಬೆಳಕೂ ಇಲ್ಲದೆ ಗುರಿಯೂ ಇಲ್ಲವಾದರೆ
ದಾರಿಗೆ ಅರ್ಥವೇ ಇಲ್ಲ **(ಸುಶೀಲಾ ಸದಾಶಿವಯ್ಯ)**

ಬದಲಾದ ಈ ಕಾಲದ ವೇಗಕ್ಕೆ
ಯಾರನ್ನು ದೂರುವುದು? **(ಡಿ.ಬಿ. ರಜಿಯಾ)**

ಓ... ಅದ್ಯಾವ ಬ್ರಹ್ಮ ವಿದ್ಯೆ ಅಂತೀರಿ ನೀವು?
ಎಷ್ಟಾದರೂ ಇದು ಬೆಂಕಿಯನ್ನೇ
ನೀರು ಮಾಡುವ ವಿದ್ಯೆ ಅಲ್ಲವೆ? **(ಸಬಿತಾ ಬನ್ನಾಡಿ)**

ಹೌದು ಕವಿತೆ ಬರೀ ಶಬುದವೇ? ಎಂದಿಗೆ ಬೆಳಗು? ಯಾಕಿಷ್ಟು ಕಾತರ? ಯಾರನ್ನು ದೂರುವುದು? ಅದೇನು ಬ್ರಹ್ಮವಿದ್ಯೆಯೇ? ಅರ್ಥವುಂಟೆ?

ಕವಿತೆಯನ್ನು ಬರೆಯುವ ಜೊತೆ ಜೊತೆಗೇ ಅದು ಎಷ್ಟರಮಟ್ಟಿಗೆ ಸಫಲ ಎಂಬ ಪ್ರಶ್ನೆಯನ್ನೂ ಕೇಳಿಕೊಂಡು ಸಾರ್ಥಕ ಕವಿತೆಗಳನ್ನು ಬರೆಯುವ ಆಶಯ ಹೊತ್ತ ಗೆಳತಿಯರ ಕವನಗಳನ್ನು ಅಚ್ಚರಿ ಬೆರೆತ ಕುತೂಹಲದಿಂದ ಅಡಿಯಿಂದ ಮುಡಿಯವರೆಗೆ ಓದಿದೆ. ಮೇಲಿನ ಉಲ್ಲೇಖಿತ ಸಾಲುಗಳು ಆಯಾ ಕವಯತ್ರಿಯರ ಕಾವ್ಯದ ಪ್ರಾತಿನಿಧಿಕ ಸಾಲುಗಳೇ ಆಗಿವೆಯೆಂದು ಭಾವಿಸಿ ನೋಡಿದಾಗ ಅವು ಆಯಾ ಕವಿಯತ್ರಿ ಕವಿತೆ ಬಗ್ಗೆ ಹೊಂದಿರುವ ಕಲ್ಪನೆ, ಉದ್ದೇಶ ಮತ್ತು ದೃಷ್ಟಿಕೋನಗಳನ್ನಲ್ಲದೆ ಕಾವ್ಯ ಕಟ್ಟುವ ಅವರ ಶಕ್ತಿ ದೌರ್ಬಲ್ಯಗಳನ್ನು ಸೂಚಿಸುತ್ತವೆ ಎಂದು ಹೇಳಬಹುದು. ಈ ಆರು ಕವಯತ್ರಿಯರಲ್ಲಿ ಇಬ್ಬರದು–ಸಬಿತಾ ಬನ್ನಾಡಿ ಮತ್ತು ಮಂಜುಳಾ ಹುಲಿಕುಂಟೆ –ಮಾತ್ರ ಮೊದಲ ಕವನ ಸಂಕಲನಗಳು. ರಜಿಯಾ ಅವರದ್ದು ಇದು ಐದನೇ ಕವನ ಸಂಕಲನ. ಆದರೆ ಬರೆದದ್ದು ಹೆಚ್ಚು ಮತ್ತು ಕಡಿಮೆ ಎಂಬುದು ಕವಿತೆಯ ಗುಣಮಟ್ಟವನ್ನು,– ಲೋಕದೃಷ್ಟಿ, ಅನುಭವದ ಪರಿಪಕ್ವತೆ, ಕಲ್ಪನಾಶೀಲತೆ ಮತ್ತು ಭಾಷಾ ಕೌಶಲಗಳನ್ನು–ತುಂಬ ಹೆಚ್ಚೂ ಕಡಿಮೆ ಮಾಡಲಾರದೆಂಬುದಕ್ಕೆ ಮೊದಲ ಸಂಕಲನಗಳ ಕವಯತ್ರಿಯರ ಕೆಲವು ಕವಿತೆಗಳು ಸಾಕ್ಷಿಯಂತಿವೆ. ಆದರೆ ಕವಿತೆಯ ಸಂತೋಷ ಓದುವುದರಲ್ಲಿರುವಷ್ಟೇ ಬರೆಯುವುದರಲ್ಲೂ ಇರುತ್ತದೆ. ಹಾಗಾಗಿ ಹೆಚ್ಚು ಬರೆಯುವುದರಿಂದ ಪ್ರಯೋಜನವ ಇಲ್ಲ ಎಂದು ಹೇಳಲಾಗುವುದಿಲ್ಲ.


ದಿನೇ ದಿನೇ ಹೆಚ್ಚೆಚ್ಚು ಮಲಿನಗೊಳ್ಳುತ್ತಿರುವ ಸಮಾಜದ ಮನಸ್ಸನ್ನು ಒಳ್ಳೆಯ ಕವಿತೆಗಳು ಮಾತ್ರ ತೊಳೆಯಬಲ್ಲವೇನೋ! ಹಾಗಾಗಿ ಅವು ಹೇಗೇ ಇರಲಿ, ಕವಿತೆಗಳು ಬರುತ್ತಿರಲಿ ಎಂಬುದೇ ನಮ್ಮ ಆಶಯವಾಗಿರಬೇಕು. ವಿಶೇಷವಾಗಿ, ಇಂದಿನ ಹಿಂಸೆಯ ಆತ್ಯಂತಿಕ ಗುರಿಯಾಗುತ್ತಿರುವ ಹೆಣ್ಣು ಹೆಚ್ಚೆಚ್ಚು ಕವಿತೆ ಬರೆದಷ್ಟೂ ಸಮಾಜದ ಸಂವೇದನಾಶೀಲತೆ ಹೆಚ್ಚಬಹುದು. ಕನ್ನಡದ ಕವಯತ್ರಿಯರು ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ ಎಂಬುದಕ್ಕೇ ಈ ಆರು ಜವನ ಸಂಕಲನಗಳೇ ಸಾಕ್ಷಿಯಾಗಿವೆ.

–ಸವಿತಾ ನಾಗಭೂಷಣ

ಮುಂದಿನ (ಮಾರ್ಚ್) ಸಂಚಿಕೆ
ಮಹಿಳಾ ವಿಶೇಷ ಪುಟಗಳೊಂದಿಗೆ

ರಾಮಕೃಷ್ಣರು ಹೇಳಿದ ಕಥೆಗಳು

ಧರ್ಮ ವಿಚಾರ



ಆಧುನಿಕ ಭಾರತದ ಸಾಧು ಶ್ರೇಷ್ಠರಲ್ಲಿ ಒಬ್ಬರಾದ ರಾಮಕೃಷ್ಣ ಪರಮಹಂಸರು ಆಧುನಿಕ ಕಾಲಕ್ಕೆ ತಕ್ಕಂತೆ ಧರ್ಮವನ್ನು ವ್ಯಾಖ್ಯಾನಿಸಿ ಅದು ಹೊಕ್ಕಿದ್ದ ಮೌಢ್ಯಾಚಾರ ಮತ್ತು ನಂಬಿಕೆಗಳಿಂದ ಮುಕ್ತಗೊಳಿಸಿದವರು. ಎಲ್ಲ ಧರ್ಮಗಳನ್ನೂ ಅವುಗಳ ಮೂಲ ರೂಪದಲ್ಲಿ ಆಚರಿಸಿ ಎಲ್ಲ ಧರ್ಮಗಳ ಗುರಿಯೂ ಲೋಕದ ಭಯ-ಆತಂಕಗಳಿಂದ ಮನುಷ್ಯನನ್ನು ಮುಕ್ತಗೊಳಿಸುವುದೇ ಆಗಿದೆ ಎಂಬುದನ್ನು ಕಂಡುಕೊಂಡು ಧರ್ಮ ಸಮನ್ವಯವನ್ನು ಪ್ರತಿಪಾದಿಸಿದವರು. ಇದನ್ನು ಅವರು ತಮ್ಮಲ್ಲಿಗೆ ಬಂದವರಿಗೆ ಹಲವಾರು ಸ್ವಾರಸ್ಯಕರ ದೃಷ್ಟಾಂತ ಕತೆಗಳ ಮೂಲಕ ಜನರ ಹೃದಯಕ್ಕೆ ಮುಟ್ಟಿಸಿದವರು. ಫೆಬ್ರುವರಿ ಈ ಮಹಾ ಸಾಧು ಹುಟ್ಟಿದ ತಿಂಗಳು. ಅವರ ನೆನಪಿನಲ್ಲಿ ಅವರ ಇಂತಹ ಆಯ್ದ ನಾಲ್ಕು ದೃಷ್ಟಾಂತ ಕಥೆಗಳನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ನೀಡುತ್ತಿದ್ದೇವೆ-ಸಂ.

ಧರ್ಮ ಪಾಂಡಿತ್ಯವೂ, ಜ್ಞಾನೋದಯವೂ...

ಒಬ್ಬ ರಾಜ ಧರ್ಮ ವಿಚಾರಗಳಲ್ಲಿ ಮುಳುಗಿ ಹೋಗಿ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದೆ ತೊಳಲಾಡುತ್ತಿದ್ದ.. ಅದನ್ನು ತಿಳಿದು ಅವನ ಮಂತ್ರಿ ಓರ್ವ ಧರ್ಮ ಪಂಡಿತನನ್ನು ದಿನದ ಪಾಠಕ್ಕೆಷ್ಟು ಚಿನ್ನದ ವರಹವೆಂಬ ಕರಾರಿನ ಮೇಲೆ ಗೊತ್ತು ಮಾಡಿ ರಾಜನಿಗೆ ಧರ್ಮಬೋಧೆ ಮಾಡಲು ನೇಮಿಸಿದ. ಆ ಪಂಡಿತ ದಿನವೂ ಬೆಳಿಗ್ಗೆ ಅರಮನೆಗೆ ಬಂದು ರಾಜನಿಗೆ ಧರ್ಮಬೋಧೆ ಮಾಡಿ ವರಹ ಸ್ವೀಕರಿಸಿ ಹೋಗುತ್ತಿದ್ದ. ಆತನು ಒಂದೊಂದು ದಿನ ಒಂದೊಂದು ಧರ್ಮಗ್ರಂಥದಿಂದ ಮಂತ್ರ–ಶ್ಲೋಕಗಳನ್ನು ಉದ್ಧರಿಸಿ ಕೊನೆಗೆ ಅದರ ಸಾರಾಂಶವಾಗಿ 'ಜಗತ್ತು ಕ್ಷಣಿಕ, ಕ್ಷಣ ಭಂಗುರ... ಗೊತ್ತಾಯಿತೇ?' ಎಂದು ರಾಜನನ್ನು ಕೇಳುತ್ತಿದ್ದ. ಎಲ್ಲವನ್ನೂ ಕೇಳಿಸಿಕೊಂಡಾದ ಮೇಲೆ ರಾಜ ಪಂಡಿತನಿಗೆ 'ನಿಮಗೆ ಗೊತ್ತಾಯಿತೇ?' ಎಂದಿ ಮರು ಪ್ರಶ್ನೆ ಕೇಳುತ್ತಿದ್ದ. ಇದರಿಂದ ಪಂಡಿತನಿಗೆ ಆಶ್ಚರ್ಯವೂ, ಮುಜುಗರವೂ ಆಗುತ್ತಿತ್ತು. ಆತ ನಾನು ಎಲ್ಲ ಧರ್ಮಗ್ರಂಥಗಳ ಅಧ್ಯಯನ ಮಾಡಿ ಸತ್ಯ ಹೇಳುತ್ತಿದ್ದರೆ ಈ ರಾಜನೇ ನನಗೇ ಆ ಪ್ರಶ್ನೆಯನ್ನೇಕೆ ಕೇಳುತ್ತಿದ್ದಾನೆ ಎಂದು ಯೋಚಿಸಿ ಉತ್ತರ ಸಿಗದೆ ತೊಳಲಾಡುತ್ತಿದ್ದ.

ಹೀಗೇ, ಪ್ರತಿದಿನ ಪಂಡಿತನಿಂದ ಧರ್ಮೋಪದೇಶ ಮತ್ತು ಆ ರಾಜನಿಂದ ಅದೇ ಪ್ರಶ್ನೆ! ಕೆಲವು ತಿಂಗಳುಗಳು ಕಳೆದವು. ಪಂಡಿತ ಅರಮನೆಗೆ ಬರುವುದನ್ನು ನಿಲ್ಲಿಸಿದ. ರಾಜನೂ ವಿಚಾರಿಸಲೂ ಹೋಗಲಿಲ್ಲ. ಎಷ್ಟೋ ವರ್ಷಗಳ ನಂತರ ಒಮ್ಮೆ ರಾಜ ವನವಿಹಾರಕ್ಕೆಂದು ಕಾಡಿಗೆ ಹೋದಾಗ ಮರವೊಂದರ ಕೆಳಗೆ ಕಾಷಾಯ ವಸ್ತ್ರಧಾರಿಯಾಗಿ ಧ್ಯಾನ ಮಾಡುತ್ತಿದ್ದ ಒಬ್ಬ ಸಾಧುವನ್ನು ಕಂಡು ಆತ ತನ್ನ ಅರಮನೆಗೆ ಧರ್ಮಬೋಧೆಗೆ ಬರುತ್ತಿದ್ದ ಪಂಡಿತನೇ ಎಂದು ಗುರುತು ಹಿಡಿದ. ಆತನನ್ನು ಧರ್ಮಬೋಧೆ ವೃತ್ತಿಯನ್ನು ಬಿಟ್ಟು ಈ ಕಾಡಿಗೇಕೆ ಬಂದಿದ್ದೀರಿ? ಎಂದು ಕೇಳಿದ. ಆಗ ಆತ, ನಿಮ್ಮ ದಿನನಿತ್ಯದ ಪ್ರಶ್ನೆಯಿಂದ ನನಗೆ ಜ್ಞಾನೋದಯವಾಗಿ ಜಗತ್ತು ಕ್ಷಣಭಂಗುರವೆಂದು ತಿಳಿದು ಶಾಶ್ವತ ಸತ್ಯವನ್ನು ಅರಸಿ ಇಲ್ಲಿ ಬಂದಿದ್ದೇನೆ ಎಂದ. ರಾಜ ಈಗ ಆತನಿಗೆ ತಲೆಬಾಗಿ ವಂದಿಸಿದ.

ನಂಬರು ನೆಚ್ಚರು ಬರಿದೇ ಕರೆವರು!

ಒಬ್ಬ ಧರ್ಮಪಂಡಿತನ ಮನೆಗೆ ವರ್ತನೆಯ ಹಾಲು ಕೊಡಲು ಹಳ್ಳಿಯಿಂದ ಒಂದು ತೊರೆ ದಾಟಿ ಬರುತ್ತಿದ್ದ ಹುಡುಗಿಯೊಬ್ಬಳು ಆ ಮನೆಯಲ್ಲಿ ನಡೆಯುತ್ತಿದ್ದ ದೈವಶಾಸ್ತ್ರ ಸಂಬಂಧವಾದ ಚರ್ಚೆಗಳನ್ನು ಕಿವಿಗೆ ಹಾಕಿಕೊಂಡು ಹೋಗುತ್ತಿದ್ದಳು.' ಮಳೆಗಾಲದ ಒಂದು ದಿನ ಅವಳು ಸಕಾಲದಲ್ಲಿ ಹಾಲನ್ನು ತಂದುದನ್ನು ನೋಡಿ ಆಶ್ಚರ್ಯಗೊಂಡ ಪಂಡಿತರು ತುಂಬಿ ಹರಿಯುತ್ತಿದ್ದ ತೊರೆಯನ್ನು ದಾಟಿ ಹೇಗೆ ಬಂದಳೆಂದು ಕೇಳಿದರು. ಅದಕ್ಕೆ ಆಕೆ ನಿಮ್ಮ ಚರ್ಚೆಗಳನ್ನು ಕೇಳಿದ ಪರಿಣಾಮವಾಗಿ, ದೇವರನ್ನು ನೆನೆಯುತ್ತಾ ತೊರೆಯ ನೀರಿನ ಮೇಲೆ ನಡೆದುಬಂದು ಬಿಟ್ಟೆ ಎಂದಳು ಇದನ್ನು ಕೇಳಿದ ಪಂಡಿತರು, ಇಷ್ಟು ವರ್ಷ ಅಧ್ಯಯನ–ಚರ್ಚೆ ಮಾಡಿಯೂ ನನಗೆ ದೇವರು ಒಲಿದಿಲ್ಲ. ನಿನಗೆ ಹೇಗೆ ಒಲಿಯಲು ಸಾಧ್ಯ? ಸುಳ್ಳು ಹೇಳಬೇಡ ಎಂದು ಅವಳ ಮೇಲೆ ಹರಿ ಹಾಯ್ದರು.

ಮುಗ್ಧ ಹುಡುಗಿ ಅದಕ್ಕೆ, ;ಸ್ವಾಮೀ ಇನ್ನೂ ಮಳೆ ಸುರಿಯುತ್ತಿದೆ. ನೀವು ತೊರೆ ಬಳಿ ಬಂದು ಪರೀಕ್ಷೆ ಮಾಡಬಹುದು' ಎಂದು ಪಂಡಿತನನ್ನು ತುಂಬಿ ಹರಿಯುತ್ತಿದ್ದ ತೊರೆಯ ಬಳಿ ಕರೆದೊಯ್ದಳು. ಹುಡುಗಿ ದೇವರನ್ನು ನೆನೆದು ತೊರೆಯ ಮೇಲೆ ಕಾಲಿಟ್ಟು ಸರಾಗವಾಗಿ ಮುಂದೆ ನಡೆದಳು. ಪಂಡಿತರೂ ಶ್ಲೋಕ ಹೇಳಿ ನೀರಿನ ಮೇಲೆ ಕಾಲಿಟ್ಟು ಪಂಚೆ ನೆನೆದೀತೆಂದು ಅದನ್ನು ಮೇಲಕ್ಕೆತ್ತಿಕೊಂಡರು. ಆದರೆ ಅವರ ಕಾಲು ನೀರೊಳಕ್ಕೇ ಹೋಗಿ ಧೊಪ್ಪನೆ ಬಿದ್ದರು. ಅದನ್ನು ನೋಡಿ ಕನಿಕರಗೊಂಡ ಹುಡುಗಿ ಅವರಿಗೆ ಹೇಳಿದಳು; ನೀವು ದೇವರನ್ನು ನೆನೆಯುತ್ತೀರಿ, ಪಂಚೆಯನ್ನೂ ಮೇಲಕ್ಕೆತ್ತಿಕೊಳ್ಳುತ್ತೀರಿ! ಅಂದರೆ ನಿಮಗೆ ದೇವರಲ್ಲಿ ನಿಜವಾಗಿನಂಬಿಕೆ. ಇಲ್ಲ ಅದಕ್ಕೇ ಹೀಗಾಯ್ತು ಎಂದು ನಕ್ಕಳು!

ಎಲ್ಲರಲ್ಲೂ ಭಗವಂತನಿದ್ದಾನೆ ಎಂದರೆ....

ಒಬ್ಬ ಸನ್ಯಾಸಿ ಒಮ್ಮೆ ಕಾಡಿನಲ್ಲಿ ಹೋಗುತ್ತಿದ್ದಾಗ ಆನೆಯೊಂದು ದೂರದಲ್ಲಿ ನುಗ್ಗಿ ಬರುತ್ತಿದ್ದುದನ್ನೂ, ಆನೆಯ ಮೇಲೆ ಕೂತಿದ್ದ ಮಾವುತ 'ಓಡಿ ಹೋಗಿ! ಆನೆಗೆ ಮದವೇರಿದೆ!!' ಎಂದು ಕೂಗುತ್ತಿದ್ದುದನ್ನು ಕೇಳಿದರೂ ಅಲುಗಾಡದೆ ನಿಂತು ಪ್ರಾರ್ಥಿಸತೊಡಗಿದ. ಈತನ ಬಳಿಗೆ ಬಂದ ಆನೆ ಈತನನ್ನು ತನ್ನ ಸೊಂಡಿಲಿನಿಂದ ಎತ್ತಿ ಒಗೆದು ಹೋಯಿತು.

ಆನೆ ಹೋದ ನಂತರ ಜನ ಆತನನ್ನು ಉಪಚರಿಸಿ ಅವರ ಗುರುಗಳ ಕುಟೀರಕ್ಕೆ ಒಯ್ದು ಮುಟ್ಟಿಸಿದರು. ನೋವಿನಿಂದ ನರಳುತ್ತಿದ್ದ ಶಿಷ್ಯನನ್ನು ಗುರುಗಳು 'ಮಾವುತನ ಕೂಗನ್ನೂ ಲಕ್ಷಿಸದೆ ನೀನೇಕೆ ಮೂರ್ಖನಂತೆ ಅಲ್ಲಿಯೇ ನಿಂತೆ?' ಎಂದು ಕೇಳಿದರು. ಅದಕ್ಕೆ ಶಿಷ್ಯ ನರಳುತ್ತಲೇ,'ನೀವೇ ಹೇಳಿದ್ದಿರಲ್ಲ ಗುರುಗಳೇ, ಸಕಲ ಪ್ರಾಣಿಗಳಲ್ಲೂ ಭಗವಂತನಿದ್ದಾನೆ ಎಂದು? ಹಾಗಾಗಿ ಆನೆಯಲ್ಲಿದ್ದ ಭಗವಂತನನ್ನು ನಾನು ಪ್ರಾರ್ಥಿಸುತ್ತಾ ನಿಂತೆ' ಎಂದ. ತಲೆ ಚಚ್ಚಿಕೊಂಡ ಗುರುಗಳು ಸಕಲ ಪ್ರಾಣಿಗಳಲ್ಲೂ ಭಗವಂತನಿದ್ದಾನೆ ಎಂದರೆ ಆನೆಯ ಮೇಲೆ ಕೂತಿದ್ದ ಮಾವುತನಲ್ಲೂ ಭಗವಂತನಿದ್ದಾನೆ, ಅವನ ಮಾತು ಭಗವಂತನ ಎಚ್ಚರಿಕೆ ಎಂದು ನಿನಗೇಕೆ ಅರ್ಥವಾಗಲಿಲ್ಲ?' ಎಂದು ಕೇಳಿದರು. ಶಿಷ್ಯನಿಗೆ ಈಗ ಜ್ಞಾನೋದಯವಾಯಿತು!

ಲೋಕದಲ್ಲಿ ಹಾವಾಗಿ ಹುಟ್ಟಿದ ಬಳಿಕ

ದಾರಿಹೋಕರನ್ನೆಲ್ಲ ಭುಸುಗುಟ್ಟಿ, ಕಚ್ಚಿ ಜನರಿಗೆ ಉಪಟಳ ಕೊಡುತ್ತಿದ್ದ ಹಾವೊಂದಕ್ಕೆ ಒಂದು ದಿನ ಒಬ್ಬ ಸನ್ಯಾಸಿ, 'ಎಲ್ಲರಿಗೂ ತೊಂದರೆ ಕೊಟ್ಟು ಎಲ್ಲರ ಶಾಪಕ್ಕೆ ಏಕೆ ತುತ್ತಾಗುತ್ತೀಯಾ?' ಎಂದು ಅನುನಯದಿಂದ ಧರ್ಮೋಪದೇಶ ಮಾಡಿ ಅದನ್ನು ಸಾತ್ವಿಕಗೊಳಿಸಿದ. ಆದರೆ ನಂತರದ ದಿನಗಳಲ್ಲಿ ಕಚ್ಚದೆ ಸುಮ್ಮನೇ ಓಡಾಡಿಕೊಂಡಿದ್ದದ್ದ ಹಾವನ್ನು ಜನ ಹಳೆಯ ಸಿಟ್ಟಿನಿಂದ ಬೆಂಬತ್ತಿ ಹೊಡೆದು ಬಸವಳಿಯುವಂತೆ ಮಾಡಿದರು. ಕೆಲ ದಿನಗಳ ನಂತರ ಆ ಹಾದಿಯಲ್ಲಿ ಬಂದ ಸಾಧು ಆ ಹಾವನ್ನು ನೋಡಿ, 'ಏಕೆ ಹೀಗೆ ಸೊರಗಿ ಹೋಗಿದ್ದೀಯಾ?' ಎಂದು ಆತಂಕದಿಂದ ಕೇಳಲು ಆ ಹಾವು, 'ನಿಮ್ಮ ಧರ್ಮೋಪದೇಶ ಕೇಳಿದ್ದರ ಫಲವಾಗಿ ಈ ಗತಿ ಬಂದಿದೆ...' ಎನ್ನಲು ಆ ಸಾಧು ಹೇಳಿದ : 'ನಿನಗೆ ಕಚ್ಚಬೇಡ ಎಂದು ಹೇಳಿದ್ದೆನಷ್ಟೆ ಭುಸುಗುಡಬೇಡ ಎಂದು ಎಲ್ಲಿ ಹೇಳಿದ್ದೆ? ಈ ಲೋಕದಲ್ಲಿ ಹಾವಾಗಿ ಹುಟ್ಟಿ ಭುಸುಗುಡದೆ ಬಾಳಲಾಗದು' ಎಂದು ಅದಕ್ಕೆ ಲೋಕ ಧರ್ಮವನ್ನು ಉಪದೇಶಿಸಿದ. ನಂತರ ಹಾವು ತನ್ನ ಸ್ವಧರ್ಮ ಪಾಲಿಸಿ ಬದುಕಿಕೊಂಡಿತು.

ಮಾಯೆಯ ಮುಸುಕು ಯಾರನ್ನೂ ಬಿಡದು!

ಹಂದಿ ರೂಪ ತಾಳಿ ಹಿರಣ್ಯಾಕ್ಷನನ್ನು ಕೊಲ್ಲಲು ಭೂಮಿಗೆ ಬಂದ ವಿಷ್ಣು ತನ್ನ ಕೆಲಸದ ನಂತರ ಭೂಮಿಯ ಮೇಲೇ ಸಂಸಾರ ಹೂಡಿ ನೆಲೆಸಿಬಿಟ್ಟ! ಇದರಿಂದ ದೇವಲೋಕದಲ್ಲಿ ಅಲ್ಲೋಲಕಲ್ಲೋಲವಾಗಿ ದೇವತೆಗಳೆಲ್ಲ ಶಿವನ ಬಳಿ ಬಂದು ವಿಷ್ಣುವನ್ನು ಕರೆತರಲು ಪ್ರಾರ್ಥಿಸಿದರು. ಶಿವ ಭೂಮಿಗೆ ಬಂದು ನೋಡುತ್ತಾನೆ, ಹಂದಿರೂಪದ ವಿಷ್ಣು ಗಟಾರವೊಂದರಲ್ಲಿ ತನ್ನ ಸುತ್ತ ನೆರೆದಿದ್ದ ಮರಿಗಳಿಗೆ ಹಾಲು ಕುಡಿಸುತ್ತಾ ಸುಖವಾಗಿ ಮಲಗಿದೆ! ಶಿವ ವಿಷ್ಣುವನ್ನು 'ಏನಿದು? ನಿನ್ನ ಕೆಲಸ ಮುಗಿದ ಮೇಲೇ ನಿನ್ನ ಲೋಕಕ್ಕೆ ಏಕೆ ಮರಳಲಿಲ್ಲ?' ಎಂದು ಕೇಳಿದ. ಅದಕ್ಕೆ ಆ ಹಂದಿ ಇಲ್ಲಿ ನೋಡು! ಈ ಸುಖವನ್ನು ಬಿಟ್ಟು ನಾನೇಕೆ ಬರಲಿ, ಹಿಷ್ಷೀ!' ಎಂದು ನಕ್ಕಿತು. ಶಿವ ತನ್ನ ತ್ರಿಶೂಲದಿಂದ ಅದನ್ನು ಚುಚ್ಚಿ ಕೊಂದು ವಿಷ್ಣುವನ್ನು ದೇವಲೋಕಕ್ಕೆ ಮರಳಿ ಕರೆತಂದ!

ಏಳನೇ ವರ್ಷಕ್ಕೆ
ಕಾಲಿಡುತ್ತಿರುವ
ಹೊಸ ಮನುಷ್ಯ' ಪತ್ರಿಕೆಗೆ




ಅವಿರತ ಪ್ರತಿಷ್ಠಾನ
#೭೩, ೩ನೇ ಘಟ್ಟ,
೨ ನೇ ಮುಖ್ಯ ರಸ್ತೆ, ವಿನಾಯಕ ನಗರ
ವಿಜಯನಗರ, ಬೆಂಗಳೂರು - ೫೬೦ ೦೪೦

ಏಳನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
ಹೊಸ ಮನುಷ್ಯ' ಪತ್ರಿಕೆಗೆ ಶುಭಾಶಯಗಳು



ವಿವೇಕ ಬ್ಯೂರೋ,
(ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ)
. ಕೆ. ಆರ್ ಪುರಂ, ಹಾಸನ-೫೭೩ ೨೦೧
ಮೊಬೈಲ್ : ೯೪೪೮೮೬೭೦೮೭

ತಿಂಗಳ ಸಾಲುಗಳು...



ಸ್ವಚ್ಛವಾದ ಆತ್ಮಸಾಕ್ಷಿಗಿಂತ ಮೆದುವಾದ ತಲೆದಿಂಬು ಇನ್ನೊಂದಿಲ್ಲ.

-ಒಂದು ಫ್ರೆಂಚ್ ಗಾದೆ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204(Karnataka)